BUDGET ESTIMATES FOR 1967-68. DEMAND FOR GRANTS
(*Vote on Account*)—Debate—(*contd.*)

ಶ್ರೀ ಎಂ. ಮಲ್ಲಪ್ಪ (ಬೀರೂರು).—ಸನ್ಮಾನ್ಯ ಸಭಾಧ್ಯಕ್ಷರೇ : ನೆನ್ನೆಯ ದಿವಸ ನಾನು ಆಹಾರ ಸ್ವಾವಲಂಬನೆಯ ವಿಚಾರವಾಗಿ ಮಾತನಾಡುತ್ತಿದ್ದೆನು. ದೇಶವು ಆಹಾರಸ್ವಾವಲಂಬನೆಯನ್ನು ಗಳಿಸಬೇಕಾದರೆ ದೇಶದಲ್ಲಿ ಹೆಚ್ಚು ಆಹಾರ ಧಾನ್ಯಗಳು ಉತ್ಪನ್ನವಾಗಬೇಕು ಮತ್ತು ದೇಶದಲ್ಲಿ ಬಚ್ಚಿಟ್ಟಿರತಕ್ಕ ಆಹಾರ ಧಾನ್ಯಗಳನ್ನು ಬಯಲಿಗೆ ತಂದು ಅದನ್ನು ಬಳಕೆಗಾರರಿಗೆ ಸಿಗುವಂತೆ ಮಾಡಬೇಕು. ಈ ಎರಡು ವಿಚಾರಗಳಲ್ಲಿ ನಾನು ಮೊದಲು ಹೇಳಿದಂಥ ಹೆಚ್ಚು ಆಹಾರವನ್ನು ಬೆಳೆಯತಕ್ಕ ವಿಚಾರದಲ್ಲಿ ನಮ್ಮ ವ್ಯವಸಾಯದ ಇಲಾಖೆಯು ಬಹಳ ದಕ್ಷತೆಯಿಂದ ಕೆಲಸ ಮಾಡಬೇಕು ಎಂಬುದನ್ನು ಎಲ್ಲರೂ ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ಸಂಬಂಧದಲ್ಲಿ ಒಂದು ಬಹಳ ಪ್ರಾಮುಖ್ಯವಾದ ವಿಚಾರವೇನೆಂದರೆ : ದೇಶದಲ್ಲಿ ಹೆಚ್ಚು ಆಹಾರ ಉತ್ಪನ್ನವಾಗಬೇಕಾದರೆ ವ್ಯವಸಾಯ ಇಲಾಖೆಯ ಅಧಿಕಾರಿಗಳೂ ಮತ್ತು ಹೊಲದಲ್ಲಿ ಕಾಳನ್ನು ಬೆಳೆಯತಕ್ಕ ಜನರೂ ಈ ಇಬ್ಬರೂ ತಮ್ಮ ವರ್ತನೆಯಲ್ಲಿ ಒಂದುಗೂಡಿಕೊಂಡು ಹೋಗುವಂತಾಗಬೇಕು. ಹಾಗೂ ಸರ್ಕಾರದವರಿಂದ ರೈತರಿಗೆ ದೊರೆಯಬೇಕಾದ ಸೌಕರ್ಯ ಸೌಲಭ್ಯಗಳು ಸಕಾಲಕ್ಕೆ ಅವರಿಗೆ ಉಪಯೋಗಕ್ಕೆ ಸಿಗುವಂತಾಗಬೇಕು, ಇದು ವ್ಯವಸಾಯ ಇಲಾಖೆಯ ಅದ್ಯ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ವ್ಯವಸಾಯ ಇಲಾಖೆಯವರು ಇರತಕ್ಕದ್ದು ರೈತರಿಗೆ ಸಹಾಯ ಮಾಡುವುದಕ್ಕಾಗೇ ಎಂಬ ಮನೋಭಾವ ಅವರಲ್ಲಿ ಬೆಳೆಯಬೇಕು. ಇದನ್ನು ಇಲ್ಲಿಯವರೆಗೂ ಇವರು ಅರಿಯದಿರುವುದರಿಂದ ದೇಶದಲ್ಲಿ ಆಹಾರ ಧಾನ್ಯಗಳ ಉತ್ಪನ್ನ ದಿನ ದಿನಕ್ಕೂ ಕಡಮೆಯಾಗುತ್ತಿದೆ. ಆದರೆ ಈ ದಿವಸ ಈ ಇಲಾಖೆಯು ಮುಖ್ಯ ಮಂತ್ರಿಗಳ ಕೈಗೆ ಬಂದಿದೆ. ಆದುದರಿಂದ ಅವರು ಇದರಲ್ಲಿ ಕೆಲವು ದೊಡ್ಡ ಬಾಬುಗಳನ್ನು ಕೈ ಬಿಟ್ಟರೂ ಚಿಂತೆಯಿಲ್ಲ, ದೇಶದಲ್ಲಿ ಬೇಗ ಹೆಚ್ಚು ಆಹಾರವನ್ನು ಉತ್ಪತ್ತಿ ಮಾಡತಕ್ಕ ಬಾಬುಗಳಿಗೆ ಹೆಚ್ಚಿನ ನಿಗವನ್ನು ಕೊಡುತ್ತಾರೆಂದು ನಂಬಿದ್ದೇನೆ. ಇನ್ನು ರೈತರಿಗೆ ಅಗತ್ಯವಾಗಿ ಬೇಕಾದ ಟ್ರಾಕ್ಟರ್ ಮತ್ತು ಬುಲ್‌ಡೋಸರುಗಳ ವಿಚಾರಕ್ಕೆ ಬಂದರೆ ಇವುಗಳಿಂದ ನಿಜವಾಗಿಯೂ ರೈತಾಪಿ ಜನರಿಗೇನೂ ಉಪಯೋಗವಾಗುತ್ತಿಲ್ಲ. ಇದಕ್ಕೆ ಕಾರಣ ವ್ಯವಸಾಯ ಇಲಾಖೆಯಲ್ಲಿರತಕ್ಕ ಎಲ್ಲಾ ಟ್ರಾಕ್ಟರ್ ಮತ್ತು ಬುಲ್‌ಡೋಜರುಗಳಿಗೆ ಪಾರ್ಶ್ವ ವಾಯು ತಗುಲಿದೆ. ನಿಜವಾಗಿಯೂ ಅವುಗಳಿಂದ ಏನೇನೂ ರೈತರಿಗೆ ಸಹಾಯವಾಗುತ್ತಿಲ್ಲ. ನಾನು ನನ್ನ ಒಂದು ಅನುಭವವನ್ನೇ ಇಲ್ಲಿ ಹೇಳಬೇಕೆಂದರೆ, ಇಲ್ಲಿಗೆ ಎರಡು ವರ್ಷಗಳ ಹಿಂದೆ ವ್ಯವಸಾಯದ ಇಲಾಖೆಗೆ ಹೋಗಿ ಟ್ರಾಕ್ಟರನ್ನು ಕೇಳಿದೆನು. ಅದಕ್ಕೆ 6 ತಿಂಗಳಗಟ್ಟಲೆ ಪ್ರಯತ್ನ ನಡೆಸಿದೆ. ಒಂದು ದಿವಸ ನಾನು ವ್ಯವಸಾಯ ಇಲಾಖೆಯ ಅಧಿಕಾರಿಗಳನ್ನು ಕೇಳಲು ಹೋದಾಗ ಇನ್ನೂ ಈಗತಾನೆ ಟ್ರಾಕ್ಟರನ್ನು ನಿಮ್ಮ ಊರಿಗೆ ಕಳುಹಿಸಿದೆವು, ನೀವು ಏತಕ್ಕೆ ಬಂದಿರಿ ಎಂದರು. ನಾನು ಊರಿಗೆ ಬಂದರೂ ಅವು ಬರಲೇ ಇಲ್ಲ. ಹೀಗೆ ನಮ್ಮ ಜಿಲ್ಲೆಯಲ್ಲಿ ಹೆಸರಿಗೆ ಮಾತ್ರ 2 ಟ್ರಾಕ್ಟರುಗಳಿವೆ ಎಂದು ಹೇಳಬಹುದೇ ವಿನಾ ಅವುಗಳಿಂದ ಜನರಿಗೇನೂ ಉಪಯೋಗವಾಗುತ್ತಿಲ್ಲ. ಖಾಸಗೀ ಜನರಲ್ಲೂ ಇವು ಇರುವುದಿಲ್ಲ. ಒಂದುವೇಳೆ ಯಾರಾದರೂ ಖಾಸಗೀ ಜನರು ಮುಂದೆ ಬಂದು ಅವುಗಳನ್ನು ಕೊಳ್ಳುವುದಕ್ಕೆ ಸಹಾಯ ಬೇಡಿದರೆ ಅದಕ್ಕೂ ಸರ್ಕಾರದವರು ಸಹಾಯ ಮಾಡುವುದಿಲ್ಲ. ಅಂತೂ ಈ ಇಲಾಖೆಯು ರೈತರೊಂದಿಗೆ ನಿಕಟ ಸಂಬಂಧವನ್ನು ಇಟ್ಟುಕೊಂಡು ಕೆಲಸ ಮಾಡುವಂತೆ ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ. ದೇಶದಲ್ಲಿ ಇಷ್ಟಗಳಿಲ್ಲದೆ ಈ ದಿವಸ ರೈತರ ಕಷ್ಟವನ್ನು ಹೇಳತೀರದಾಗಿದೆ. ಅನೇಕ ಗ್ರಾಮಗಳಲ್ಲಿ ಜನರಿಗೆ ಕುಡಿಯುವುದಕ್ಕೆ ನೀರಿಲ್ಲ, ತಿರುಗುವುದಕ್ಕೆ ರಸ್ತೆ ಸಾರಿಗೆಗಳಿಲ್ಲ. ರೈತರು ತಾವು ಬೆಳೆದ ದವಸ ಧಾನ್ಯಗಳನ್ನು ಜಮೀನಿನಿಂದ ಮನೆಗೂ ಮತ್ತು ಊರಿಂದ ಊರಿಗೂ ಸಾಗಿಸುವುದಕ್ಕೆ ರಸ್ತೆ ಸೌಕರ್ಯಗಳಿಲ್ಲ. ಜನರಿಗೆ ಹೀಗೆ ನಾನಾ ತೊಂದರೆಗಳಿವೆ. ಆದ್ದರಿಂದ ಪಿ. ಡಬ್ಲ್ಯು. ಡಿ. ಯವರು ಒಂದು ಗೊತ್ತಾದ ಮೊಬಲಗನ್ನು ಈ ಇರಿಗೇಷನ್ ರಸ್ತೆಗಳಿಗಾಗಿ ಮೀಸಲಾಗಿಡಬೇಕೆಂದು ಹೇಳುತ್ತೇನೆ.

ಇಲ್ಲವಾದರೆ ಜನರಿಗೆ ಬಹಳ ದುಸ್ಥಿತಿಯಾಗುವುದು. ಆದರೆ ಈ ಬಗ್ಗೆ ಪಿ. ಡಬ್ಲ್ಯು. ಡಿ. ಯವರು ಚೆನ್ನಾಗಿ ಕೆಲಸ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಇನ್ನು ಸಣ್ಣ ಪುಟ್ಟ ಕೆರೆಗಳ ವಿಚಾರಕ್ಕೆ ಬಂದರೆ, ಕೆಲಸ ಬಹಳ ನಿಧಾನ ಆಗುತ್ತಿದೆಯೆಂದು ಹೇಳಬೇಕಾಗಿದೆ. ಇಲಾಖೆಯವರನ್ನು ಕೇಳಿದರೆ ಒರಿಜಿನಲ್ ವರ್ಕ್ಸ್‌ಗಳನ್ನು ಮಂಜೂರು ಮಾಡುವುದಕ್ಕೆ ನಮಗೆ ಅಧಿಕಾರವಿಲ್ಲ ಎಂದು ಹೇಳುತ್ತಿದ್ದಾರೆ. ಈ ಹಿಂದೆ ಸಣ್ಣ ಪುಟ್ಟ ಕೆರೆಗಳನ್ನು ಅಂದರೆ 20 ಸಾವಿರ ರೂಪಾಯಿಗಳ ಅಂದಾಜಿನಲ್ಲಿ ಬರತಕ್ಕ ಕೆರೆಯ ಕೆಲಸಗಳನ್ನು ಎಗ್ಜಿಕ್ಯುಟೀವ್ ಇಂಜಿನಿಯರುಗಳೇ ಮಂಜೂರು ಮಾಡುತ್ತಿದ್ದರು. ಆದರೆ ಈ ದಿವಸ ಎಲ್ಲಾ ಕೆಲಸಗಳೂ ಸರ್ಕಾರದವರಿಂದಲೇ ಮಂಜೂರಾಗಬೇಕೆಂದರೆ ಕೆಲಸಗಳೆಷ್ಟು ನಿಧಾನವಾಗುತ್ತವೆ ಎಂಬುದನ್ನು ನಾನು ಪುನಃ ಒತ್ತಿ ಹೇಳಬೇಕಾಗಿಲ್ಲ. ಇದರಿಂದ ದೇಶದ ಪ್ರಗತಿಗೆ ಕುಂದಕ ಬಂದೇ ಬರುವುದಲ್ಲದೆ ಸರ್ಕಾರಕ್ಕೂ ಕೆಟ್ಟ ಹೆಸರು ತಪ್ಪುವುದಿಲ್ಲ. ಇದಕ್ಕೆ ಅವಕಾಶವಿಲ್ಲದಂತೆ ಸರ್ಕಾರದವರು ಕೆಲಸಗಳನ್ನು ನಡೆಸಬೇಕೆಂದು ನಾನು ಸೂಚನೆ ಮಾಡುತ್ತೇನೆ. ಇನ್ನು ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಲೆಕ್ಕ ಪತ್ರಗಳ ತನಿಖೆಗಾಗಿ ಒಂದು ಆಡಿಟ್ ಇಲಾಖೆ ಇರುತ್ತದೆ. ಈ ಇಲಾಖೆಯನ್ನು ಸ್ಟೇಟ್ ಅಕೌಂಟ್ಸ್ ಇಲಾಖೆಯ ಅಧಿಕಾರಕ್ಕೆ ಒಳಪಡಿಸಬೇಕೆಂದು, ಅದಕ್ಕೆ ಅಧೀನವಾಗಿ ಇದು ಕೆಲಸ ಮಾಡಬೇಕೆಂದು ಒಂದು ಆಜ್ಞೆಯಾಗಿದೆ. ಆ ಆರ್ಡರು 1964ರಲ್ಲೇ ಆಯಿತು. ಆದರೆ ಅದನ್ನಿನ್ನೂ ಜಾರಿಗೆ ಕೊಟ್ಟಿಲ. ಪಿ.ಡಬ್ಲ್ಯು.ಡಿ.ನವರೇ ಅದನ್ನಿನ್ನೂ ತಮ್ಮ ಸ್ವಾಧೀನದಲ್ಲೇ ಇಟ್ಟುಕೊಂಡಿದ್ದಾರೆ. ಇದರಿಂದ ದಕ್ಷತೆಗೆ ಕುಂದುಂಟಾಗಿದೆ. ಹಿಂದೆ ಈ ಇಲಾಖೆಯಿಂದ ಕೈ ಸುಟ್ಟುಕೊಂಡಿದ್ದೇವೆಂದು ಇವರು ಹೇಳುತ್ತಿದ್ದುದರಿಂದ ಈಗಲಾದರೂ ಇದನ್ನು ಆ ಸ್ಟೇಟ್ ಅಕೌಂಟ್ಸ್ ಇಲಾಖೆಗೆ ಕೂಡಲೆ ವರ್ಗಾಯಿಸಬೇಕೆಂದು ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಚಾರಕ್ಕೆ ಬಂದರೆ, ಕೆಲವು ಕಡೆ ಶಾಲೆಗಳ ಸಂಖ್ಯೆ ಏನೋ ಹೆಚ್ಚಿದೆ. ಆದರೆ ಅಲ್ಲಿ ಪರಿಣತರಾದ ಅಧ್ಯಾಪಕರಿಲ್ಲ, ಅಧ್ಯಾಪಕರು ಇರುವ ಕಡೆ ಶಾಲೆಗಳಿಲ್ಲ. ಇವೆರಡೂ ಇರುವ ಕಡೆ ಸಲಕರಣೆಗಳು ಇರುವುದಿಲ್ಲ. ಹೀಗಾಗಿ ಹಿಂದೆ ಇದ್ದ ವಿದ್ಯಾಭ್ಯಾಸಕ್ಕೂ ಇಂದಿನ ವಿದ್ಯಾಭ್ಯಾಸಕ್ಕೂ ಬಹಳ ತಾರತಮ್ಯ ಉಂಟಾಗಿದೆ. ವಿದ್ಯಾಭ್ಯಾಸದಲ್ಲಿ ದಿನ ದಿನಕ್ಕೂ ದಕ್ಷತೆ ಕುಗ್ಗುತ್ತಿದೆ; ಇಳಿಮುಖವಾಗುತ್ತಿದೆ ಎಂಬ ಕೂಗು ಎಲ್ಲೆಲ್ಲಿಯೂ ಕೇಳಿ ಬರುತ್ತಿದೆ. ಆದುದರಿಂದ ಈ ಎಲ್ಲಾ ವಿಚಾರಗಳ ಕಡೆಗೆ ಸರ್ಕಾರದವರು ಕೂಡಲೆ ಸೂಕ್ತ ಗಮನ ಕೊಡಬೇಕೆಂದು ಹೇಳಬಯಸುತ್ತೇನೆ. ಇನ್ನು ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ಕಾನೂನನ್ನೇನೋ ಮಾಡಿದ್ದಾರೆ. ಅದು ಪುಸ್ತಕದಲ್ಲಿದೆ. ದೇಶದಲ್ಲಿ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ಕೊಡಲಾಗಿದೆ. ದೇಶದಲ್ಲಿರತಕ್ಕ ಬಡಬಗ್ಗರ ಹಾಗೂ ಅವಿದ್ಯಾವಂತ ಜನರಿಗೆ ಉಪಕಾರ ಮಾಡಲು ಇದನ್ನು ತಂದಿದ್ದಾರೆ. ಉದ್ದೇಶವೇನೋ ಬಹಳ ಒಳ್ಳೆಯದು. ಈ ದಿವಸ ಜನರು ಅಜ್ಞಾನಿಗಳಾಗಿ ತಮ್ಮ ಬಡತನದ ಬೇಗೆಯಿಂದ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಲಾರದೆ ಅವರು ಬಹಳ ಕಷ್ಟಪರಿಸ್ಥಿತಿಯಲ್ಲಿದ್ದಾರೆ. ಅಂಥವರ ಬಗೆ ಸರ್ಕಾರದವರು ಹೆಚ್ಚಿನ ನಿಗಾಗೊಡಬೇಕೆಂದು ಹೇಳುತ್ತೇನೆ. ಇನ್ನು ದೇಶದಲ್ಲಿ ವಿಧ್ಯಾಮಟ್ಟ ಇಳಿಯುತ್ತಿರುವುದಕ್ಕೆ ನಮ್ಮ ಪಠ್ಯ ಪುಸ್ತಕಗಳೂ ಬಹಳ ಮಟ್ಟಿಗೆ ಕಾರಣ. ನಾವು ಹಿಂದೆ ಓದುತ್ತಿದ್ದ ಕಾಲದಲ್ಲಿ ಇದ್ದ ಚ. ವಾಸುದೇವಯ್ಯನವರ ಕನ್ನಡ ಬಾಲಬೋಧೆಗೂ ಈಗ ಇರತಕ್ಕ ಬಾಲಬೋಧೆಗಳಿಗೂ ಬಹಳ ವ್ಯತ್ಯಾಸವಿದೆ. ಇದಕ್ಕೆ ಸರ್ಕಾರದವರು ಗಮನ ಕೊಡದೆ ಇರುವುದರಿಂದ ವಿಧ್ಯಾಮಟ್ಟವು ಕೆಳಕ್ಕೆ ಇಳಿಯುವಂತಾಗಿದೆ. ಇದರಲ್ಲಿ ಯಾವತ್ತೂ ಸರ್ಕಾರದವರು ರಾಜಕೀಯವನ್ನು ಬೆರೆಸಬಾರದು. ವಿಧ್ಯಾಭ್ಯಾಸದಲ್ಲಿ ರಾಜಕೀಯ ಬೆರೆತರೆ ವಿದ್ಯೆ ಕುಂಠಿತವಾಗುತ್ತದೆ. ಹಾಗೆ ಮಾಡದೆ ಜನರಿಗೆ ಉತ್ಕೃಷ್ಟವಾದ ವಿದ್ಯೆ ಲಭಿಸುವಂತೆ ಮಾಡಬೇಕೆಂದು ಹೇಳುತ್ತಿದ್ದೇನೆ. ಇನ್ನು ಪಾಠಶಾಲೆಗಳನ್ನು ತೆರೆಯತಕ್ಕ ವಿಚಾರದಲ್ಲೂ ಸಹಾ ಎಲ್ಲರಿಗೂ ಸಮಾನಾವಕಾಶವನ್ನು ಸರ್ಕಾರದವರು ಕೊಡಬೇಕಾದ್ದು ನ್ಯಾಯ. ತಮಗೆ ಬೇಕಾದವರಿಗೆ ಕೊಟ್ಟು ಬೇಡಾದವರಿಗೆ ಅಡ್ಡಿ ಮಾಡುವುದರಿಂದ ಮುಂದಕ್ಕೆ ಬಹಳ ತೊಂದರೆಗಳಾಗುತ್ತವೆ.

(ಶ್ರೀ ಎಂ. ಮಲ್ಲಪ್ಪ)

ಇನ್ನು ರಾಜ್ಯದಲ್ಲಿ ವೈದ್ಯಕೀಯ ಸೌಲಭ್ಯಗಳನ್ನೇನೋ ಒದಗಿಸಿದ್ದಾರೆ. ಆದರೆ ಈ ಔಷಧಿಗಳ ಬಗ್ಗೆ ಜನರಲ್ ಆಸ್ಪತ್ರೆಗಳಿಗೆ ಕೊಡುತ್ತಿರುವ ಹಣ ಏತಕ್ಕೂ ಸಾಲದು. ಇದರಿಂದ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರಿಗೆ ಬಹಳ ಅನಾನುಕೂಲವಾಗುತ್ತಿದೆ. ಈಗ್ಗೆ 10 ವರ್ಷಗಳ ಹಿಂದೆ ಎಷ್ಟು ಹಣವನ್ನು ಈ ಬಾಬಿಗೆ ಕೊಡಲಾಗುತ್ತಿತ್ತೋ ಅಷ್ಟನ್ನೇ ಈಗಲೂ ಕೊಡುತ್ತಿದ್ದಾರೆ. ಇದರಿಂದ ಬಹಳ ಕಷ್ಟವಾಗಿದೆ. ಇದನ್ನು ಕೂಡಲೆ ರಿವೈಜ್ ಮಾಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri H. SIDDAVEERAPPA.—Sir, I am conscious of the fact that we are only dealing with Vote on Account and knowing the limitations that naturally arise on a discussion of this nature, I would like to confine myself to some of the salient points I would like to urge.

In the first place I should suggest that these votes on account should be confined for a lesser period than 4 months because such an objection is raised by the Opposition even in the Mother of Parliament because the fear of the Opposition is that by taking a vote on account for a period of four months the treasury Benches may put off the evil day and try to postpone the session by a period longer than the one to which they can stretch it. I, therefore, feel that they would have done well in asking for a vote on account only for a shorter period than four months.

With this preface I should like to take the speech of the Finance Minister and refer to the salient features he has mentioned there in. The first one is at page 2 of his speech wherein he has said. "We have abundant natural resources, a vigorous peasantry, political stability, leadership of high order, and if all these factors are used skilfuly, the pace of progress is bound to be faster." I would like to agree with him on two points, namely, that there are abundant natural resources and a vigorous peasantry. With regard to the last two points, I beg to differ from him. I do not believe there is political stability in the State.

Mr. SPEAKER.—Is there no leadership of a high order?

Sri H. SIDDAVEERAPPA.—I have got my own doubts.

Mr. SPEAKER—It is not said leadership of any party.

Sri H. SIDDAVEERAPPA.—Leadership of high order is usually associated with the leadership of the ruling party. Then the last sentence of his speech runs thus: "I appeal to all Hon'ble Members and seek their hearty Co-operation with an assurance that all constructive criticisms will be taken into consideration by Government." He also says "To look after the welfare of the people is as much the privileged right of the Opposition as the treasury benches. Whatever may be the differences between us, our common objective of working towards the welfare of the State should unite us in the common effort." Nice platitudes indeed. How I wish they are translated into action and that what they profess is really practised in our day to day working of the administration in this State. May I also mention that I have heard it

mentioned several times by the members of the Treasury Benches "we are now here again, the fever of the elections is still there; it has not yet subsided and so if they are vehement in their opposition we can understand." That was that they said. But may I say, Sir, that the fever of retaliation is still there not in one constituency but in all the constituencies where the Congress is defeated. I am not making any generalisation. If the Leader of the House wants I am prepared to place concrete instances before him. Let him understand and let us also understand that he is Leader of the 2 crores and odd population of the State today and let him not confine himself to only those areas that have sent Congressmen to represent those areas in this House?

Sri S. NIJALINGAPPA.—May I ask my friend to come and tell me if there is any such thing. He has not done so, he may do it now.

Sri H. SIDDAVEERAPPA.—We have heard and I mentioned it even the other day to the Minister for Food that even in the matter of food this thing has come up. I have letters to that effect and I am prepared to prove it if he wants. I am also prepared to produce those people before him. When the question of taking levy comes, the Officers go to areas which have returned non-congressmen and tell the people: "You must give so much" and make a heavy demand on them and take away whatever they have because they have not voted for the Congress. I am making this allegation. When I make an allegation or whatever you may call it, I am prepared to substantiate it. Are you prepared to accept the challenge?

Sri B. D. JATTI (Minister for Food and Civil Supplies).—We are quite prepared to accept the challenge. If the Hon'ble Member is prepared to pass on the records through the Speaker we are prepared to accept the challenge and also enquire into it.

Sri H. SIDDAVEERAPPA.—When the poor villager goes there, who are the Officers present? The Tahsildar and the other Officers of a lower rank and these Officers terrorise the people. I have heard it said from one constituency by a friend of mine that after the elections there is again tyranny and the police are harassing the people in the area. The harassment is mounting up day by day. Today even on the food front we hear alarming reports emanating from Delhi. With regard to the financial front, the position is far from satisfactory.

Sri S. NIJALINGAPPA.—May I intervene, Sir? My friend Mr. Siddaveerappa said that the Police Officers are misusing their powers. I have also heard complaints that one or two people who have been elected have threatened the Inspector of Police, but unless I make a study of the actual facts, unless I satisfy myself about the correctness of it, I do not want to mention it. Therefore, I request the Hon'ble Member to satisfy himself about the genuineness of the complaint he is making. He is a lawyer and he know what could be proved and what could not be proved. Let him approach the concerned Minister and he will enquire into it and if any relief is due it will be given.

Sri H. SIDDAVEERAPPA.—I hope so. The other day it was said that in Kanakapura there was a regular fight going on arising out of this very same question and it is continuing even now. There are several instances like that. If the Leader of the House wants them to be catalogued, we are prepared to do so provided we have an assurance that whatever is brought to their notice will be attended to and relief given.

With regard to the administration that is going on in this country today, I would like to mention this. Here I would like to refer to a sentence from the report of the Gorwala Committee:

> "Governmental and administrative efficiency is, as you know even more a matter of morale than of technique, and the morale of an administration cannot be sustained if a dark cloud of suspicion is allowed to continue to overhand it. For morale to improve, the cloud must be dissipated. This can only be done by full and proper investigation, and by proper action following on the investigation."

What is the position today? Leave alone the 90 Members sitting on the Opposition on this side, In the country today there is a cloud cast. I am not speaking about efficiency. That is a different matter, but there is a cloud cast on the affairs of that sad and sordid story of Sharavathy. We have heard it said by the Leader of the House, "I hope this will be the last time it is referred to here." I would like to tell him and to appeal to him that he must give a quietus to this sordid story by conducting an enquiry and showing the country that what is stated on this side is not true. Even as far back as 1963 to one interpollation that was raised in this House it was mentioned to question No. 1092 on 23rd December 1963 whether the Chief Minister has promised to make an enquiry into the Sharavathy affairs, the Chief Minister said 'Yes'. Now, I do not know as when the enquiry was held, whether any enquiry was held, and if an enquiry was held at least in order to give a quietus to the various complaints, loud complaints and bitter complaints are being made what was the report of the enquiry and whether a report of the enquiry is placed before the House. Otherwise what happens is this. One side is alleging one thing and the other side is alleging another thing and the country outside the House will get flabbergasted because they do no know which side is correct and which side is not correct. Whoever may be at fault, this side or that side. We are not bothered about it. Whoever may be responsible for the sorry state of affairs, at least an enquiry must be conducted and a quietus given so that the morale of the country is kept up.

2-30 P.M.

Otherwise this kind of thing will endlessly go on and it does not redound to the credit of anybody. What has happened here. On one side, it was mentioned that the villain of this award is no other than Mr. Channabasappa. It was stated that he invented that clause–rather

that ingenous clause which they said, burnt their fingers; They say it burnt all their ten fingers. It was stated that he wat the inventor of what is called the Award theory. It was also stated that he was the man who inducted into the P.W.D. private contractors. I raised a very pertinent question. I wanted to know from the other side, whether Mr. Channabasappa did it or whether it emanated during the Chief Ministership of Mr. Nijalingappa in the interim period or subsequently when Mr. Jatti replaced him. During that period, I am definite and positive, if my information is correct and if my memory serves me all right. For the first time in the Madal tunnel works, this scheme was introduced. I also know that the Hindustan Construction Company were there as contractors and that contractor did not utilise that clause. But now the position is this: When the Clause was there, here was the Leader of the House. Had he known that clause was bad and dangerous, what prevented him from removing those two clauses and remove the cause of mischief. Why did he not do it? I want a categorical, specified positive answer to these two questions-whether Mr. Channabasappa invented or introduced the clauses relating to contracts and arbitration; in which case, probably we have not come here with any set opinion. If we feel that the mischef emanated from any other quarter, we will perhaps revise our opinion. Until and unless this is done, our per cent opinion holds good and we are going to press this question in season and out of season here in this House and outside this House; as long as we sit here, we follow it, unless and until it is given a quietus, an honourable quietus by holding an enquiry.

I have with me the Das Commission Report. The facts reported therein will be more or less similar to the one here, If I remember correctly. The Chief Minister was saying that he was not responsible: the only thing that comes in there is that his henchmen, his relatives and his associates were responsible for squandering the public monies in Punjab. Therefore, we are not making these charges in a light-hearted manner with the object of mudslinging. We are serious about it.

In a situation like this, what has happened to the administration? A very fine report is given about it, to which I will refer in great detail when I will have occasion on the Budget discussion. This is from the preface to "Techno-economic Survey" by Dr. P. S. Lokanadhan. He has also complimented our Hon'ble Chief Minister for having evinced keen interest in the progress this Report was making. This Report is published in 1965. In that report, he says:

> "Though an analysis of the administrative organisational processes is outside the purview of this. Report, the Council wants to emphasise that without good administrative system, the whole development effort will come to naught. The poor achievement in the past decade is partly due to the lack of an efficient adminnistrative system geared to the requirements of development."

Sri S. NIJALINGAPPA.—My friend is also in it.

Sri H. SIDDAVEERAPPA.—That is past. We are only concerned of what happened from November 1956. We campare favourably with your administration when you take stock of it.

I only emphasised that "without good administrative system, the whole development effort will come to an end. The poor achievement in the past decade is partly due to the lack of efficient administration system geared to the requirements of development. This particular aspect will have to be given greater attention." Not all our maladies in Mysore State depend upon the administrative set up. Why is the achievement poor? I have no complaint to make against any of our officers. The Government does not know how to hold the reins and make the officials work properly. The Administrator must be made of sterner stuff. He must be able to give a kick when necessary. Then the whole machinery moves properly. On account of nepotism and various other things, there is disgruntlement everywhere, in every part of the administration. I have not heard any section saying "we are happy." This is probably as the Rajah of Pongal once said as the first Chief Minister: "For every appointment I make, I create a doubtful friend but hundred certain enemies." Perhaps that may be the position here. Now in Mysore, it is a hard fact. Nobody seems to be happy. That is reflected in the hundreds and thousands of writ petitions that are pouring into the bewilderment of everybody. We have been hearing that for every conceivable grievance, the Governmnet employee rushes to the Court of Law. We hear that these cases arise because they do not follow both the normal procedure and the normal law. If they want to help somebody, they go out of the way and try to help him to the detriment of others. This has caused lot of grievances.

ಶ್ರೀ ಎಸ್. ಆರ್. ಕಂಠಿ.—ಇತರ ರಾಜ್ಯಗಳಲ್ಲಿ ನಮ್ಮ ರಾಜ್ಯಕ್ಕಿಂತ ರಿಟ್ ಪಿಟಿಶನುಗಳು ಜಾಸ್ತಿ ಇವೆ.

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮದು ರಾಮ ರಾಜ್ಯ. ಇದು ಬಹಳ ಸುಂದರವಾದ ರಾಜ್ಯ. ಇದನ್ನು ಬಹಳ ಚೆನ್ನಾಗಿ ನೀವು ಆಳಬೇಕೆಂಬುದು ನಮ್ಮ ಆಶೆ.

That is a poor consolation. It amounts to this fallacy: There was some theft in my neighbour's house; if there is theft in my house, what does it matter? Is that an argument? Perhaps, you in Mysore get the first rank and gold medal so far as the number of writ petitions are concerned. The largest number of them are here in Mysore State.

What about the administrative efficiency and corruption? So far as efficiency is concerned, I may bring it to the notice of the House that a friend of mine who is the Chairman of the Central Land Development Bank told me that in the Bhadra Channel area, in which my Constituency also comes, we would not be able to spend the money that has been given for the Agricultural Refinance Corporation. A sum of Rs. 75 lakhs is allotted to Harihar, and another sum of Rs. 75 lakhs to Davanagere. He told me that they are not able to utilise the amount

for the agriculturists. In this situation, we hear cry for more money. I was a little surprised at his statement. Therefore I went to the Taluk Land Development Bank and made enquiries. I came to know, to my utter surprise and amazement, in the Taluk Office that the necessary documents like the Record of Rights and other things had not been posted. The poor agriculturist has to grease the palm of the concerned officials in Taluk Office to get things done. Until and unless the poor ryots spend Rs. 75, they cannot get these records. Without the proper records, naturally the Central Land Mortgage Bank cannot be expected to hand over huge sums of money. In some cases, Record of Rights are not written up; in some cases they are not written up regularly. They must be written within the next few days of receipt of intimation. But for years Record of Rights is not written up. What does this show? Even Tahsildars, sitting in their seats want money in these cases. Is this the way, the Administration should be run? Still, we hear every day slogans like 'Grow more food' and produced the necessary food. These complaints will have to be given a quietus.

Another point I would like to mention is with regard to the number of officers have now developed; particularly in the Agriculture and Co operative Departments. Has the Hon'ble Finance Minister taken note of all these things? How many officers in every Department? Go to the Co-operation Department. There are 13 Joint Registrars (including the Registrar). Take the Agricultural Department. I would like to invite the attention of the House to a sentence mentioned in the A. G. Ramachandra Rao Committee Report. But unfortunately, it is in cold storage like the reports of other committees. The first committee was Madhava Rau Committee the second is Gorwala Committee; and the third is Ramachandra Rao Committee. Government have spent Rs. 75,000 on the Ramachandra Rao Committee and Government are not going to take any benefit out of it.

Here, they say:

> "The public feeling in the State is that the administrative machinery is slow-moving and not sufficiently responsive to the needs and aspirations of the people. There has been a vast increase at all administrative levels of paper work, accompanied by staff increases to catch up with it. Parkinson's law seems to be operative with its vicious circle of more staff breeding more work *ad-infinitum*".

I personally feel that some kind of effective pruning is necessary. If I remember correctly, that is what the Finance Minister at Delhi also said. When once a man comes and squats, his tendency is to continue to squat. But, there is one saving clause ; at least the Reserve Bank has put an effective brake. They say : 'cut your coat according to your cloth'. But, what has happened here is, as was expected under the Constitution it has not been done. At page 26 of the Finance Accounts for 1965-66, the debt position of the State has been given.

(Sri H. SIDDAVEERAPPA)

It shows how the debt position has been mounting year by year and how our interest charges are swelling. We live and die ; we are bound to die. The burden of the State loans will be on our children and grand-children. Let them not curse us afterwards by saying "here are a set of people who spend indiscriminately" Let them not be called the debtors. Under the Hindu Law, it is known as 'pious obligation'. It is better we give them a guarantee that we have raised the debts for purposes of effective spending. Article 293 of the Constitution lays down that it is an imperative duty on the members of the Treasury Benches to answer to the House. I feel they have failed to answer. Article 293 (1) says :—

> "Subject to the provisions of this article, the executive power of a State extends to borrowing within the territory of India upon the security of the Consolidated Fund of the State within such limits, if any, as may from time to time be fixed by the Legislature of such State by law......"
> and to the giving of guarantees within such limits, if any, as may be fixed."

It is their duty to consult us as to how much money they are going to borrow. Have they done it ?

Sri RAMAKRISHNA HEGDE.—Does the Hon'ble Member suggest whether such a limit has been fixed by any other State Legislature ?

Sri H. SIDDAVEERAPPA.—Sir, here I beg to differ from the Hon'ble Minister. I want our Finance Minister to be an example to others. That is a very poor comparison. Why should our Finance Minister limp if other are limping ? Therefore. I personal y feel that they have grieviously failed to follow the constitutional principles.

Sir, I wanted to mention something about the Khanda Board or Khadi Board I do not know what to call it.

MR. SPEAKER.—Whatever 'Khanda' it is, it does not come under the Vote Account.

Sri H. SIDDAVEERAPPA.—I was only sad to hear my Chief Minister saying that a lot of money has been eaten up. That is a candid admission. Something, has gone wrong there. I wanted to say something, because my name has been associated with it. I was in the Khadi Board for some time. With my inner knowledge, I want to appraise the House that even today if we make up our mind we can clean those tables. We cannot put it on any longer though they may not be satisfied with us.

Sir, I have got one other matter about administrative inefficiency. I got one information that this is the saddestthing that one could ever think of. It was addressed to a gentleman, who admitted a lady in the S. D. S. Sanatorium, Bangalore. She expired on the 20th of this

month. The address is very clearly given as to who admitted that lady there. That gentleman receives a letter on the 24th, four days after the lady expired, which reads as under:

> "I regret to inform you that Smt. Sundaramma, who was admitted in this Institution for treatment, expired on 20th March 1967 at 8-20 A.M. Kindly arrange to do the needful."

Is this the administrative efficiency we expect of the Government? Is this what could be expected? Supposing one of my relative or their relatives die—as we are bound to die—could they have tolerated? But they treated that body something like a luggage or goods. I am really surprised. They feel they may do as they like. Is this the way in which things should be done?

I have got another point to bring to your kind notice and through you to the notice of this House: An Hon'ble member of this House, Sri Viswanatha Reddy has began fasting, who had stated earlier that he would fast wherever he is. He has issued an appeal—probably the Chief Minister might have also received it—; he issued a pamphlet on 2nd March 1967 that one of the Hon'ble Ministers adorning the Treasury Benches here, during the time of the elections committed or caused to be committed some excesses there in that area and his people were taken away, beaten and were left high and dry in a forest. He had stated also about this in his speech on the Motion of Thanks. In persuance of it, today he has commenced his fast for 24 hours. This is not an isolated instance. Let not the Hon'ble members on the other side treat us lightly and say that these are simply propagandists. I appeal to them to consider these aspects dispassionately and create a calm atmosphere in this country where everybody may feel secured.

Sri S. NIJALINGAPPA.—Can we have the two letters with regard to the demise of that inpatient?

Sri H. SIDDAVEERAPPA.—I will see that the two letters are furnished with full address.

ಶ್ರೀ ಜಿ. ತಮ್ಮಣ್ಣ (ಕುಣಿಗಲ್).—ಸಭಾಪತಿಗಳೇ, 1967-68ನೇ ಸಾಲಿನ ಆಯವ್ಯಯ ಮುಂಗಡ ಪತ್ರವನ್ನು ಅನುಮೋದಿಸುತ್ತಾ, ಸರ್ಕಾರದಲ್ಲಿ ಈ ಕೆಳಗೆ ಕಂಡ ಮನವಿಯನ್ನು ಮಾಡಿಕೊಳ್ಳುತ್ತೇನೆ.

ರಾಷ್ಟ್ರದ ಅಭಿವೃದ್ಧಿ ದೃಷ್ಟಿಯಿಂದ ಸರ್ಕಾರದವರು ದೊಡ್ಡ ನೀರಾವರಿ ಹಾಗೂ ಸಣ್ಣ ನೀರಾವರಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತ ಬಂದಿರುತ್ತಾರೆ. ಆದರೆ ಭಾರಿ ಪ್ರಮಾಣದ ನೀರಾವರಿ ಕಾಮಗಾರಿಕೆಗಳಿಂದ ಈ ತಹಲವರೆಗೂ ಯಾವ ವಿಧವಾದ ಪ್ರಗತಿಯೂ ಕಂಡುಬರುವಂಥ ಸ್ಥಿತಿ ಕಾಣುತ್ತಿಲ್ಲ. ಸಣ್ಣ ನೀರಾವರಿಗಳ ಬಹುತೇಕ ನಡೆದಿದ್ದರೂ ಕೂಡ ಅದರಿಂದ ಸರ್ಕಾರಕ್ಕೆ ಯಾವ ವಿಧವಾದ ಆದಾಯನ್ನು ತರಿಸುವಂಥ ಒಂದು ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿಲ್ಲ. ಎಲ್ಲೆಲ್ಲಿ ಸಣ್ಣಪುಟ್ಟ ಕೆರೆಗಳ ಮತ್ತು ಅಣೆಕಟ್ಟೆಗಳ ನಿರ್ಮಾಣವಾಗಿದೆಯೋ ಅಂಥ ಭಾಗಗಳಲ್ಲಿ ಯಾವ ವಿಧವಾದ ಉತ್ಪತ್ತಿಯೂ ಸರ್ಕಾರಕ್ಕೆ ಬರುವಂತೆ ಸರ್ಕಾರ ವ್ಯವಸ್ಥಿತ ರೀತಿಯಲ್ಲಿ ಏರ್ಪಾಡುಗಳನ್ನು ಮಾಡಿಲ್ಲ. ಇದರಿಂದಾಗಿ ರೈತನು ಜಮೀನನ್ನು ನೀರಾವರಿ ಸಾಗುವಳಿ ಮಾಡದೇ ಹಾಗೆಯೇ ಉಳಿದುಕೊಂಡಿರುವುದರಿಂದ ಸರ್ಕಾರಕ್ಕೆ ಬಹಳ ಲುಕ್ಸಾನಾಗುತ್ತಿದೆ. ಸರ್ಕಾರದ ಮಟ್ಟದಲ್ಲಿ

(ಶ್ರೀ ಬಿ. ತಮ್ಮಣ್ಣ)

ಇದನ್ನು ಬೇಗ ನರಿಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿ ರೈತನಿಗೂ ಉಪಯುಕ್ತವಾದ ಸಲಹೆ ದೊರೆತು ನ್ಯಾಯದೊರುವಂಥ ಪರಿಸ್ಥಿತಿಯನ್ನು ಮಾಡಿಕೊಡಬೇಕು.

ಕೆರೆಗಳನ್ನು ನಿರ್ಮಾಣ ಮಾಡುವುದರಲ್ಲಿ ಹಾಗೂ ದೊಡ್ಡ ಪ್ರಮಾಣದ ಕೆರೆಗಳಿಂದ ದೊಡ್ಡ ದೊಡ್ಡ ಅಚ್ಚುಕಟ್ಟು ಇರುವಂಥ ಪ್ರದೇಶಕ್ಕೆ ಸಮರ್ಪಕವಾಗಿ ನೀರು ಬಿಡುವ ವ್ಯವಸ್ಥೆಯನ್ನು ಮಾಡದೆ, ನೀರು ಪೋಲಾಗಿ ರೈತರಿಗೆ ಸಕಾಲದಲ್ಲಿ ನೀರು ದೊರೆಯುತ್ತಿಲ್ಲ. ಉದಾಹರಣೆಗೆ ಕುಣಿಗಲ್ ತಾಲ್ಲೂಕಿನಲ್ಲಿ ಮಂಗಳ ಪ್ರಾಜೆಕ್ಟ್ ಎಂದು ಒಂದು ದೊಡ್ಡ ಕೆರೆಯನ್ನು ಕಟ್ಟಿಸುತ್ತಿದ್ದಾರೆ. ಕುಣಿಗಲ್ ದೊಡ್ಡ ಕೆರೆ ಮತ್ತು ಮಾರ್ಕೋನ ಹಳ್ಳಿ ಅಣೆ ಇದಕ್ಕೆ ಸರಿಯಾದ ಕಾಲುವೆಗಳು, ಗೇಟುಗಳು ಇಲ್ಲದೆ ನೀರು ಪೋಲಾಗಿ ರೈತನಿಗೆ ಫಸಲು ನಷ್ಟವಾಗುವ ಪರಿಸ್ಥಿತಿ ಒಂದಿದೆ, ಕಂಟ್ರೋಲಿಂಗ್ ವ್ಯವಸ್ಥೆಯನ್ನು ಸರಕಾರ ಬೇಗ ಮಾಡಿಕೊಡದೆ ಹೋದರೆ ರೈತರು ಕಷ್ಟಕ್ಕೆ ಗುರಿಯಾಗುವ ಪರಿಸ್ಥಿತಿ ಬರುತ್ತದೆ.

ಇದರ ಜೊತೆಗೆ ವ್ಯವಸಾಯಕ್ಕೆ ಬೇಕಾದ ಇರಿಗೇಷನ್ ಟ್ರ್ಯಾಕ್ ರಸ್ತೆಗಳಿಲ್ಲದೆ ಸಕಾಲದಲ್ಲಿ ರೈತ ಗೊಬ್ಬರ ಗೋಡುಗಳನ್ನು ಒದಗಿಸುವುದಕ್ಕೆ ಶಕ್ತಿ ಇಲ್ಲದೆ ಬಹಳ ಭಾಗಗಳಿಗೆ ಗೊಬ್ಬರವನ್ನು ಸಾಗಿಸಲಾರದೆ ಬೆಳೆ ಲುಕ್ಸಾನಾಗುತ್ತಿರುವ ಪರಿಸ್ಥಿತಿ ಇರುವುದಲ್ಲದೆ ಉತ್ಪತ್ತಿಯೂ ಕಡಮೆಯಾಗುತ್ತಿದೆ. ಆದುದರಿಂದ ಸರ್ಕಾರದವರು ಹೆಚ್ಚಿನ ಗಮನ ಕೊಟ್ಟು ಎಲ್ಲೆಲ್ಲಿ ನೀರಾವರಿ ರಸ್ತೆಗಳು ಅತ್ಯಾವಶ್ಯಕವಾಗಿವೆ ಅಲ್ಲಿ ಇರಿಗೇಷನ್ ಟ್ರಾಕ್ ರಸ್ತೆಗಳನ್ನು ಮಾಡಿ ಕೊಡದ ಹೊರತು ಆಹಾರದ ಉತ್ಪಾದನೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬೇಕಾಗಿದೆ.

ವಿದ್ಯಾಭ್ಯಾಸದ ವಿಷಯದಲ್ಲಿ ಎರಡು ಮಾತುಗಳನ್ನು ಆಡಬೇಕಾಗಿದೆ. ಅನೇಕ ಕಡೆ ಶಾಲಾ ಕಟ್ಟಡಗಳಿಲ್ಲದೆ. ಶಾಲೆಗಳು ಕೂಡ ಇಲ್ಲದೆ ಮಕ್ಕಳು ಬಹು ದೂರ ಹೋಗುವಂಥ ಪರಿಸ್ಥಿತಿ ಕಂಡುಬರುತ್ತಿದೆ. ಶಾಲೆಗಳಿದ್ದರೂ ಕೂಡ ಅನೇಕ ಕಡೆ ಮಕ್ಕಳೇ ಇಲ್ಲದೆ ಕೇವಲ ಉಪಾಧ್ಯಾಯರೇ ಇರುವ ಅನೇಕ ನಿದರ್ಶನಗಳು ಕಂಡು ಬರುತ್ತಿವೆ. ಎಲ್ಲಿ ಮಕ್ಕಳ ಸಂಖ್ಯೆ ಇದೆ ಅಲ್ಲಿ ಶಾಲೆಗಳನ್ನು ಅವಶ್ಯಕವಾಗಿ ಕೊಡಬೇಕು ಎಂದು ಪರಿಶೀಲನೆ ಮಾಡತಕ್ಕ ವ್ಯವಸ್ಥೆಯನ್ನು ಮಾಡಿ ಆ ಪ್ರಕಾರ ಶಾಲೆಗಳನ್ನು ಕೊಡಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತೇವೆ.

ಪ್ರಾಥಮಿಕ ಶಾಲಾ ಮಕ್ಕಳಿಗೆ ಇಟ್ಟಿರುವ ಪುಸ್ತಕಗಳ ಮಟ್ಟ ಸಣ್ಣ ಮಕ್ಕಳಿಗೆ ಅನುಕೂಲವಾಗುವಂತೆ ಇರಬೇಕು ಎಂದು ಪಠ್ಯ ಪುಸ್ತಕಗಳನ್ನು ಇಟ್ಟಿದ್ದಾರೆ. ಇದಕ್ಕಾಗಿ ತಜ್ಞರ ಒಂದು ಸಮಿತಿಯನ್ನು ಏರ್ಪಡಿಸಿ ಅದರ ಮುಖಾಂತರ ಪಠ್ಯ ಪುಸ್ತಕಗಳನ್ನು ತಯಾರು ಮಾಡುತ್ತಿದ್ದಾರೆ, ಪಠ್ಯ ಪುಸ್ತಕಗಳನ್ನು ತಯಾರು ಮಾಡುವ ಕಾಲದಲ್ಲಿ ಅರಿತು, ನುರಿತ ಉಪಾಧ್ಯಾಯರುಗಳನ್ನೂ ಸೇರಿಸದೆ ಮಾಡಿದ್ದಾರೆ. ಈ ಪಠ್ಯ ಪುಸ್ತಕಗಳಲ್ಲಿರುವ ವಿಷಯಗಳು ಮಕ್ಕಳಿಗೆ ಅರ್ಥವಾಗುವುದಿಲ್ಲ. ಪಾಠ ಹೇಳುವಂಥ ಉಪಾಧ್ಯಾಯರಿಗೂ ತಿಳಿಯುವುದಿಲ್ಲ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಬೆಂಗಳೂರು ನಗರದಲ್ಲಿ ದಿನೇ ದಿನೇ ಕೈಗಾರಿಕೆಗಳ ಕೇಂದ್ರೀಕರಣವಾಗಿ ಜನಸಂದಣಿ ಜಾಸ್ತಿಯಾಗಿ ಆಹಾರಾಭಾವ ಹೆಚ್ಚಾಗುತ್ತಿರುವುದಲ್ಲದೆ ರೋಗ ರುಜಿನಗಳೂ ಜಾಸ್ತಿಯಾಗಿ ಈ ಪಟ್ಟಣ ದಿನೇ ದಿನೇ ನಶಿಸಿಹೋಗುತ್ತದೆ ಎಂದರೆ ತಪ್ಪಾಗಲಾರದು. ರಾಷ್ಟ್ರದ ಮಧ್ಯದಲ್ಲಿರುವ ತುಮಕೂರು ಜಿಲ್ಲೆಯಲ್ಲಿ ಯಾವ ಕೈಗಾರಿಕಾ ಕೇಂದ್ರವು ಇಲ್ಲ. ತುಮಕೂರು ಮತ್ತು ತುಮಕೂರು ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿಯೂ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಗಮನ ಕೊಡಬೇಕೆಂದು ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ.

ವಿದ್ಯುಚ್ಛಕ್ತಿ ವಿಷಯದಲ್ಲಿ ಮಾತನಾಡುವುದಾದರೆ ಸುಮಾರು 20 ವರ್ಷಗಳಿಂದ ಬಹು ದೂರ ಸಾಧನೆ ಮಾಡಿದೆ, ಬಹಳ ಪ್ರಗತಿಯಾಗಿದೆ ಎಂದರೆ ತಪ್ಪಾಗಲಾರದು. ಆದರೆ ಐದು ಸಾವಿರ, ಹತ್ತು ಸಾವಿರ ಜನಸಂಖ್ಯೆ ಇರುವಂಥ ದೊಡ್ಡ ದೊಡ್ಡ ಗ್ರಾಮಗಳಿಗೆ ಕೂಡ ವಿದ್ಯುಚ್ಛಕ್ತಿ ಸೌಕರ್ಯವಿಲ್ಲ. ವಿದ್ಯುಚ್ಛಕ್ತಿಯ ಸಾಕರ್ಯಗಳನ್ನು ಒದಗಿಸುವಾಗ ರೈತನಿಗೆ ಉಪಯುಕ್ತವಾದ ಬಾವಿಗಳಿಗೆ ಹೆಚ್ಚಿನ ಶಕ್ತಿಯನ್ನು ಉಪಯೋಗಿಸಿ ಅವನಿಗೆ ಪಂಪಸೆಟ್‌ಗಳನ್ನು ಕೊಡಬೇಕು. ಅನೇಕ ಕಡೆ ಬಾವಿ ತೆಗೆದು ನಾಲ್ಕಾರು ವರ್ಷವಾದರೂ ಕೂಡ ವಿದ್ಯುಚ್ಛಕ್ತಿ ಸೌಕರ್ಯ ದೊರೆತಿಲ್ಲ. ಅದಕ್ಕೆ ಕಾರಣವೇನು ಎನ್ನುವುದು ಅರ್ಥವಾಗುತ್ತಿಲ್ಲ. ಸರ್ಕಾರದವರು ಎಲ್ಲೆಲ್ಲಿ ನೀರಾವರಿ ಬಾವಿಗಳನ್ನು ತೆಗೆಸುತ್ತಾರೆ ಅಂಥ ಕಡೆ ತ್ವರಿತವಾಗಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು ಮತ್ತು ರೈತರು ಬಾವಿಗಳನ್ನು ತಾವೇ ತೋಡಿಸಿರುವ ಸಂದರ್ಭಗಳಲ್ಲಿ ಕೂಡ ಅವರಿಗೆ ಸಕಾಲದಲ್ಲಿ ಹಣ ದೊರೆಯುವಂತೆ ವ್ಯವಸ್ಥೆಯನ್ನು ಸಹಕಾರ ಸಂಸ್ಥೆಗಳ ಮೂಲಕ ಮಾಡಬೇಕೆಂದು ಹೇಳುತ್ತೇನೆ. ಪ್ರತಿಯೊಂದು ಕುಟುಂಬದವರಿಗೂ ಬಾವಿ ಇರಲೇಬೇಕು. ರೀತಿಯ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಸರ್ಕಾರ ಇದರ ಬಗ್ಗೆ ಹೆಚ್ಚಿನ ರೀತಿಯಿಂದ ಪ್ರಚಾರ ಮಾಡಿ ಬಾವಿಗಳನ್ನು ತೋಡಿಸುವುದು ಖಂಡಿತವಾಗಿಯೂ ಒಳ್ಳೆಯದು. ಹೋದ ವರ್ಷ ಬಂದಂಥ ಬರವನ್ನು ನಾನು ಕಂಡಿದ್ದೇನೆ ''ಬಾವಿ ಇದ್ದವನು ಬರದಲ್ಲಿ ಬದುಕುತ್ತಾನೆ'' ಎಂದು ಹೇಳುತ್ತಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ''ಬಾವಿ ಇದ್ದವನು ಬರದಲ್ಲಿ ಬದುಕುವುದಕ್ಕೆ ಸಾಧ್ಯ.'' ಆದಕಾರಣ ಹೆಚ್ಚು ಆಹಾರ ಉತ್ಪತ್ತಿಯನ್ನು ಮಾಡಬೇಕಾಗಿದ್ದರೆ. ನಾವು ನಮ್ಮ ಕಾಲಮೇಲೆ ನಿಂತು ಕೊಂಡು ಅನ್ಯ ರಾಷ್ಟ್ರಗಳನ್ನು ಭಿಕ್ಷೆ ಬೇಡದೇ. ನಾವೇ ಸ್ವತಂತ್ರವಾಗಿ ಬಾಳಬೇಕೆಂದಿದ್ದರೆ ಬಾವಿಗಳನ್ನು ತೋಡಿಸುವುದಕ್ಕೆ ಹೆಚ್ಚಿನ ರೀತಿಯ ಪ್ರಚಾರ ನಡೆದು, ಅದಕ್ಕೆ ಬೇಕಾದ ಹಣವನ್ನು ರೈತನಿಗೆ ಕೊಡಬೇಕು ಎಂದು ಈ ಸಂದರ್ಭದಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಸರ್ಕಾರದವರು ಅಣೆಕಟ್ಟೆಗಳನು ಮತ್ತು ಕೆರೆಗಳನ್ನು ನಿರ್ಮಾಣ ಮಾಡುವಾಗ ಅದರಿಂದ ತೊಂದರೆಗೆ ಒಳಗಾಗುವ ರೈತರಿಗೆ ಪರಿಹಾರವನ್ನು ಕೊಟ್ಟು ಅವನ ಪುನರ್ವಸತಿಗೆ ಏರ್ಪಾಡು ಮಾಡಬೇಕು. ಇಂಥ ಪರಿಸ್ಥಿಯಲ್ಲಿ ನಿರಾಶ್ರಿತರಾಗಿರುವ ನಿದರ್ಶನಗಳು ಬೇಕಾದಷ್ಟು ನಮ್ಮ ಮುಂದೆ ಇವೆ. ಉದಾಹರಣೆಗೆ ಹೇಳಬೇಕಾಗಿದ್ದರೆ ಸುಮಾರು ನಾಲ್ಕಾರು ವರ್ಷಗಳಿಂದ ಮಂಗಳ ಪ್ರಾಜೆಕ್ಟ್ ಅಣೆಯನ್ನು ಕಟ್ಟುತ್ತಿದ್ದಾರೆ. ರೈತರಿಗೆ ವಸತಿಯಾಗಲೀ, ಭೂಮಿ ಕಳೆದು ಕೊಂಡವರಿಗೆ ಭೂಮಿ ಅಥವಾ ಹಣವಾಗಲಿ ಇವತ್ತಿನವರೆಗೂ ದೊರೆಯದೆ ಇರುವುದು ಬಹಳ ಶೋಚನೀಯವಾದ ವಿಷಯ ಎಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಈ ಅಣೆಯ ಕಾರ್ಯ ಎಷ್ಟರಮಟ್ಟಿಗೆ ಸಾಗುತ್ತಿದೆ ಎಂದರೆ ಬಹಳ ನಿಧಾನವಾಗಿ ನಡೆಯುತ್ತಿದೆ. ಐದಾರು ವರ್ಷಗಳಿಂದ ಯಾವ ಪ್ರಗತಿಯೂ ಆಗಿಲ್ಲ. ಅಣೆ ಕಟ್ಟುತ್ತಿರುವುದರ ಉಪಯೋಗ ರೈತನಿಗೆ ದೊರೆಯುತ್ತಿಲ್ಲ. ಈ ಅಣೆಯಲ್ಲಿ ಮುಳಗಡೆಯಾದಂಥ ರೈತರಿಗೆ ಏನೂ ಅನುಕೂಲವಾಗಿಲ್ಲ ಮತ್ತು ಅದನ್ನು ಆಶ್ರಯಿಸಿ ಬಂದಂಥ ರೈತರಿಗೆ ಕೂಡ ಕ್ಷೇಮ ವಾಗುತ್ತಿಲ್ಲ. ಈ ಕೆಲಸವನ್ನು ಬೇಗ ಮಾಡಿ ಪೂರೈಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಹಣಕಾಸಿನ ಮಂತ್ರಿಗಳು ಅವರ ಭಾಷಣದಲ್ಲಿ ಹೆಚ್ಚಿನ ಪ್ರಗತಿಯಾದ, ಆಶಾದಾಯಕವಾದ ವಿಷಯವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅದು ಪಾನನಿರೋಧದ ವಿಚಾರ. ಇನ್ನು ಸ್ವಲ್ಪಮಟ್ಟಿಗೆ ಸಡಿಲ ಮಾಡಬೇಕೆಂದು ಹೇಳಿದ್ದಾರೆ. ನನ್ನ ಅನುಭವದಲ್ಲಿ ಹೇಳಬೇಕಾದರೆ ಪಾನನಿರೋಧವನ್ನು ಬಿಗಿ ಮಾಡುವುದು ಒಳ್ಳೆಯದಲ್ಲ; ಅದನ್ನು ಪೂರ್ಣವಾಗಿ ಸಡಿಲ ಮಾಡಬೇಕು. ಪಾನನಿರೋಧದಿಂದ ದೇಶಕ್ಕಾಗಲೀ. ಸಮಾಜಕ್ಕಾಗಲೀ, ಕ್ಷೇಮವಿಲ್ಲ. ಸಾಮಾನ್ಯವಾಗಿ ಇದರಿಂದ ಜನತೆಗೆ ಆರೋಗ್ಯ ಕೆಡುತ್ತಿದೆ, ಆರ್ಥಿಕ ಮಟ್ಟವು ಕೂಡ ಹಾಳಾಗುತ್ತಿದೆ. ರೈತನ ಮತ್ತು ಸಾಮಾನ್ಯ ಜನತೆಯ ನೈತಿಕ ಮಟ್ಟ ಕೆಡುತ್ತಿದೆ. ಇದನ್ನು ಪೂರ್ಣವಾಗಿ

(ಶ್ರೀ ಎಚ್. ಸಿದ್ದವೀರಪ್ಪ)

ನಡಿಲಿಸಿ ರಾಷ್ಟ್ರಾದ್ಯಂತ ಪೂರ್ಣವಾಗಿ ಪಾನನಿರೋಧವನ್ನು ರದ್ದು ಮಾಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಕೊಡುತ್ತಿದ್ದೇನೆ.

ಈ ದಿವಸ ನಾವು ಹೆಚ್ಚಿನ ಗಮನವನ್ನು ಆಹಾರದ ಉತ್ಪಾದನೆಯ ಕಡೆಗೆ ಕೊಡಬೇಕು. ಇದಕ್ಕೆ ಇಂಜನಿಯರಿಂಗ್ ಇಲಾಖೆ, ವಿದ್ಯುಚ್ಛಕ್ತಿ ಇಲಾಖೆ ಮತ್ತು ವ್ಯವಸಾಯ ಇಲಾಖೆ ಇವು ಮೂರು ಹೊಂದಾಣಿಕೆಯಿಂದ ಕೆಲಸ ಮಾಡಬೇಕು. ವಿದ್ಯುಚ್ಛಕ್ತಿ ಇಲಾಖೆ ಪಂಪಗಳನ್ನು ಕೊಡುತ್ತಿದೆ. ಆ ಪಂಪಗಳನ್ನು ರೈತನು ಉಪಯೋಗ ಮಾಡಿಕೊಂಡನೇ, ಅದರಿಂದ ಎಷ್ಟು ಪ್ರಗತಿಯಾಗಿದೆ ಎಂದು ಅಂಕಿ ಅಂಶಗಳನ್ನು ತರಿಸಿಕೊಳ್ಳಬೇಕು, ಪಬ್ಲಿಕ್ ವರ್ಕ್ಸ್ ಇಲಾಖೆ ಕೂಡ ಸಾಕಾದಷ್ಟು ನೀರು ಸಿಕ್ಕುತ್ತಿದೆಯೇ ಇಲ್ಲವೇ, ರೈತನಿಗೆ ಏನಾದರೂ ಸಹಾಯ ದೊರೆಯಬೇಕಾಗಿದೆಯೇ ಎಷ್ಟು ಸಹಾಯಬೇಕು ಎನ್ನುವ ಅಂಕಿ ಅಂಶಗಳನ್ನೂ ಆ ಇಲಾಖೆಯವರು ತರಿಸಿಕೊಳ್ಳಬೇಕು. ರೆವಿನ್ಯೂ ಇಲಾಖೆಯವರು ಕೂಡ ಹೆಚ್ಚಿನ ಸಹಾಯ ಮತ್ತು ಹಣ ದೊರೆಯುವಂತೆ ವ್ಯವಸ್ಥೆಯನ್ನು ಮಾಡಬೇಕು. ಈ ಮೂರು ಇಲಾಖೆಗಳೂ ಏಕರೂಪವಾಗಿ ಕೆಲಸ ಮಾಡಿದರೆ ನಿಜವಾಗಿ ರೈತನ ಪ್ರಗತಿಯಾದೀತು, ಆಹಾರದಲ್ಲಿ ಸ್ವಾವಲಂಬನೆಯಾದೀತು ಎಂದು ಹೇಳುತ್ತೇನೆ.

Mr. SPEAKER.—The member has got five minutes more. I rang the Bell because it is 3 P. M. and it is the Tea time. May I know the sense of the House, whether we should break for Tea or continue. ?

Sri S. NIJALINGAPPA.—We can continue.

HON'BLE MEMBERS.—Yes.

Mr. SPEAKER.—Then Sri Thammana may continue his speech. May I know what time will be required for the reply so that I may regulate the business.

Sri RAMAKRISHNA HEGDE.—I may require about 30 minutes.

Mr. SPEAKER.—The debate will go on till 5.15 P. M. and then I wil put vtoe on account to vote. The House will adjourn at 6 P.M. and we will meet tomorrow at 9 A. M.

ಶ್ರೀ ಜಿ. ತಮ್ಮಣ್ಣ.—ಸಭಾಧ್ಯಕ್ಷರೇ, ಆರೋಗ್ಯ ಮತ್ತು ನೈರ್ಮಲ್ಯ ವಿಷಯದಲ್ಲಿ ಮಾತನಾಡಬೇಕಾಗಿದೆ. ಸರ್ಕಾರ 20 ವರ್ಷದಿಂದ ಪ್ರಗತಿ ಸಾಧಿಸಿದ್ದು ನೋಡಿದರೆ ದೊಡ್ಡ ಸಾಧನೆಯನ್ನು ಸಾಧಿಸಿದ ಹಾಗೆ ಇದೆ. ಅದರಲ್ಲಿ ಏನು ಸಾಧಿಸಬೇಕು ಇನ್ನು ಉಳಿದಿರುವ ಕಾರ್ಯಕ್ರಮ ಏನು ಇದೆ ಎಂದರೆ ಕಟ್ಟಡಗಳ ಸೌಲಭ್ಯ ಮತ್ತು ಅನೇಕ ಆಸ್ಪತ್ರೆಗಳ ಕಟ್ಟಡಗಳು ಮನೆಗಳಲ್ಲಿ ನಡೆಯುವ ಪರಿಸ್ಥಿತಿ ಇದೆ.

3-00 P.M.

[Mr. DEPUTY SPEAKER in the Chair]

ಈ ಕಟ್ಟಡಗಳ ಸೌಲಭ್ಯವನ್ನು ಸರ್ಕಾರ ಆದಷ್ಟು ಜಾಗ್ರತೆ ಒದಗಿಸಿ ಕೊಡಬೇಕು ಎಂದು ಹೇಳಿ ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅಲ್ಲದೆ ನಮ್ಮ ಕ್ಷೇತ್ರದ ಕುಣಿಗಲ್‌ನಲ್ಲಿ ಸರ್ಕಾರದಿಂದ ಸಾರ್ವಜನಿಕರಿಗೆ ಕೊಡಬೇಕಾದಂಥ ಸಹಾಯ ಧನವನ್ನು ಕೊಟ್ಟರೂ ಕೂಡ ಇನ್ನೂ ಕೂಡ ಕಟ್ಟಡ ಆಗದೇ ಇರುವುದು ನಮಗೆ ಶೋಚನೀಯವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಸರ್ಕಾರ ಈ ಬೇಡಿಕೆಗೆ ಒಂದು ಕ್ರಮ ತೆಗೆದುಕೊಂಡು ಕಟ್ಟಡ ಪೂರೈಸುವಂತೆ ಮಾಡಬೇಕು, ಹಾಗೂ ನನ್ನ ಭಾಗವಾದ ತುಮಕೂರು ಜಿಲ್ಲೆಯಲ್ಲಿ ಕಟ್ಟಗಡಳ ಸೌಲಭ್ಯ ಇಲ್ಲದೇ

ಇರುವುದು ನೋಡುತ್ತಿದ್ದೇನೆ. ಅದನ್ನೂ ಕೂಡ ಒದಗಿಸಿ ಕೊಡಬೇಕು. ಹತ್ತಾರು ವರ್ಷದಿಂದ ಒಂದೇ ಕಡೆ ಇರುವ ವ್ಯವಸ್ಥೆ ಇದೆ. ಅದರ ಕಡೆಯೂ ಗಮನ ಕೊಡಬೇಕು. ಅದರೆ ಸಾರ್ವಜನಿಕರಿಗೆ ಬೇಕಾದಂಥ ಸೇವೆ ಸಲ್ಲಿಸುವಂಥ ಅಧಿಕಾರಿಗಳು ಎಷ್ಟು ವರ್ಷವಾದರೂ ಕೂಡ ಕೆಲಸ ಮಾಡದೆ ಇರುವಂತೆ ಇದ್ದರೆ ಸಾರ್ವಜನಿಕರು ಕೇಳುವ ಸೌಲಭ್ಯವನ್ನು ಒದಗಿಸಿಕೊಡುವುದಕ್ಕಾಗುವುದಿಲ್ಲ. ಇದಕ್ಕೆ ಸರಕಾರ ಸರಿಯಾದ ವ್ಯವಸ್ಥೆ ಮಾಡಿಕೊಡಬೇಕು. ಹೀಗೆ ವಿದ್ಯಾಭ್ಯಾದಸ ಇಲಾಖೆಯಲ್ಲಿ ಅನೇಕ ಕಾಗದಪತ್ರಗಳು ವರ್ಷಾನುಗಟ್ಟಲೆ ಉಳಿಯುವ ಪರಿಸ್ಥಿತಿ ನಾನು ಕಣ್ಣಾರೆ ನೋಡಿದ್ದೇನೆ. ಮಾರ್ಚ್ 31 ಕೊನೆಯ ವರ್ಷದ ಸಾಲು ಅನೇಕ ಅರಾರ ಕಛೇರಿಯ ಅಧಿಕಾರಿಗಳು ಎಜುಕೇಷನ್ ಹಾಸ್ಟಲುಗಳಿಗೆ ಕೊಡುವ ಗ್ರಾಂಟನ್ನು ಸಕಾಲದಲ್ಲಿ ಕೊಡುತ್ತಾ ಇಲ್ಲ. ಇದರಿಂದ ಲ್ಯಾಪ್ಸ್ ಆಗುವ ಪರಿಸ್ಥಿತಿ ಇದೆ. ವಿದ್ಯಾಭ್ಯಾಸದ ಇಲಾಖೆಯಲ್ಲಿರುವ ದೊಡ್ಡ ನ್ಯೂನತೆ ಕಾಣುತ್ತಾ ಇದೆ. ಇದರಿಂದ ಸರ್ಕಾರ ಎಚ್ಚೆತ್ತು ಇದನ್ನು ಸರಿಪಡಿಸಬೇಕೆಂದು ಹೇಳಿ ಇಷ್ಟು ಮಾತಾನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

†ಶ್ರೀ ಶಿದ್ದಯ್ಯ ಕಾಶಿಮಠ್ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ಈ ಆಯ್ಯವ್ಯಯದ ಮುಂಗಡ ಪತ್ರವನ್ನು ಓದಿ ನೋಡಿದೆ, ಇದರಲ್ಲಿ ಆರ್ಥಿಕ ಮಂತ್ರಿಗಳು ತಮ್ಮದೆ ಆದ ಬುದ್ಧಿವಂತಿಕೆಯಿಂದ ಮುಂದಿನ ವರ್ಷ 8. 59 ಕೋಟಿ ರೂಪಾಯಿ ವರಮಾನ ಹೆಚ್ಚಾಗಿ ಬಂದರೂ ವರ್ಷದ ಕೊನೆಯಲ್ಲಿ 3¼ ಕೋಟಿ ರೂಪಾಯಿ ಕಡಿಮೆ ಬರತಕ್ಕ ಪರಿಸ್ಥಿತಿಯನ್ನು ತಿಳಿಸಿದ್ದಾರೆ. ಅದಲ್ಲದೆ ಪಾನನಿರೋಧ ಕಾನೂನು ತಿದ್ದುಪಡಿಯಿಂದ 4 ಕೋಟಿ ರೂಪಾಯಿ ಬರತಕ್ಕದ್ದು. ಒಟ್ಟಿನಲ್ಲಿ 50 ಲಕ್ಷ ರೂಪಾಯಿ ಉಳಿತಾಯವಾಗಬಹುದು ಎಂಬುದನ್ನು ಬಹಳ ಮಾರ್ಮಿಕವಾಗಿ ಈ ಅಯವ್ಯಯ ಪಟ್ಟಿಯಲ್ಲಿ ಹೇಳಿದ್ದಾರೆ. ನನಗಾದರೂ ಅನಿಸುತ್ತದೆ ಏನಂದರೆ, ಅವರ ಹೇಳಿಕೆ ಪ್ರಕಾರ ಕಳೆದ 10 ವರ್ಷದಿಂದ ಎಂದರೆ 1957–58ನೇ ಇಸವಿಯಿಂದ 1967–68ನೇ ಇಸವಿಯವರೆಗೆ 10 ವರ್ಷದ ಅವಧಿಯಲ್ಲಿ ಅವರು ರಾಜ್ಯದ ವರಮಾನ 57 ಕೋಟಿಯಿಂದ 110 ಕೋಟಿಯವರೆಗೆ ಆಗಿದೆ. ವಿದ್ಯುಚ್ಛಕ್ತಿ ವರಮಾನವೂ ಸಹ 53 ಕೋಟಿಯಿಂದ 155 ಕೋಟಿಯವರೆಗೆ ಆಗಿದೆ. ಅದರ ಜತೆಯಲ್ಲೇ ಸಾಲ 87 ಕೋಟಿಯಿಂದ 136 ಕೋಟಿಯವರೆಗೆ ನಮ್ಮ ರಾಜ್ಯದಲ್ಲಿ ಇದೆ. ಆಹಾರಧಾನ್ಯ ಉತ್ಪಾದನೆಯೂ ಕೂಡ ಅವರು ಹೆಚ್ಚಿನದಾದ ರೀತಿಯಲ್ಲಿ ಕೇಂದ್ರ ಸರ್ಕಾರದಿಂದ ಸಹಾಯ ಪಡೆದು 32 ಲಕ್ಷ ಟನ್‌ನಿಂದ 47 ಲಕ್ಷ ಟನ್ ಆಹಾರಧಾನ್ಯ ಬೆಳೆಯುವುದಕ್ಕೆ ಸಾಧನ ಒದಗಿಸಿಕೊಟ್ಟಿದ್ದೇವೆ, ಎಂದು ಹೇಳಿದ್ದಾರೆ. ಅದೇರೀತಿ ರಸಾಯನಿಕ ಗೊಬ್ಬರ 24 ಸಾವಿರ ಟನ್‌ನಿಂದ 180 ಸಾವಿರ ಟನ್‌ವರೆಗೆ ಹಂಚಿದ್ದೇವೆ ಎಂದು ಹೇಳಿದ್ದಾರೆ. ಅದು ಬಹಳ ಕಡಿಮೆ ಎಂದು ನನಗೆ ಅನ್ನಿಸುತ್ತದೆ. ಆದರೆ ಜನಸಂಖ್ಯೆ ಮಾತ್ರ ಎಷ್ಟು ಇತ್ತು ಎನ್ನುವುದನ್ನು ಹೇಳಲಿಲ್ಲ. ಜನಸಂಖ್ಯೆ ಮಿತಿಮೀರಿ ಹೋಗುವುದರಿಂದ ಫ್ಯಾಮಿಲಿ ಪ್ಲಾನಿಂಗ್ ಮುಖಾಂತರ ಕಡಿಮೆ ಮಾಡಿಕೊಳ್ಳಬಹುದು. ನಮ್ಮ ರಾಜ್ಯದಲ್ಲಿ 5-6 ವರ್ಷದಿಂದ ಕೆಲವು ಕಡೆಗಳಲ್ಲಿ ಬರಗಾಲ ಬಂದು ಅಕಾಲಿಕ ಮಳೆಯಿಂದಾಗಿ ಸಾಕಷ್ಟು ರೀತಿಯಿಂದ ವ್ಯವಸಾಯೋತ್ಪನ್ನಗಳು ರೈತನ ಕೈಗೆ ಬಾರದೆ ಬಹಳ ಕಷ್ಟಪಡುವ ಪರಿಸ್ಥಿತಿ ಬಂದಿದೆ. ಈ ವರ್ಷ ನಾವು ಕಠಿಣ ಪರಿಸ್ಥಿತಿಯಲ್ಲಿ ಕಾಯುವುದು ಆಗಿದೆ. ನಮಗೆ ಕಡಿಮೆ ಆಗಿರುವ ಆಹಾರಧಾನ್ಯವನ್ನು ಪೂರೈಸುವುದಕ್ಕೆ ಹೊರಪ್ರಾಂತದಿಂದ, ಅಂದರೆ, ಅಮೇರಿಕಾದಿಂದ ಗೋಧಿ ಜೋಳ ತರಿಸುವ ಪರಿಪಾಟು ಇತ್ತು. ನಿನ್ನೆ ದಿವಸ ಪತ್ರಿಕೆಯಲ್ಲಿ ಓದಿದೆ ಏನೆಂದರೆ, ಅಮೇರಿಕಾದಲ್ಲಿ ಸರಿಯಾದ ರೀತಿಯಲ್ಲಿ ಗೋಧಿ ಜೋಳದ ಬೆಳೆ ಬಾರದೇ ಇರುವುದರಿಂದ ನಮಗೆ ಈ ವರ್ಷ ಕೋಟಾ ಕೊಡುವುದು ಕಠಿಣ ಪರಿಸ್ಥಿತಿ ಇರುವುದರಿಂದ ಫಸಲು ಬರತಕ್ಕ ಸಮಯದಲ್ಲಿ ಜನಕ್ಕೆ ಸರಿಯಾದ ರೀತಿಯಲ್ಲಿ ಆಹಾರಧಾನ್ಯ ಸಿಕ್ಕದೆ ಸಾಯುವ ಪರಿಸ್ಥಿತಿ ಬರುತ್ತದೆ. ನಾನು ಸರ್ಕಾರಕ್ಕೆ ಹೇಳುವುದು ಏನೆಂದರೆ, ಇದ್ದಂಥ ಆಹಾರಧಾನ್ಯ ಸ್ವಾವಲಂಬನೆಯಾಗುವುದಕ್ಕೆ ಎಷ್ಟು ಸಾಧ್ಯವೋ ಅಷ್ಟನ್ನು ತಾವು ಇವೊತ್ತಿನ ದಿವಸ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಅಥವಾ ಧಾರವಾಡ ಜಿಲ್ಲೆಗೆ

(ಶ್ರೀ ಸಿದ್ದಯ್ಯ ಕಾಶೀಮಠ್)

ಸಂಬಂಧಪಟ್ಟಂತೆ ಹೇಳಬೇಕು ಎಂದರೆ ಧಾರವಾಡ ಜಿಲ್ಲೆ 7 ವರ್ಷದಿಂದ ಬರಗಾಲ ಪೀಡಿತ ಪ್ರದೇಶವಾಗಿದೆ. ಈ ವರ್ಷವೂ ಫಸಲು ಹಾಳಾಗಿದೆ. ಮುಂಗಡ ಪತ್ರದಲ್ಲಿ ಅವರು ಹೇಳಿದ ಹಾಗೆ ಹೆಚ್ಚಿನ ರೀತಿಯಲ್ಲಿ ರೈತನಿಗೆ ಸಹಾಯ ಮಾಡಬೇಕು ಎಂದು ಅದರಲ್ಲಿ ಸಾದರು ಪಡಿಸಿದ್ದಾರೆ. ನಾನು ಅವರಿಗೆ ಹೇಳುವುದು ಇಷ್ಟೆ. ಈ ಇಲಾಖೆಯನ್ನು ಪುನರ್ವಿಂಗಡಣೆ ಮಾಡಿದ ಮಾತ್ರಕ್ಕೆ ರೈತನು ಬೆಳೆ ಬೆಳೆಯುಸುವುದಕಾಗುವುದಿಲ್ಲ. ರೈತನ ಕುಂದುಕೊರತೆಗಳನ್ನು ನೀಗಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಇಲಾಖೆಯ ಪುನರ್ವಿಂಗಡಣೆ ಆದಮೇಲೆ ಅಧಿಕಾರಿಗಳು ರೈತನ ಮನೆ ಬಾಗಿಲಿಗೆ ಹೋಗಿ ಆತನಿಗೆ ಯಾವ ತರಹ ಬೆಳೆಯಬೇಕು ಎಂದು ಸಲಹೆ ಮಾಡಿ ಅವನಿಗೆ ಮನ ಮುಟ್ಟುವ ರೀತಿಯಲ್ಲಿ ಅವನ ಜೊತೆ ಸೇರಿ ಕೆಲಸ ಮಾಡಬೇಕು, ಎಂದು ನಾನು ಹೇಳುತ್ತೇನೆ. ಎಷ್ಟೇ ಅಧಿಕಾರಿಗಳು ಇದ್ದರೂ, ಎಷ್ಟೇ ಸೀಡ್ ಫಾರಂಗಳು ಇದ್ದರೂ ಹಳ್ಳಿಗಳ ಅಭಿವೃದ್ಧಿಗೆ ಸಾಕಷ್ಟು ರೀತಿಯಲ್ಲಿ ಗಮನ ಕೊಡದೇ ಹೋದರೆ ಆಹಾರಧಾನ್ಯ ಸ್ವಾವಲಂಬನೆ ಆಗುವ ಪರಿಸ್ಥಿತಿ ಬರುವುದಿಲ್ಲ. ಈ ಇಲಾಖೆಯಲ್ಲಿ ಪಂಪುಸೆಟ್ಟುಗಳಾಗಲಿ, ಅಥವಾ ಟ್ರ್ಯಾಕ್ಟರುಗಳಾಗಲಿ ಇನ್ನೂ ಉಳಿದ ಸಾಮಗ್ರಿಗಳನ್ನು ಒದಗಿಸುವುದಕ್ಕೆ ಸಾಕಷ್ಟು ರೀತಿಯಲ್ಲಿ ಪ್ರಾವಿಷನ್ಸ್ ಇಲ್ಲ ಮಾಡಿದೆ. ಆದರೂ 40–46 ಟ್ರ್ಯಾಕ್ಟರುಗಳು ದೊಡ್ಡ ಪ್ರಮಾಣದಲ್ಲಿ ಇರುವವತ ಕೈಯ್ಯಲ್ಲಿ ಇದೆ. ಒಂದು ವರ್ಷವಾದರೂ ಇಲ್ಲಿಯವರೆಗೆ ರಿಪೇರಿ ಮಾಡಿ ಅದರ ಅನುಕೂಲತೆಯನ್ನು ರೈತರಿಗೆ ಒದಗಿಸದೇ ಇರಲು ಕಾರಣ ಏನು ಎಂದು ನಾನು ಕೇಳುತ್ತೇನೆ.

ಸಾಕಷ್ಟು ಹಣವನ್ನು ತಾವು ಖರ್ಚು ಮಾಡಿದ್ದೀರಿ. ವ್ಯವಸಾಯಕ್ಕೆ ಮತ್ತು ವಿದ್ಯಾಭ್ಯಾಸಕ್ಕೆ ಹೆಚ್ಚು ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದರೂ ಸಹ ಹೆಚ್ಚಿನ ಸದುಪಯೋಗವಾಗುತ್ತಿಲ್ಲ. ಎಕೆಂಬುದನ್ನು ಸರ್ಕಾರದವರು ಸರಿಯಾಗಿ ಯೋಚನೆ ಮಾಡಬೇಕು. ಶಕ್ತಿಮಾನ್ ಜೋಳವನ್ನು ಮತ್ತು ಹೈಬ್ರಿಡ್ ಜೋಳವನ್ನು ನಾವು ಸರಿಯಾಗಿ ಬೆಳೆಯದಿದ್ದರೆ ಕೊಯಮುತ್ತೂರಿನಿಂದ ತರಿಸ ಬೇಕಾಗುತ್ತದೆ. ಒಂದು ಸಂತೋಷದ ಸಂಗತಿಯೆಂದರೆ, ಈ ಹೈಬ್ರಿಡ್ ಜೋಳವನ್ನು ನಮ್ಮಲ್ಲಿ ಹೆಚ್ಚು ಬೆಳೆದು ಬೇರೆ ಕಡೆಗೆ ಕಳಿಸುತ್ತಿದ್ದಾರೆ. ಅಕಾಲಿಕವಾಗಿ ಮಳೆಯೇನಾದರೂ ಬರದಿದ್ದರೆ ನಮ್ಮ ಧಾರವಾಡದ ರೈತರಿಗೆ ಕಷ್ಟವಾಗುತ್ತದೆ. ಅಂತಹ ಕಾಲದಲ್ಲಿ ಅವರಿಗೆ ಬೀಜ, ಗೊಬ್ಬರ ಮತ್ತು ಸಬಂಧಪಟ್ಟ ಸಲಕರಣೆಗಳನ್ನು ಸರ್ಕಾರದವರು ಕೂಡಲೇ ಒದಗಿಸಬೇಕು.

ಇನ್ನು ಸಹಕಾರ ಸಂಘಗಳ ಮೂಲಕ ರೈತರಿಗೆ ಹಣವನ್ನು ಮುಂಗಡವಾಗಿ ಕೊಡುತ್ತಿದ್ದಾರೆ. ತಾಲ್ಲೋಕ್ ಮಾರ್ಕೆಟಿಂಗ್ ಸೊಸೈಟಿಯವರು ರೈತರಿಗೆ ಹಣವನ್ನು ಸಾಲವಾಗಿ ಕೊಡಬಾರದೆಂದು ಸರ್ಕಾರದವರು ಆದೇಶ ಕೊಟ್ಟಿದ್ದಾರೆ. ರೈತರಿಗೆ ಬೆಳಯಲು ಬೀಜ, ಗೊಬ್ಬರ ಕೊಡದಿದ್ದರೆ, ಅವನು ಯಾವುದಾದರೂ ಖಾಸಗೀ ಅಂಗಡಿಯವರಲ್ಲಿ ಸಾಲ ತಂದು ಬೆಳೆಯಾದ ಮೇಲೆ ಅವರಿಗೆ ಮಾರುತ್ತಾರೆ. ಆದ್ದರಿಂದ ಸರ್ಕಾರದವರು ಈ ರೈತರಿಗೂ ಮತ್ತು ಸಹಕಾರ ಸಂಘಗಳಿಗೂ ಒಂದು ಹೊಂದಾಣಿಕೆಯನ್ನು ಮಾಡಬೇಕು. ಸಹಕಾರ ಸಂಘಗಳ ಮೂಲಕ ಮತ್ತೆ ರೈತರಿಗೆ ಮುಂಗಡ ಹಣ ಕೊಡಿಸಲು ಏರ್ಪಾಡು ಮಾಡಬೇಕು. ಟ್ರ್ಯಾಕ್ಟರ್‌ಗಳನ್ನು ಉಪಯೋಗಿಸಿಕೊಳ್ಳಲು ರೈತರಿಂದ ಅನೇಕ ಅರ್ಜಿಗಳು ಬಂದಿವೆ. Hire purchase ಮೇಲೆ ಅವರಿಗೆ ಕೊಡುತ್ತಿದ್ದಾರೆ. ಆದರೆ ಸಾಕಷ್ಟು ಟ್ರ್ಯಾಕ್ಟರುಗಳು ಅಮದಾಗುತ್ತಿಲ್ಲ. ರೈತರಿಗೆ ಸಕಾಲದಲ್ಲಿ ಟ್ರ್ಯಾಕ್ಟರ್‌ಗಳು ಸಿಗದೆ, ಅದರ ಉಪಯೋಗವೂ ಸಹ ಕಡಿಮೆಯಾಗುತ್ತಿದೆ. ವ್ಯವಸಾಯಕ್ಕೆ ಬೇಕಾಗುವ ಟ್ರ್ಯಾಕ್ಟರುಗಳಾಗಲೀ, ಅಥವಾ, ಉಳಿದ ಸಾಮಗ್ರಿಗಳಾಗಲೀ, ಅದಷ್ಟು ಜಾಗತ್ರೆ ರೈತರಿಗೆ ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ನಮ್ಮ ಗದುಗಿನಲ್ಲಿ ಹತ್ತಿಬೆಳೆಗೆ ರೋಗ ಬಂದಿದ್ದರಿಂದ, ಅದರಲ್ಲಿರುವ ಕ್ರಿಮಿಗಳನ್ನು ನಾಶ ಮಾಡಲು ವಿಮಾನದ ಮೂಲಕ ಔಷಧವನ್ನು ಸಿಂಪಡಿಸಿದರು. ಆದರೆ ಹುಳಗಳು ಸಾಯದೆ ಬೆಳೆ

ಹಾಳಾಯಿತು. ಯಾವ ರೀತಿ ಔಷಧವನ್ನು ಸಿಂಪಡಿಸಬೇಕು. ಎಂಬ ಬಗ್ಗೆ ತಜ್ಞರಿಂದ ತಿಳಿದುಕೊಂಡು ಇನ್ನು ಮುಂದೆ ಸರಿಯಾಗಿ ಸಿಂಪಡಿಸಲು ವ್ಯವಸ್ಥೆ ಮಾಡಬೇಕು. ತಾಲ್ಲೋಕ್ ಬೋರ್ಡ್‌ಗಳ ಮುಖಾಂತರ ಆಯಿಲ್ ಇಂಜನ್‌ಗಳನ್ನು ರೈತರಿಗೆ ಕೊಡಿಸುತ್ತಿದ್ದೀರಿ. ಕೆಲವು ಇಂಜನ್‌ಗಳನ್ನು ಸರಿಯಾಗಿ ಉಪಯೋಗ ಮಾಡದೆ ಕೆಟ್ಟುಹೋಗಿವೆ. ಇವುಗಳನ್ನು ಈಗ ಮಾರಿದರೆ ಅರ್ಧ ಬೆಲೆಯೂ ಸಹ ಬರುವುದಿಲ್ಲ. ಇವುಗಳನ್ನು ಹರಾಜು ಮಾಡುವುದಕ್ಕೆ ಬದಲು ಸಹಕಾರ ಸಂಘಗಳಿಗೆ ಕೊಡಬೇಕು.

ಇನ್ನು ಖರ್ಚಿನ ವಿಷಯದಲ್ಲಿ ಹೇಳಬೇಕೆಂದರೆ, ಔಷಧಿಗಳಿಗಾಗಿ, ಮತ್ತು ಇತರೇ ಬಾಬು ಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡುತ್ತೀದ್ದೀರಿ, ಬೆಂಗಳೂರು ಹಾಲಿನ ಡೈರಿ ಬಗ್ಗೆ ಹೇಳಬೇಕಾದರೆ ಹೊರದೇಶಗಳಿಂದ ಮೆಷನ್‌ಗಳನ್ನು ತರಿಸಿದ್ದೀರಿ, ಇವುಗಳಲ್ಲಿ ಕೆಲವು ಕೆಟ್ಟು ಹೋಗಿವೆ ; ಇವುಗಳನ್ನು ರಿಪೇರಿ ಮಾಡಿಸದಿದ್ದರೆ 15 ಲಕ್ಷ ರೂಪಾಯಿಗಳವರೆಗೆ ಲುಕ್ಸಾನಾಗುತ್ತದೆ. ಸಣ್ಣಪುಟ್ಟ ರಿಪೇರಿಗಳನ್ನು ಮಾಡಿಸಿದರೆ ಮಾತ್ರ ಉಪಯೋಗವಾಗುತ್ತದೆಂದು ಹೇಳುತ್ತೇನೆ.

ಇನ್ನು ನೀರಾವರಿ ಬಗ್ಗೆ ಹೇಳಬೇಕೆಂದರೆ, ನಮ್ಮ ಧಾರವಾಡದಲ್ಲಿ ನೈಸರ್ಗಿಕವಾದ ಹಳ್ಳ ಗಳಿವೆ. ನಮ್ಮಲ್ಲಿರುವ ವರದಾ ನದಿ ಮತ್ತು ತುಂಗಭದ್ರಾ ನದಿಗಳಿಂದ ರೈತರಿಗೆ ಸದುಪಯೋಗ ವಾಗುತ್ತಿಲ್ಲ. ಸರ್ಕಾರದವರು ಅಲ್ಲಿ ಲಿಫ್ಟ್ ಇರಿಗೇಷನ್ ಮಾಡಬೇಕೆಂದು ಸ್ಕೀಮ್‌ಗಳನ್ನು ತಯಾರಿಸಿ ಇದುವರೆಗೂ ಕಾರ್ಯಗತ ಮಾಡಿಲ್ಲ' ಮುಖ್ಯವಾದ ಮಲಪ್ರಭಾ ಯೋಜನೆಯನ್ನು ಮುಗಿಸಿದರೆ ಅದರಿಂದ 6–7 ತಾಲ್ಲೋಕ್‌ಗಳಿಗೆ ನೀರು ಸಿಗುತ್ತದೆ. ಈ ಯೋಜನೆಗೆ ಬಡ್ಜೆಟಿನಲ್ಲಿ ಹಣ ಕಾದಿರಿಸಿದ್ದರೂ ಸಹ, ಸರಿಯಾಗಿ ಖರ್ಚು ಮಾಡುತ್ತಿಲ್ಲ. ಕೆಲಸ ಬಹಳ ನಿಧಾನವಾಗಿ ನಡೆಯುತ್ತಿದೆ. ಈ ಯೋಜನೆಯಿಂದ ಹತ್ತಾರು ಲಕ್ಷ ಎಕರೆಗಳಿಗೆ ನೀರು ಸಿಗುವುದರಿಂದ ತೀವ್ರಗತಿಯಿಂದ ಕೆಲಸವನ್ನು ಮಾಡಿಸಬೇಕು.

ಇನ್ನು ಆರೋಗ್ಯದ ಬಗ್ಗೆ ಹೇಳಬೇಕೆಂದರೆ, ಮಲೇರಿಯಾ ನಿವಾರಣೆಗೆ ತಕ್ಕ ಕ್ರಮವನ್ನು ತೆಗೆದುಕೊಂಡಿಲ್ಲ. ನಮ್ಮಲ್ಲಿ ಅಂಟುಜಾಡ್ಯವಾದ ಸಿಡುಬು ಹರಡಿದೆ. ಈಗಾಗಲೇ ಹತ್ತಾರು ಜನ ಸತ್ತಿದ್ದಾರೆ. ಈ ಅಂಟುಜಾಡ್ಯವಿರುವ ರೋಗಿಗಳನ್ನು ಈಗಿರುವ ಆಸ್ಪತ್ರೆಗಳಲ್ಲಿಯೇ ಮಲಗಿಸುತ್ತಾರೆ. ಇದರಿಂದ ಮತ್ತೊಬ್ಬರಿಗೆ ಈ ರೋಗ ಅಂಟುವುದಕ್ಕೆ ಕಾರಣವಾಗುತ್ತದೆ. 1960–61 ರಲ್ಲಿಯೇ ಈ ಅಂಟುರೋಗವನ್ನು ನಿರ್ಮೂಲ ಮಾಡಬೇಕೆಂದು ಸರ್ಕಾರದವರು ಹೊರಟಿದ್ದರು. ಆದರೆ ಇದುವರೆಗೆ ಸಂಪೂರ್ಣವಾಗಿ ನಿವಾರಣೆಯಾಗಿಲ್ಲ. ಇದು ಅಂಟುರೋಗ ವಾದ್ದರಿಂದ ಇದಕ್ಕೆ ಒಂದು ಬೇರೆ ಆಸ್ಪತ್ರೆಯನ್ನು ಹುಬ್ಬಳ್ಳಿಯಿಂದ ಹೊರಗಡೆ ಕಟ್ಟಿಸಬೇಕು. 50 ಹಾಸಿಗೆಯಿರುವ ಒಂದು ಆಸ್ಪತ್ರೆಯನ್ನು ಊರ ಹೊರಗೆ ಕಟ್ಟಿಸಿದರೆ ಮಾತ್ರ ಈ ಅಂಟುರೋಗ ಕಡಿಮೆಯಾಗುತ್ತದೆಂದು ಹೇಳುತ್ತೇನೆ.

ಇನ್ನು ಮೂರನೆಯ ಯೋಜನೆಯಲ್ಲಿ ಕಾಲೇಜು ಸೇರುವ ವಿದ್ಯಾರ್ಥಿಗಳು ಕ್ಯಾಪಿಟೇಷನ್ ಫೀ ಕೊಡಬೇಕಾಗಿದೆ, ಈ ಫೀಯನ್ನು ಬಡ ರೈತರ ಮಕ್ಕಳು ಕೊಡುವುದಕ್ಕಾಗುವುದಿಲ್ಲ. ಗುಲ್ಬರ್ಗಾ ಮತ್ತು ಬೆಳಗಾಂನಲ್ಲಿ ಈ ರೀತಿ ವಸೂಲು ಮಾಡುತ್ತಿದ್ದಾರೆ. ಈ ಕ್ಯಾಪಿಟೇಷನ್ ಫೀಯನ್ನು ಕಡಿಮೆ ಮಾಡಬೇಕು. ಸರ್ಕಾರದ ವತಿಯಿಂದ ಬಡವಿದ್ಯಾರ್ಥಿಗಳನ್ನು ನೇರವಾಗಿ ಚುನಾಯಿಸುವ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬಗ್ಗೆ ಹೇಳಬೇಕಾದರೆ, ನಮ್ಮಲ್ಲಿ ಈ ಆರೋಗ್ಯ ಕೇಂದ್ರಗಳನ್ನು ತಾಲ್ಲೋಕ್ ಬೋರ್ಡಿನವರು ನಡೆಸುತ್ತಿದ್ದಾರೆ. ತಾಲ್ಲೋಕ್ ಬೋರ್ಡಿನವರು ನಡೆಸುವುದಕ್ಕೆ ಅವರಿಗೆ ತಕ್ಕಷ್ಟು ಹಣದ ಸೌಲಭ್ಯವಿಲ್ಲ. ಮುಂಬೈ ಕರ್ನಾಟಕ ದಲ್ಲಿ ಸಬ್ಸಿಡೈಸ್ಡ್ ಮೆಡಿಕಲ್ ಪ್ರಾಕ್ಟೀಷನರ್ಸ್ ಇದ್ದಾರೆ. ಅವರಿಗೆ ಸರ್ಕಾರದವರು ಹಣ ಸಹಾಯ ಮಾಡಿ ಅವರ ಮುಖಾಂತರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆದರೆ ಜನರಿಗೆ ಹೆಚ್ಚಿನ ಅನುಕೂಲವಾಗುತ್ತದೆ.

(ಶ್ರೀ ಸಿದ್ದಯ್ಯ ಕಾಶೀಮಠ್)

ಇನ್ನು ಸಣ್ಣ ಕೈಗಾರಿಕೆಗಳ ಬಗ್ಗೆ ಹೇಳಬೇಕಾದರೆ, ನಮ್ಮ ಸರ್ಕಾರದವರು ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಉತ್ತೇಜನವನ್ನು ಕೊಟ್ಟಿಲ್ಲ. ಆ ಬಾಬಿಗೆ ಕಡಿಮೆ ಹಣವನ್ನು ಒದಗಿಸಿದ್ದಾರೆ. ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಉತ್ತೇಜನ ಕೊಟ್ಟರೆ, ಆ ಮೂಲಕ ಸಾಕಷ್ಟು ಜನರಿಗೆ ಉದ್ಯೋಗವನ್ನು ದೊರಕಿಸಿಕೊಟ್ಟಾಂತಾಗುತ್ತದೆ. ಆದ್ದರಿಂದ ಈ ಬಾಬಿಗೆ ಹೆಚ್ಚಿನ ಹಣವನ್ನು ಒದಗಿಸಿ, ಹೆಚ್ಚಿನ ಆದ್ಯತೆಯನ್ನು ಕೊಡಬೇಕು.

ಇನ್ನು ಕೊನೆಯದಾಗಿ ಗೋವಧೆ ಬಗ್ಗೆ ಹೇಳಬೇಕಾದರೆ, ರೈತರು ಹಸುಗಳನ್ನು ಸಾಕಲು ಶಕ್ತಿಯಿಲ್ಲದೆ ಮಾರುತ್ತಿದ್ದಾರೆ. ಸಾವಿರಾರು ಹಸುಗಳನ್ನು ಮುಂಬೈ ಪ್ರಾಂತ್ಯಕ್ಕೆ ಕಳಿಸುತ್ತಿದ್ದಾರೆ. ಅಲ್ಲಿ ಅವುಗಳನ್ನು ಕೊಲ್ಲುತ್ತಿದ್ದಾರೆ. ಆಕಳುಗಳನ್ನು ಕೊಲ್ಲುವುದಕ್ಕೆ ಅವಕಾಶವನ್ನು ನಮ್ಮ ಸರ್ಕಾರದವರು ಕೊಡಬಾರದು. ಆ ಬಗ್ಗೆ ನಮ್ಮ ರಾಜ್ಯ ಮಾದರಿಯಾಗಬೇಕು. ಸಣ್ಣ ಸಣ್ಣ ರೈತರು ಹಸುಗಳನ್ನು ಸಾಕಲಾರದೆ ಕಟುಕರಿಗೆ ಮಾರುತ್ತಿದ್ದಾರೆ. ಗೋವಧೆಯನ್ನು ಆದಷ್ಟು ಜಾಗ್ರತೆ ನಿಲ್ಲಿಸಬೇಕು.

ಶ್ರೀ ಡಿ. ದೇವರ ಜ ಅರಸು (ಪಶುಪಾಲನೆ, ಮೀನುಗಾರಿಕೆ, ವಾರ್ತಾ ಮತ್ತು ಪ್ರಚಾರ ಶಾಖೆಗಳ ಮಂತ್ರಿಗಳು).— ಅವುಗಳಿಗೆ ಆಹಾರವನ್ನು ಎಲ್ಲಿಂದ ತರುವುದು ?

ಶ್ರೀ ವಾಟಾಳ್ ನಾಗರಾಜ್.—ಆಹಾರವಿಲ್ಲವೆಂದು ಅವುಗಳನ್ನು ಕೊಲ್ಲಬೇಡಿ.

ಶ್ರೀ ಸಿದ್ದಯ್ಯ ಕಾಶೀಮಠ.- ದನಗಳನ್ನು ಕೊಲ್ಲುವುದು ಸರಿಯಲ್ಲ, ಆ ಬಗ್ಗೆ ಒಂದು ಕ್ರಮವನ್ನು ತೆಗೆದುಕೊಂಡು, ಇನ್ನು ಮುಂದೆ ಕೊಲ್ಲದಂತೆ ನೋಡಿಕೊಳ್ಳಬೇಕು.

ಮತ್ತೆ ಪ್ರೊಹಿಬಿಷನ್ ಬಗ್ಗೆ ತಾವು ಇಲ್ಲಿ ಹೇಳುತ್ತಿದ್ದೀರಿ. ಇದರ ನೀತಿಯಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕೆಂದು. ಆದರೆ ನಾನು ಸೂಚಿಸುವುದು ಇದನ್ನು ಪೂರ್ತಿಯಾಗಿ ತೆಗೆಯುವುದೇ ಒಳಿತು. ಈಗ ಇರುವಂತೆಯೇ ಇನ್ನೂ ಸ್ವಲ್ಪ ಸಡಿಲಗೊಳಿಸಿದರೆ ಇದರಿಂದ ಪೋಲೀಸು ಇಲಾಖೆಯವರಿಗೆ ಅನುಕೂಲವಾಗುತ್ತದೆಯೇ ವಿನಾ ಬೇರೇನಿಲ್ಲ... ಈ ದೃಷ್ಟಿಯಿಂದ ಇದನ್ನು ಪೂರ್ತಿಯಾಗಿ ತೆಗೆದು ಹಾಕಬೇಕು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಈ ತಿಂಗಳು 30 ನೇ ತಾರೀಖು ನಮ್ಮ ಶ್ರವಣಬೆಳಗೊಳದಲ್ಲಿ ಮಹಾ ಮಸ್ತಕಾಭಿಷೇಕ ನಡೆಯುತ್ತದೆ. ಇದಕ್ಕೆ ಅಲ್ಲಿ ಬರುವವರ ಮೇಲೆ ತೆರಿಗೆಯನ್ನು ಹಾಕುತ್ತಿದ್ದೀರಿ. ಗೋಮಟೇಶ್ವರನ ದರ್ಶನ ಪಡೆಯುವುದಕ್ಕೋಸ್ಕರ ಹೊರಗಿನಿಂದ ಮತ್ತು ಈ ದೇಶದ ಇತರ ಭಾಗಗಳಿಂದ ಅನೇಕರು ಬರುತ್ತಿದ್ದಾರೆ. ಅವರುಗಳೆಲ್ಲಾ ಇವೊತ್ತು ಪ್ರತಿಯೊಬ್ಬರೂ 25 ಪೈಸೆಯಷ್ಟು ತೆರಿಗೆ ಕೊಡಬೇಕೆಂದು ತಲೆಗಂದಾಯದಂತೆ ಹಾಕುವುದು ಸರಿಯಲ್ಲ. ನಾನು ಸರಕಾರದಲ್ಲಿ ಒತ್ತಾಯ ಪೂರ್ವಕವಾಗಿ ಸೂಚನೆ ಮಾಡುವುದು, ಹೊರಗಿನಿಂದ ಲಕ್ಷಾಂತರ ಜನ ಇಲ್ಲಿಗೆ ಬರುವುದರಿಂದ ಇಂತಹ ತೆರಿಗೆಯನ್ನು ಆದಷ್ಟೂ ಕಡಿಮೆ ಮಾಡಬೇಕು ಇಲ್ಲವೇ ಪೂರ್ತಿಯಾಗಿ ತೆಗೆದು ಹಾಕಲಿ ಎಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ.

ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು)—ಮಾನ್ಯ ಅಧ್ಯಕ್ಷರೇ, ಅರ್ಥಮಂತ್ರಿಗಳಾದ ಶ್ರೀಮಾನ್ ಹೆಗ್ಗಡೆಯವರು ಮಂಡಿಸಿರುವ 1967-68ನೇ ಸಾಲಿನ ಆಯವ್ಯಯವನ್ನು ಅನುಮೋದಿಸುತ್ತಾ ನನ್ನ ಭಾಷಣವನ್ನು ಶುರು ಮಾಡುತ್ತೇನೆ.

ನಾನು ಈ ಸಭೆಗೆ ಹೊಸದಾಗಿ ಬಂದಿರತಕ್ಕವನು. ನಾನು ಇದುವರೆಗೂ ಇಲ್ಲಿ ಮಾನ್ಯ ವಿರೋಧಪಕ್ಷದ ಸದಸ್ಯರುಗಳು ಮಾಡಿರುವ ಟೀಕೆಗಳನ್ನು ಕೇಳಿದರೆ ಅದು ವಿಧಾಯಕವಾಗಿಲ್ಲವೆಂದು ನನಗನಿಸುತ್ತದೆ. ವಿಧಾಯಕವಾದ ಟೀಕೆ ಮಾಡುವುದರಿಂದ ಯಾವುದೇ ಅಧಿಕಾರ ಪಕ್ಷದವರೇ ಇರಲಿ ತಮ್ಮ ಕಾರ್ಯವನ್ನು ವಿಧಾಯಕವಾದ ರೀತಿಯಲ್ಲಿ ಮಾಡಲು ಅನುಕೂಲವಾಗುತ್ತದೆ.

SRI AZEEZ SAIT.—I rise to a point of order. It is that the Business of the House is 'vote an acco nt.' The Hon'ble Member is making a speech casting reflections on this House, which is quite against the vote on account.

[*Interruptions*]

ಉಪಾಧ್ಯಕ್ಷರು.—ಇದರಲ್ಲೇನೂ ಪಾಯಿಂಟ್ ಆಫ್ ಆರ್ಡರ್ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಅವರು ಯಾವುದೋ ಉದ್ದೇಶದಿಂದ ಹೇಳುತ್ತಾರೆ. ನೀವುಗಳು ಮಾತಾಡುವಾಗಲೂ ಅದರ ಬಗ್ಗೆ ಹೇಳಿ. ಇದರಲ್ಲೇನೂ ಇಲ್ಲ.

ಶ್ರೀ ಬಿ. ಎಂ. ಸಾಣಿಕೊಪ್ಪ.—ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಸುಮಾರು ಇಪ್ಪತ್ತು ವರ್ಷಗಳಾದುವು. ಕಾಂಗ್ರೆಸ್ಸಿನವರು ತ್ಯಾಗಮಾಡಿದುದರಿಂದ ಈ ದೇಶಕ್ಕೆ ಸ್ವಾತಂತ್ರ್ಯ ಬಂತು.

ಒಬ್ಬ ಮಾನ್ಯ ಸದಸ್ಯರು.—ಕಾಂಗ್ರೆಸ್ಸಿಗರೊಬ್ಬರೇ ಅಲ್ಲ. ಇತರರೂ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ್ದಾರೆ.

ಶ್ರೀ ಬಿ. ಎಂ. ಸಾಣಿಕೊಪ್ಪ.—ಆದರೂ ಮಾನ್ಯ ವಿರೋಧ ಪಕ್ಷದ ಸದಸ್ಯರಿಗೆ ಆಳುವ ಪಕ್ಷದವರು ಉತ್ತಮವಾಗಿ ಕೆಲಸಗಳನ್ನು ಮಾಡಿರುವುದು ಕಣ್ಣಿಗೆ ಕಾಣುತ್ತಿದ್ದರೂ ಅದನ್ನು ನೋಡದೆ ಇರುವುದು ಬಹಳ ಶೋಚನೀಯ ಎಂದು ಹೇಳುವುದು ನನ್ನ ಕರ್ತವ್ಯವಾಗಿದೆ. ಇದಕ್ಕಾಗಿ ನಾನು ಇಷ್ಟು ಮಾತ್ರ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಸರಕಾರದವರು ಕಳೆದ ಇಪ್ಪತ್ತು ವರ್ಷದಲ್ಲಿ ಬಹಳ ಪ್ರಗತಿಯನ್ನು ಸಾಧಿಸಿದ್ದಾರೆ ಎಂದು ಹೇಳುತ್ತೇನೆ. ಒಂದು ರಸ್ತೆಯೇ ಆಗಲಿ, ಒಂದು ನೀರಾವರಿ ವಿಚಾರದಲ್ಲಿಯೇ ಆಗಲಿ, ಜನರಿಗೆ ಆಹಾರಧಾನ್ಯವನ್ನು ಒದಗಿಸುವುದರಲ್ಲೇ ಆಗಲಿ ಸಾಕಷ್ಟು ಕೆಲಸ ಮಾಡಿದ್ದಾರೆ ಮತ್ತು ಮಾಡುತ್ತಲೂ ಇದ್ದಾರೆ. ಭ್ರಷ್ಟಾಚಾರವನ್ನು ಕಿತ್ತು ಹಾಕಿ ಅದನ್ನು ಇನ್ನೂ ಆದಷ್ಟು ಕಡಿಮೆ ಮಾಡಬೇಕು ಎಂದು ಸರಕಾರ ಪ್ರಯತ್ನ ಮಾಡುತ್ತಿದೆ. ಎಷ್ಟೋ ಕೆಲಸಗಳನ್ನು ಮಾಡಿದ್ದರೂ ಇನ್ನೂ ಬಹಳ ಕೆಲಸಗಳನ್ನು ಮಾಡುವುದು ಅವಶ್ಯವಿದೆ. ಈ ದೃಷ್ಟಿಯಿಂದ ಹೇಳುವಾಗ ನಮ್ಮ ಪ್ರಾಂತದಲ್ಲಿ ಎಷ್ಟೋ ಸಣ್ಣ ಸಣ್ಣ ನೀರಾವರಿ ಯೋಜನೆಗಳು ಆಗಿವೆ. ಆದರೂ ಅದರ ಪ್ರಗತಿ ಬಹಳ ಕಡಿಮೆ ಎಂದು ನಾನು ಇಲ್ಲಿ ವಿನಂತಿ ಮಾಡಿಕೊಳ್ಳಬೇಕಾಗಿದೆ. ದೊಡ್ಡ ನೀರಾವರಿ ಯೋಜನೆಗಳನ್ನು ಮಾಡಿದ್ದರೂ ಕೂಡ ಅದರ ಫಲ ದೊರಕುವ ಕಾಲಾವಧಿ ಬಹಳ ಬೇಕಾಗುತ್ತದೆ. ಆದುದರಿಂದ ಆದಷ್ಟು ಸಣ್ಣ ಸಣ್ಣ ನೀರಾವರಿಯೋಜನೆಯ ಕೆಲಸಗಳಿಗೆ ಪ್ರಾಶಸ್ತ್ಯ ಕೊಟ್ಟು ಅದನ್ನು ತೀವ್ರವಾಗಿ, ಎಂದರೆ, ಒಂದೆರಡು ವರ್ಷಗಳಲ್ಲೇ ಮುಗಿಯುವಂತಹ ಒಂದು ಕಾರ್ಯಕ್ರಮವನ್ನು ಸರಕಾರ ಹಾಕಿಕೊಳ್ಳಬೇಕು. ಈಗ ಇರಿಗೇಷನ್ ಒಂದನೇ ಕ್ಲಾಸು ಕೆರೆಗಳು ಮತ್ತು ಎರಡನೇ ಕ್ಲಾಸು ಕೆರೆಗಳು ಸರಕಾರ ಮಾಡಿರುವುದರಲ್ಲಿ ಸಾಕಷ್ಟು ಕೆಲಸಗಳು ಆಗಿಲ್ಲ. ಆದುದರಿಂದ ಸರ್ಕಾರ ಇನ್ನು ಮುಂದೆ ಒಂದನೇ ಕ್ಲಾಸು ಮತ್ತು ಎರಡನೇ ಕ್ಲಾಸು ಕೆರೆಕೆಲಸಗಳನ್ನು ತಮ್ಮ ಕಬ್ಜಕ್ಕೆ ತೆಗೆದುಕೊಂಡು ನೇರವಾಗಿ ಎಲ್ಲ ರಿಪೇರಿ ಕೆಲಸಗಳನ್ನು ಮಾಡಿಸಿಕೊಡಬೇಕು. ಸರಕಾರದವರು ದೊಡ್ಡಕೆರೆಗಳನ್ನು ಮಾಡಲು ಬೇಕಾದಷ್ಟು ಹಣ ಕೊಡುತ್ತಿದ್ದಾರೆ ಮತ್ತು ಸಣ್ಣ ಸಣ ಕೆರೆಗಳ ರಿಪೇರಿ ಕೆಲಸಗಳನ್ನು ಮಾಡುವಾಗ ರೈತರೇ ಅವರ ಭೂಮಿಯವರೆಗಿನ ಕಾಲುವೆಗಳನ್ನು ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದಾರೆ. ರೈತರು ಮಾಡುವುದು ಕಷ್ಟ. ಆದುದರಿಂದ ಸರಕಾರವೇ ರೈತರ ಭೂಮಿಯವರೆಗೂ ಕಾಲುವೆಗಳನ್ನು ತೆಗೆಸಿಕೊಡಬೇಕು ಎಂದು ಸಲಹೆ ಮಾಡುತ್ತೇನೆ. ನಮ್ಮಲ್ಲಿ ನವಿಲು ತೀರ್ಥದ ಯೋಜನೆ ಇದೆ. ಇದಕ್ಕೆ ಮೇಲುಭಾಗದಲ್ಲಿ ಅಸೋಗಾದ ಹತ್ತಿರ ಬುತ್ತೇವಾಡಿ ಹತ್ತಿರ ಎಂದು ಡ್ಯಾಂ ಕಟ್ಟಬೇಕು ಎಂದು ಮೊದಲು ಒಂದು ಯೋಜನಾ ಇತ್ತು.

(ಶ್ರೀ ಬಿ. ಎಂ. ಹಾಣಿಕೊಪ್ಪ)

ಈಗ ಅದೇನಾಯಿತೋ ನಮಗೆ ಗೊತ್ತಾಗಲಿಲ್ಲ. ಇದನ್ನು ಕೈಕೊಳ್ಳುವುದರಿಂದ ನವಿಲು ತೀರ್ಥದ ಯೋಜನೆಗೆ ಸಾಕಷ್ಟು ನೀರು ಬರುತ್ತದೆ. ಖಾನಾಪೂರ ತಾಲ್ಲೂಕಿನ ಅಣ್ಣಂಪೂರ ಮುತ್ತೀವಾಡಿ ಬಳಿ ಸುಮಾರು 100 ರಿಂದ 120 ಇಂಚುಗಳಷ್ಟು ಮಳೆ ಬರುವುದರಿಂದ ಸಾಕಷ್ಟು ನೀರು ಬರುತ್ತದೆ. ಇದರಿಂದ ಖಾನಾಪೂರ, ಬೈಲಹೊಂಗಲ್, ಬೆಳಗಾಂ ಈ ತಾಲ್ಲೂಕುಗಳೊಳಗೆ ಸುಮಾರು ಐವತ್ತು ಸಾವಿರ ಎಕರೆಯಷ್ಟು ಪ್ರದೇಶ ನೀರಾವರಿಗೆ ಬರುತ್ತದೆ ಮತ್ತು ಇದಕ್ಕಾಗಿ ಸುಮಾರು ಎಂಟು ಹತ್ತು ಕೋಟಿಯಷ್ಟು ಖರ್ಚು ಕೂಡ ಬರುತ್ತದೆ. ಈ ಯೋಜನೆಗಾಗಿ ತೀವ್ರವಾಗಿ ಖರ್ಚು ಮಾಡಿದರೆ ಮಲೆನಾಡಿನಲ್ಲಿ ಭತ್ತ ಬೆಳೆಯುವ ಪ್ರದೇಶಗಳಲ್ಲಿ ಮಳೆಯಾಗದಿದ್ದಾಗಲೂ ನೀರು ತಗೆದುಕೊಳ್ಳಲು ಅನುಕೂಲವಾಗುತ್ತದೆ ಅದರಿಂದ ಇಲ್ಲಿ ಒಂದು ಅಣೆಕಟ್ಟು ಆಗಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದೇ ಪ್ರಕಾರ ಕಳೆದು ಎರಡು ಮೂರು ವರ್ಷಗಳಿಂದಲೂ ನಮ್ಮಲ್ಲಿರುವ ನದಿಗಳಿಂದಲೂ ಹಳ್ಳಗಳಿಂದಲೂ ಬರುವ ನೀರನ್ನು ದಂಡೆಯಲ್ಲಿರುವ ಪ್ರದೇಶಗಳಿಗೆ ಅನುಕೂಲವಾಗಿ ಹಾಯಿಸಿಕೊಳ್ಳಲು ಲಿಫ್ಟ್ ಇರಿಗೇಷನ್ ಸ್ಕೀಂ ಮಾಡಿ ಅಲ್ಲಿಗೆ ಆಯಿಲ್ ಇಂಜನ್ ಹಾಗೂ ಪಂಪುಸೆಟ್ಟುಗಳನ್ನು ಜನರಿಗೆ ಬೇಗ ಒದಗಿಸಿಕೊಡಬೇಕು. ಈಗೇನೋ ಇಂತಹ ಸ್ಕೀಂಗಳಿದ್ದರೂ ಇದು ಅಷ್ಟು ಯಶಸ್ವಿಯಾಗಿಲ್ಲ ಎಂದು ನನಗನಿಸುತ್ತವೆ. ಲಿಫ್ಟ್ ಇರಿಗೇಷನ್ ಸ್ಕೀಂನ್ನು ಮಾಡುವುದು ಅವಶ್ಯವಿದೆ. ಇದಕ್ಕೆ ಪ್ರತ್ಯೇಕವಾದ ಐ. ಪಿ. ಸೆಟ್ಟುಗಳನ್ನು ಆಯಿಲ್ ಇಂಜಿನ್‌ಗಳನ್ನು ಸುಲಭವಾಗಿ ಮತ್ತು ಬೇಗನೆ ಜನರಿಗೆ ಸಿಗುವ ಹಾಗೆ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು. ನಮ್ಮ ಬೆಳಗಾಂ ಜಿಲ್ಲೆಯಲ್ಲಿರುವ ಮುಗಟಗಾನ ಹುಬ್ಬಳ್ಳಿ. ತೇರ ಕೊಪ ಇಂತಹ ಕಡೆಗಳಲ್ಲಿ ಇದರ ಅವಶ್ಯಕತೆ ಹೆಚ್ಚಾಗಿದೆ. ಮಲಪ್ರಭಾ ನದಿದಂಡೆಗೆ ಒಂದು ಲಿಫ್ಟ್ ಇರಿಗೇಶನ್ ಸ್ಕೀಮ್ ಮಂಜೂರ ಆಗಿದೆ. ತೇರ ಕೊಪ್ಪದಲ್ಲಿ 1,10,000 ಸಾವಿರ ರೂಪಾಯಿಗಳ ಯೋಜನೆ ತಯಾರು ಆಗಿದೆ ಮತ್ತು ಇದರಿಂದ ಸುಮಾರು ಸಾವಿರ ಎಕರೆಯಷ್ಟು ಪ್ರದೇಶದಲ್ಲಿ ನೀರಾವರಿ ಕೆಲಸಗಳನ್ನು ಮಾಡಬಹುದು. ಇಂತಹ ಹತ್ತು ಹದಿನೈದು ಯೋಜನೆಗಳು ನಮ್ಮ ಬೆಳಗಾಂನಲ್ಲಿ ಬಹು ತೀವ್ರವಾಗಿ ಆಗಬೇಕಾಗಿದೆ ಮತ್ತು ಅವರಿಗೆಲ್ಲಾ ಸಕಾಲದಲ್ಲಿ ಆಯಿಲ್ ಇಂಜಿನ್ ಹಾಗೂ ಪಂಪು ಸೆಟ್ಟುಗಳನ್ನು ಕೊಡುವ ವ್ಯವಸ್ಥೆ ಮಾಡಬೇಕು. ಆದರೆ ಈಗ ಐ. ಪಿ. ಸೆಟ್ಟುಗಳನ್ನು ಕೊಡುವ ವಿಧಾನದಲ್ಲಿ ಬಹಳ ನಿಧಾನವಾಗುತ್ತಿದೆ. ಒಂದು ಅರ್ಜಿ ಪಂಪು ಸೆಟ್ಟುಗಳಿಗಾಗಿ ಕೊಟ್ಟರೆ ಅದನ್ನು ಎರಡು ತಿಂಗಳೊಳಗಾಗಿಯೇ ಜನರಿಗೆ ಸಿಗುವಂತೆ ತಕ್ಕ ವ್ಯವಸ್ಥೆ ಮಾಡಬೇಕು. ಈಗ ಗ್ರಾಮಸ್ಥರಿಗೆ ಇದು ಬಹಳ ತಡವಾಗಿ ಸಿಗುತ್ತಿದೆ. ಮಹಾರಾಷ್ಟ್ರ ಪ್ರಾಂತದಲ್ಲಿ ಒಂದು ಅರ್ಜಿ ಪಂಪುಸೆಟ್ಟು ಕೊಡಲು ಸರಕಾರಕ್ಕೆ ಕೊಟ್ಟರೆ ಅದನ್ನು 15 ದಿನದೊಳಗಾಗಿ ಇತ್ಯರ್ಥ ಮಾಡಿ ಪಂಪುಸೆಟ್ಟುಗಳನ್ನು ಕೊಡುವ ಒಂದು ಕಾರ್ಯಕ್ರಮ ಮಾಡಿದ್ದಾರೆ. ಅದೇ ರೀತಿಯ ಒಂದು ಕಾರ್ಯಕ್ರಮವನ್ನು ಇಲ್ಲೂ ಮಾಡಬೇಕೆಂದು ಹೇಳುತ್ತೇನೆ.

ಬೆಳಗಾಂವ ಜಿಲ್ಲೆಯಲ್ಲಿ ವಿದ್ಯುತ್ ಶಕ್ತಿಯು ಸಾಕಷ್ಟು ದೊರೆಯುತ್ತಿದೆ. ಅನೇಕ ರೈತರು ಐ.ಪಿ. ಸೆಟ್ಟುಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ಆದರೆ ಐ.ಪಿ. ಸೆಟ್ಟಗಳನ್ನು ಕೂಡ್ರಿಸುವುದಕ್ಕೆ ಸುಪರ್‌ವೈಜರ್ ಇಲ್ಲಾ, ಟೆಕ್ನಿಕಲ್ ಹ್ಯಾಂಡ್ ಇಲ್ಲಾ ಎಂದು ಮುಂದೂಡುತ್ತಿದ್ದಾರೆ, ಮಂಜೂರಾದ ಸ್ಥಳಗಳಲ್ಲಿ ಐ.ಪಿ. ಸೆಟ್ಟುಗಳನ್ನು ತೀವ್ರವಾಗಿ ಕೊಡಿಸಬೇಕು ಎಂದು ಹೇಳುತೇನೆ. ಅದರಂತೆ ನೀರಾವರಿ ಬಾವಿಗಳಿಗೆ ತೀವ್ರವಾಗಿ ಸಾಲ ದೊರೆಯುವ ಹಾಗೆ ಮಾಡಬೇಕು.

3-30 P.M.

ಇನ್ನು ಒಕ್ಕಲತನಕ್ಕೆ ಬೇಕಾಗುವ ಬೀಜ ಗೊಬ್ಬರ ಇವುಗಳನ್ನು ಸಕಾಲಕ್ಕೆ ಪೂರೈಸುವಂತೆ ಮಾಡಬೇಕು. ಬಿತ್ತನೆ ಕೆಲಸ ಪ್ರಾರಂಭಿಸುವುದಕ್ಕೆ 15 ದಿವಸ ಮುಂಚಿತವಾಗಿ ಬೀಜ ರೈತರಿಗೆ ಸಿಕ್ಕುವಂತಾಗಬೇಕು. ಹೈ ಬ್ರೀಡ್ ಜೋಳ ಬಾಜರಿ ಬೀಜಗಳು ಸಕಾಲಕ್ಕೆ ಯೋಗ್ಯ

ಬೀಜ ಸಿಕ್ಕುವುದಿಲ್ಲ. ನಾನು ಒಬ್ಬ ರೈತನಾಗಿದ್ದೇನೆ. ಹತ್ತು ಎಕರೆ ಭೂಮಿ ತಯಾರ್‌ಮಾಡಿ ಹೈಬ್ರಿಡ್ ಗೋವಿನ ಜೋಳದ ಬೀಜ ಹಾಕಿದರೂ ಕೂಡ ಅದು ಸಹ ನೆಡಲಿಲ್ಲ. ನ್ಯಾಷನಲ್ ಸೀಡ್ ಕಾರ್ಪೊರೇಷನ್ ಅವರು ಉತ್ತಮ ಬೀಜ ಪೂರೈಸುವುದಿಲ್ಲ ಎಂದು ಕಾಣುತ್ತದೆ. ಇಂತಿಷ್ಟು ದಿವಸಗಳಲ್ಲಿ ಬೀಜ ಬಿತ್ತಬೇಕು ಎಂದು ಹೇಳುತ್ತಾರೆ. ಉತ್ತಮ ಬೀಜ ಸಿಕ್ಕುವಂತೆ ಮಾಡಬೇಕಾದುದು ಅಗತ್ಯ. ಯೋಗ್ಯವಾದ ಹಾಗೂ ಟೆಸ್ಟ್ ಮಾಡಿ ಸರ್ಟಿಫೈ ಮಾಡಿದ ಉತ್ತಮ ಬೀಜ ರೈತರಿಗೆ ಸಿಕ್ಕುವಂತೆ ಮಾಡಿಕೊಡಬೇಕು.

ಈಗ ದೇಶದಲ್ಲಿ ಪ್ರೈಮರಿ ಹೆಲ್ತ್ ಯುನಿಟ್ಟುಗಳು ಬಂದಿದ್ದರೂ ಸಹ, ಸ್ಯಾಂಕ್ಷನ್ ಆಗಿ ಎರಡು ಮೂರು ವರ್ಷಗಳಾಗಿದ್ದರೂ ಕೂಡ, ರೈತರು ಹನ್ನೆರಡು ಸಾವಿರ ರೂಪಾಯಿ ಹಣ ಕೊಟ್ಟಿದ್ದರೂ ಕೂಡ ಅನೇಕ ಕಡೆ ಬಿಲ್ಡಿಂಗ್ ಆಗಿಲ್ಲ, ಕೆಲವು ಕಡೆ ಡಾಕ್ಟರ್ಸ್ ಇಲ್ಲಾ, ಕಾಂಪೌಂಡರ್ಸ್ ಇಲ್ಲಾ, ಮಿಡ್-ವೈಫ್ ಸಿಕ್ಕದೇ ಇರುವುದು ಬಹಳ ದುಃಖದ ಸಂಗತಿಯಾಗಿದೆ. ಇದಕ್ಕೆ ತೀವ್ರ ವ್ಯವಸ್ಥೆ ಮಾಡಬೇಕಾದುದು ಅಗತ್ಯ. ಬೈಲಹೊಂಗಲ ತಾಲ್ಲೂಕಿನಲ್ಲಿ ಕಿತ್ತೂರು ನಾಗನೂರು ಮತ್ತು ಖಾನಾಪುರ ತಾಲ್ಲೂಕಿನಲ್ಲಿ ಕಕ್ಕೇರಿ ಗ್ರಾಮಗಳಲ್ಲಿ ಜನರು ಹಣ ಕೊಟ್ಟಿದ್ದರೂ ಕೂಡ ಇನ್ನೂವರೆಗೆ ಬಿಲ್ಡಿಂಗ್ ಆಗಿಲ್ಲ. ಅಲ್ಲಿ ಬಿಲ್ಡಿಂಗ್ ಆಗುವಂತೆ ನೋಡಿಕೊಳ್ಳಬೇಕು.

ಇನ್ನು ಒಂದು ಸಣ್ಣ ನೀರಾವರಿ ಯೋಜನೆ ಮಾಡುವುದಕ್ಕೆ ಎರಡು ಮೂರು ಲಕ್ಷ ರೂಪಾಯಿ ಖರ್ಚು ಮಾಡಿ ಒಂದು ನೀರಾವರಿ ಟ್ಯಾಂಕು ಮಾಡಲಾಗುತ್ತದೆ. ಮೊದಲು ಯೋಜನೆ ಸಿದ್ಧಪಡಿಸಿ ಆ ಮೇಲೆ ಸರ್ವೇ ಮಾಡುತ್ತಾರೆ. ಟೆಂಡರ್ ಬಂದನಂತರ ಕೆಲಸ ಪ್ರಾರಂಭಿಸುವಾಗ್ಗೆ ಜಮೀನು ಕೊಡುವುದಿಲ್ಲ ಎಂದು ಕೆಲವರು ಹರಕತ್ತು ಮಾಡುತ್ತಾರೆ. ಇಂಥ ಸಂದರ್ಭದಲ್ಲಿ ತೀವ್ರ ಕ್ರಮ ತೆಗೆದುಕೊಂಡು ನೀರಾವರಿ ಯೋಜನೆಗೆ ಭೂಮಿ ಸಿಕ್ಕುವಂತೆಯಾಗಬೇಕು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಇಪ್ಪತ್ತು ವರ್ಷಗಳಾಗಿದ್ದರೂ ಕೂಡ ಹಳ್ಳಿಗಳಿಂದ ತಾಲ್ಲೂಕ ಸ್ಥಳಕ್ಕೆ ಜಿಲ್ಲಾಸ್ಥಳಕ್ಕೆ ಹೋಗುವುದಕ್ಕೆ ಸರ್ತೆಗಳಿಲ್ಲ. ನಮ್ಮ ದೇಶದಲ್ಲಿ ರಸ್ತೆ ಇಲ್ಲದ ಸಾವಿರಾರು ಹಳ್ಳಿಗಳಿವೆ. ಈ ರೀತಿ ಪರಿಸ್ಥಿತಿ ಇದ್ದರೂ ಕೂಡ ನ್ಯಾಷನಲ್ ಹೈವೇಸ್, ಇಂಟರ್ ಸ್ಟೇಟ್ ರಸ್ತೆ ಮಾಡಿದ್ದೀರಿ. ಹಳ್ಳಿಯ ಜನರಿಗೆ ಒಂದು ಸುವ್ಯವಸ್ಥಿತವಾದ ರಸ್ತೆ ಮಾಡುವುದು ಇಂದಿನ ಸಂದರ್ಭದಲ್ಲಿ ಅಗತ್ಯವಾಗಿದೆ. ಬರಗಾಲದಲ್ಲಿ ಮಾಡಿದ ನೂರಾರು ಮೈಲಿ ಕಚ್ಚಾರಸ್ತೆ ನಮ್ಮ ಜಿಲ್ಲೆಯಲ್ಲಿದೆ. ದುರಸ್ತಿಯಾಗದೇ ಇರುವುದರಿಂದ ಅಂಥ ರಸ್ತೆ ಕೆಟ್ಟು ಹೋಗಿವೆ. ಆದುದರಿಂದ ದುರಸ್ತಿ ಕೆಲಸ ಸರಕಾರ ಕೈಕೊಳ್ಳಬೇಕು.

ಇನ್ನು ಶಾಲೆಗಳ ವಿಚಾರ ಹೇಳುವುದಾದರೆ, ಅನೇಕ ಕಡೆ ಪಂಚಾಯಿತಿಗಳು ಕೊಡಬೇಕಾದ ಹಣ ಕೊಟ್ಟಿಲ್ಲ ಎಂದು ಶಾಲೆಗಳು ಆಗಿಲ್ಲ. ಇದಕ್ಕೆ ತೀವ್ರ ಗಮನ ಕೊಟ್ಟು ಸರ್ಕಾರದವರು ಉದಾರ ಹಸ್ತದಿಂದ ಹಣಕೊಟ್ಟು ಶಾಲೆಗಳನ್ನು ಮಾಡಿಸಬೇಕು ಎಂದು ಸೂಚಿಸುತ್ತೇನೆ.

ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಎಲ್ಲ ಕಡೆ ಸರಕಾರದವರು ಭತ್ತ ಲೆವಿ ತೆಗೆದುಕೊಳ್ಳುತ್ತಿದ್ದಾರೆ. ಈ ವರ್ಷ ನಮ್ಮ ಭಾಗದಲ್ಲಿ ಹಿಂಗಾರಿ ಮಳೆ ಜಾಸ್ತಿಯಾಗಿ ಭತ್ತ ಕೆಟ್ಟು ಹೋಯಿತು. ಬರಬೇಕಾದ ಬತ್ತದ ಪೀಕು ಬರಲಿಲ್ಲ. ಜನರಿಗೆ ಬಹಳ ತೊಂದರೆಯಾಗಿದೆ. ಆದರೂ ಕೂಡ ಲೆವಿ ವಸೂಲು ಮಾಡಿದ್ದಾರೆ. ಇನ್ನು ಮೇಲೆಯಾದರೂ ಲೆವಿ ವಸೂಲ್‌ಮಾಡಬಾರದು. ಲೆವಿ ಕೊಟ್ಟ ಮೇಲೆ ಉಳಿದ ಕಾಳನ್ನು ಮಾರ್ಕೆಟ್ಟಿನಲ್ಲಿ ಮಾರಾಟ ಮಾಡುವುದಕ್ಕೆ ರೈತರಿಗೆ ಅನುಕೂಲವಾಗುವಂತೆ ತಲಾಟಿಯು ಒಂದು ಸರ್ಟಿಫಿಕೇಟ್ ಕೊಡುವುದಕ್ಕೆ ಅವಕಾಶವಿದೆ. ಈ ಬಗ್ಗೆ ಸರಕಾರ ತೀವ್ರ ವ್ಯವಸ್ಥೆ ಮಾಡಬೇಕು ಎಂದು ಸೂಚಿಸುತ್ತೇನೆ.

ಈ ವರ್ಷ ಅಲ್ಲಲ್ಲಿ ಗೋದಿ, ಜೋಳ ಬೆಳೆ ಸಂಪೂರ್ಣವಾಗಿ ನಾಶವಾಗಿ ಹೋಗಿದೆ. ಆದುದರಿಂದ ಅಂಥ ಪ್ರದೇಶದಲ್ಲಿ ಲೆವಿ ವಸೂಲ್‌ಮಾಡುವುದನ್ನು ಬಂದ್ ಮಾಡಬೇಕು. ಅಲ್ಲದೆ ಅಂಥಲ್ಲಿ ಹಪ್ತೆ ಸೂಟ ಮಾಡಬೇಕು. ಆ ಪ್ರದೇಶದಲ್ಲಿ ತಕ್ಷಣ ಬರಗಾಲ ಕಾಮಗಾರಿ ಪ್ರಾರಂಭ

(ಶ್ರೀ ಬಿ. ಎಂ. ಸಾಣಿಕೊಪ್ಪ)

ಮಾಡಬೇಕು ಎಂದು ಹೇಳಲು ಬಯಸುತ್ತೇನೆ. ಕೊನೆಯದಾಗಿ ನನಗೆ ಈ ನಾಲ್ಕು ಮಾತು ಹೇಳುವುದಕ್ಕೆ ಅವಕಾಶ ಕೊಟ್ಟದ್ದಾಕ್ಕಾಗಿ ಅದ್ಯಕ್ಷರಿಗೆ ದನ್ಯವಾದಗಳನ್ನು ಅರ್ಪಿಸಿ ನನ್ನ ಮಾತು ಮುಗಿಸುತ್ತೇನೆ.

†Sri Azeez Sait.—Mr. Speaker, Sir we have heard a lot from the Treasury Benches but yet I do not want to take much of the time of the House, except certain points. The administration in our country is of the same order of the British regime. To have a strong hold on this country, the British had created this sort of an administration and probably that is how the Secretariat was set up; But now when we have the people's Government, we have to change the entire administrative set up and the District administration should be made answerable to the people. Instead of the popular Ministry taking the reigns of administration into their hands, it is in the hands of the I.A.S. Officers. This administrative machinery has grown so much that even the legislature has no voice in the matter. Only the I.A.S. Secretary is answerable to the Minister and the Minister answerable to the secretariat and not the people. The people in the villages and Taluks and Districts are in a miserable position. The farmers of this country want the three tier administration and it should be from 'Halli' to 'Delhi' and not from 'Delhi' to 'Halli' (Village). This administration has failed to meet the requirements of commonman in this country. Therefore, I feel that entire administrative set up should be changed in the light of democratic socialism which has been accepted by the Congress Governments. Till now it was socialistic pattern of society. Sir, so far the Government have not determined to their policy to set right the administration. To support this view I can quote two illustrations from the Audit Report.

I may tell my Hon'ble friends that by the word socialism. it would mean that the rich do not become richer like Birlas, Tatas and Dalmias. Before the independence there were only 7 multi-millionaires and today their number has increared to 137. The poor have become poorer and the rich have become richer. After 1947, those persons who had nothing to eat, not a house to live in, today possess properties worth 15 to 20 lakhs just because they call themselves as Gandhi Bhaktas.

Mr. Deputy Speaker.—The Hon'ble member may please speak on the subject which is before the House.

Sri D. Devaraj Urs.—I may point out that the Hon'ble member is pouring both hot and could together. In one breath he says the poor have become pocrer and in another he says that they have become rich.

Sri Azeez Sait.—I said that after 1947 and after they came to power. ನಾನು ಹೇಳಿದ್ದು ಸರಿಯಾಗಿದೆ ಬೇಕಾದರೆ ಅದು ಸರಿಯಲ್ಲವೆಂದು ವಾದಿಸ ಬಹುದು.

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರೂ ರೂಲಿಂಗಪಕ್ಷದಲ್ಲಿದ್ದರು ಅವರಿಗೆ ವಿಚಾರವೆಲ್ಲಾ ಗೊತ್ತಿದೆ.

ಶ್ರೀ ಅಜೀಜ ಸೇಟ.—ಹೌದು ಎಲ್ಲಾ ನೋಡಿಯೇ ನಾನು ಆ ಪಕ್ಷವನ್ನು ಬಿಟ್ಟೆ. I will just take the Audit report on page 48 it is stated that "an amount of Rs. 77 lakhs is outstanding for recovery as in May 1966 towards cost of milk supplied to customers. Out of this amount, a sum of Rs. 33 lakhs is due from customers who have discontinued taking milk from the farm. Yearwise break-up for the outstanding amount is not available with the farm. Statements of demand, collection and balance are not prepared periodically." The state of affairs of the farm is like this. The receipt and expenditure of the farm is like this:

		Receipts	Expenditure	Excess of expenditure over receipts
1961-62	...	0.26	1.23	.87 lakhs
1965-66	...	0.55	1.44	.89

Nobody seems to be bothered about this. The poor men are taxed; if a poor man is not able to pay taxes, coercive measures are taken, action is taken to attach his property but here they seem to take it lightly. The other day the Leader of the Opposition asked what was the amount spent on Ministers' Establishment in the Quarters and on other things.

I want to invite the attention of the Hon'ble members to another instance where an official was suspended in the year 1951.

> "A fieldman of the Department of Agriculture is under suspension for over 15 years. He was suspended from the 22nd June 1951 and in September 1953 Government ordered his dismissal after recovering an amount of Rs. 2,394 assessed towards shortages in stock for which he was held responsible. An amount of Rs. 767 was recovered and the balance was written off by Government in March 1962, and in October 1962, the Director of Agriculture passed orders dismissing the employee from service from the 22nd June 1961.
>
> On an appeal filed by the ex-fieldman in January 1964, Government set aside the dismissal in November 1964, holding that the previous orders violated the provisions of the Constitution inasmuch as a specific chance had not been afforded to the employee. A fresh enquiry was ordered and the official was treated as under suspension from the 22nd June 1951. A 50 per cent increase in the subsitence allowance had also been allowed from June 1959 for the reason that the delay in the case was not attributable to the official.
>
> The subsistence and other allowances of the official up to May 1965 amounted to about Rs. 5,000. Government stated in October 1966 that the report of the fresh enquiry was received with the findings of the enquiry officer in September 1966 and that it was under their consideration."

(ಶ್ರೀ ಅಜೀಜ್ ಸೇಟ್)

ಸಸ್ಪೆಂಡ್ ಮಾಡಿ ಬರಬೇಕಾದ ಹಣ ಕೊಂಚ ವಸೂಲುಮಾಡಿ ಅನಂತರ ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ ಎಂದು.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ-ರೂರಲ್).—ನಾನೊಂದು ಕ್ರಿಯಾಲೋಪವನ್ನು ಸೂಚಿಸುತ್ತೇನೆ. ಇಂಗ್ಲೀಷಿನಲ್ಲಿ ಭಾಷಣ ಪ್ರಾರಂಭಿಸಿದ ಮೇಲೆ ಆಭಾಷೆಯಲ್ಲೇ ಮುಂದುವರೆಸಬೇಕಾಗಿತ್ತು. ಆದರೆ ಕನ್ನಡದಲ್ಲಿ ಮುಂದುವರೆಸುತ್ತಿದಾರೆ. ಹಾಗೆ ಭಾಷಣದ ಮಧ್ಯೆ ಭಾಷೆ ಬದಲಾಯಿಸಬಾರದೆಂದು ಪ್ರೊಸೀಜರ್ ಇದೆ. ಅದರಂತೆ ನಡೆದುಕೊಂಡಿಲ್ಲ. ಆದುದರಿಂದ ಈ ವಿಚಾರದಲ್ಲಿ ರೂಲಿಂಗ್ ಕೊಡಬೇಕೆಂದು ಒತ್ತಾಯಮಾಡುತ್ತೇನೆ.

Mr. DEPUTY SPEAKER.—The Hon'ble Member may speak in one language.

Sri AZEEZ SAIT.—We have 14 languages in the Schedule and in whichever language I can try to conveniently understand I am speaking. Unfortunately some of the words I cannot understand.

Mr. DEPUTY SPEAKER.—The allotted time is over.

Sri AZEEZ SAIT.—I will close within ten minutes. Our friend have taken much of my time.

Mr. DEPUTY SPEAKER.—Finally I will give the Hon'ble Member five minutes and he must conclude within that.

Sri AZEEZ SAIT.— As regards the law and order position, it has been mentioned in the Governor's Address that it is very satisfactory. I want to give some figures from the Review of the Governments Departments submitted by the Finance Department. In 1961 the number of murders was 653 and in 1966 it shot up to 752. In 1961 the number of decoities was 69 and in 1966 it went up to 94. In 1961, the number of robberies was 154 and in 1966 it came down by 10. In 1961, the number of house-breaking and thefts was 4,705 and in 1966 it increased to 6,775. The number of ordinary thefts was 8,409 and it went up to 10,683 in 1966. In 1961, the number of cattle thefts was 711 and it rose to 972 in 1966. This is the state of affairs in 1966 so far as the law and order situation is concerned and yet the Gorernor was pleased to say that the law and order position was maintained quite well. I am at a loss to understand whether we are honest to our conscience. After all, we are administering this country and we are answerable to two and a half crores of people. What transpired during election times ? I do not know whether we should shed tears or blood. My community is a minority community and during the election for having voted they became a victim in one place and for having not voted they became a victim in another place. This is how law and order was maintained. There is definitely something wrong. The officers at the top are dancing to the tunes of rhe Ministers. This is a sorry state of affairs. For want of time I only want to say one word. It is high time that the Congress which is boasting of a majority should read the writing on the wall. If they do not see it and if they

become blind, a time will come when they will be shown their place and they will have to repent.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಹಣಕಾಸಿನ ಸಚಿವರು ಬಡ್ಜೆಟ್‌ನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅವರು ಬಹಳ ಅನುಭವಿಗಳಾಗಿ ಸಾಕಷ್ಟು ಮುಖ್ಯವಾದ ಅಂಶಗಳಿಂದ ಕೂಡಿರತಕ್ಕ ರೀತಿಯಲ್ಲಿ ಇದನ್ನು ಇಟ್ಟಿದ್ದಾರೆ. ಆದರೆ ಕೆಲವೊಂದು ವಿಷಯಗಳನ್ನು ಮಾತ್ರ ಅವರ ಗಮನಕ್ಕೆ ತರಬೇಕೆಂದು ಪ್ರಯತ್ನಪಟ್ಟಿದ್ದೇನೆ. ಈ ಮಲೆನಾಡು ಪ್ರದೇಶ ಸಾಮಾನ್ಯವಾಗಿ ಮೈದಾನ ಪ್ರದೇಶವನ್ನು ತೆಗೆದುಕೊಂಡರೆ ಅದಕಿಂತ ಬಹಳ ವ್ಯತ್ಯಾಸ ದಿಂದ ಕೂಡಿರತಕ್ಕದ್ದಾಗಿದೆ. ಹವಾಮಾನ ಇತ್ಯಾದಿ ಅನೇಕ ರೀತಿಗಳಿಂದ ಇದರ ಬಗ್ಗೆ ಈ ಹಿಂದೆ ನಮ್ಮ ಸರ್ಕಾರದವರು ಮಲೆನಾಡು ಅಭಿವೃದ್ಧಿ ಯಾವ ರೀತಿಯಲ್ಲಿ ಆಗಬೇಕೆಂಬುದನ್ನು ವಿಮರ್ಶೆಮಾಡಲು ಒಂದು ಕಮಿಟಿಯನ್ನು ಮಾಡಿದ್ದರು. ಆ ಕಮಿಟಿಯವರು ಸಂಪೂರ್ಣವಾದ ಒಂದು ರಿಪೋರ್ಟನ್ನು ಕೊಟಿದ್ದಾರೆ. ಆ ರಿಪೋರ್ಟನಂತೆ ಸರ್ಕಾರದವರು ಯಾವ ಕಾರ್ಯ ಕ್ರಮವನ್ನೂ ಕೂಡ ಈ ವರಗೆ ತೆಗೆದುಕೊಂಡಿರತಕ್ಕದ್ದು ನಮಗೆ ಕಂಡು ಬಂದಿಲ್ಲ. ನಾನು ಸರ್ಕಾರದ ಮುಂದೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಈ ಮಲೆನಾಡು ಪ್ರದೇಶಗಳಿಗೆ ಅನೇಕ ರೀತಿಯ ರಿಯಾಯಿತಿಗಳು ಬೆಕಾಗುತ್ತವೆ. ಆ ರಿಪೋರ್ಟ್‌ನ್ನು ವಿಮರ್ಶೆ ಮಾಡಿ ಅದಕ್ಕೆ ತಕ್ಕ ಅನುಕೂಲತೆಗಳನ್ನು ಮಾಡುತ್ತಾರೆ ಎಂದು ನಾನು ನಂಬಿದ್ದೇನೆ.

ರಸ್ತೆಗಳ ವಿಚಾರದಲ್ಲಿ ಮಾತನಾಡುವುದಾದರೆ ನಮ್ಮ ಮಲೆನಾಡಿನ ತೊಂದರೆ ಬಹಳವಾಗಿ ಇದೆ. ಈಚೆಗೆ ತಾಲ್ಲೂಕು ಬೋರ್ಡ್ ರಚನೆಯಾದ ಮೇಲೆ ಐದು ಪರ್ಸೆಂಟ್ ದಾಮಾಶಾ ಮೇಲೆ ಕೆಲವು ಗ್ರಾಂಟ್ ಕೊಡುವುದಕ್ಕೆ ಅವಕಾಶ ಮಾಡಿದ್ದಾರೆ. ಅದನ್ನು ಪಾಪ್ಯುಲೇಷನ್ ಬೇಸಿಸ್ ಮೇಲೆ ಕೊಡಬೇಕು. ಪರ್ ಕ್ಯಾಪಿಟಾ ವರ್ಕ್ ಮಾಡಿ ಅದರ ಮೇಲೆ ಕಡಿಮೆಯಾದರೆ ಮಾತ್ರ ಗ್ರಾಂಟ್ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ನಮ್ಮ ಮಲೆನಾಡಿನಲ್ಲಿ ಜನಸಂಖ್ಯೆ ಬಹಳ ಕಡಿಮೆ ಇದೆ. ಎರಡು ಮೂರು ಮನೆಗಳು ಇರತಕ್ಕ ಪ್ರದೇಶಗಳಿಗೂ ಕೂಡ ರಸ್ತೆಯಾಗಲಿ, ಕುಡಿಯುವ ನೀರಿನ ಬಾವಿಗಳನ್ನಾಗಲಿ ಮಾಡಬೇಕು. ಕಂದಾಯವನ್ನು ಸಾಕಾದಷ್ಟು ಜಾಸ್ತಿ ಮಟ್ಟದಲ್ಲಿ ಕೊಡುತ್ತೇವೆ. ನಾವು ಕೊಡತಕ್ಕ ಬಾಗಾಯ್ತು ಕಂದಾಯವಾಗಲಿ, ತರೀ ಕಂದಾಯ ವಾಗಲಿ ಜಾಸ್ತಿ ಆಗುತ್ತದೆ. ಆ ರೀತಿಯಲ್ಲಿ ಪರ್ ಕ್ಯಾಪಿಟಾ ವರ್ಕ್ ಮಾಡುವಾಗ ನಮಗೆ ಗ್ರಾಂಟ್ ಬರುವುದಕ್ಕೆ ಅವಕಾಶವಿಲ್ಲದ ಹಾಗೆ ಆಗಿ ಮಲೆನಾಡಿನ ಅಭಿವೃದ್ಧಿ ಸಂಪೂರ್ಣವಾಗಿ ಕುಂದಿಹೋಗಿದೆ. ಆ ವಿಷಯದಲ್ಲಿ ಸರ್ಕಾರದವರು ವಿಮರ್ಶೆ ಮಾಡಿ ಮಲೆನಾಡು ಪ್ರಾಂತ್ಯಕ್ಕೆ ಸ್ವಲ್ಪಮಟ್ಟಿನ ಹೆಚ್ಚಿನ ಅವಕಾಶವನ್ನು ಅದರಲ್ಲಿ ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ಅನೇಕ ಐ.ಡಿ.ಸಿ. ರಸ್ತೆಗಳನ್ನು ಮಾಡಿದ್ದಾರೆ. ಅದಕ್ಕೆ ಲಕ್ಷಾಂತರ ರೂಪಾಯಿಗಳು ಖರ್ಚಾಗಿದೆ. ಸರ್ಕಾರದ ದುಡ್ಡೆ ಖರ್ಚಾಗಿರುವುದು. ಅದು ಈಗ ತಾಲ್ಲೂಕು ಬೋರ್ಡಿಗೆ ಹೋಗಬೇಕೇ ಅಥವಾ ಸರ್ಕಾರದವರೇ ವಹಿಸಿಕೊಳ್ಳಬೇಕೇ ಅನ್ನುವ ದರ್ಜೆಯಲ್ಲಿ ಯಾವ ತೀರ್ಮಾನವೂ ಆಗದೇ ಅದು ಹಾಗೆಯೇ ಉಳಿದಿದೆ. ಮಳೆಯಿಂದ ವಿಪರೀತವಾಗಿ ಹಾನಿಯಾಗಿ ಅದಕ್ಕೆ ಹಾಕಿರತಕ್ಕ ಹಣವೆಲ್ಲಾ ಅನ್ಯಾಯವಾಗಿ ಹೋಗುತ್ತಾ ಇದೆ. ಆ ವಿಚಾರದಲ್ಲಿ ಅನೇಕ ಬಾರಿ ಸರ್ಕಾರದ ಮುಂದೆ ಹೇಳಿ ದ್ದೇವೆ ಈ ವರೆಗೂ ಕೂಡ ಆ ಕಡೆ ಸರ್ಕಾರದವರು ಹೆಚ್ಚು ಗಮನ ಕೊಟ್ಟಿಲ್ಲ. ಆ ಬಗ್ಗೆ ಗಮನ ಕೊಟ್ಟು, ಹೊಸದಾಗಿ ರಸ್ತೆ ಮಾಡುವುದಕ್ಕಿಂತಲೂ ಪ್ರಾಮುಖ್ಯವಾಗಿ ಮಾಡಿರತಕ್ಕ ರಸ್ತೆಗಳನ್ನು ಉಳಿಸುವುದಕ್ಕೆ ಗಮನ ಕೊಡಬೇಕೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಕಂಟ್ರಾಕ್ಟ್ ವಿಷಯದಲ್ಲಿ ಒಂದು ದೊಡ್ಡ ತೊಂದರೆಯಾಗಿದೆ. ಶ್ರೀಮಾನ್ ಚೆನ್ನಬಸಪ್ಪ ನವರು ಮಂತ್ರಿಗಳಾಗಿದ್ದಾಗ ಒಂದು ಲೈಸೆನ್ಸ್ ಪದ್ಧತಿಯನ್ನು ಜಾರಿಗೆ ತಂದು ಇದ್ದರು. ಈಗ ಆ ಲೈಸೆನ್ಸ್ ಪರಿಸ್ಥಿತಿ ಹೇಗೆ ಆಗಿದೆ ಎಂದರೆ ಸಾಮಾನ್ಯವಾಗಿ ಸರ್ಕಾರದಲ್ಲಿ ಯಾವುದಾ ದರೂ ಒಂದು ಫ್ಯಾಕ್ಟರಿಯನ್ನು ಓಪನ್ ಮಾಡಿದರೆ ಅಲ್ಲಿ ತಯಾರಾಗತಕ್ಕ ಸಾಮಾನನ್ನು

(ಶ್ರೀ ಕೆ. ಎನ್. ವೀರಪ್ಪಗೌಡ)

ಮಾರಾಟ ಮಾಡುವುದಕ್ಕೆ ಹೋಲ್‌ಸೇಲ್ ಕಮಿಷನ್ ಏಜೆನ್ಸಿಯನ್ನು ಹೇಗೆ ನೇಮಕ ಮಾಡುತ್ತಾರೆಯೋ ಆ ರೀತಿಯಲ್ಲಿ ಇದೂ ಕೂಡ ಆಗಿದೆ. ಫಸ್ಟ್ ಕ್ಲಾಸ್, ಸೆಕೆಂಡ್ ಕ್ಲಾಸ್, ಥರ್ಡ್ ಕ್ಲಾಸ್ ಕಂಟ್ರಾಕ್ಟರ್ಸ್ ಅಂತ ಹೇಳಿ ರಿಜಿಸ್ಟರ್ ಮಾಡಿಕೊಳ್ಳಬೇಕು, ಸಾಮಾನ್ಯ ಜನರು ಅಲ್ಲಿ ಬರುವುದಕ್ಕೆ ಅವಕಾಶವಿಲ್ಲ. ಅನೇಕ ಕಡೆಗಳಲ್ಲಿ ಅವರು ಸುಮ್ಮನೆ ಟೆಂಡರ್‌ಗಳನ್ನು ಮಾತ್ರ ಹಾಕಿ -ಎಷ್ಟು ಜಾಸ್ತಿ ಹಾಕಬೇಕೋ ಅಷ್ಟನ್ನು ಹಾಕಿ- ಅವರು ಒಳ ಕಂಟ್ರಾಕ್ಟುಗಳನ್ನು ಕೊಟ್ಟುಕೊಂಡು ಎಸ್ಟಿಮೇಟ್ ರೇಟಿಗೆ ಕೆಲಸ ಮಾಡುತ್ತಾ ಇದ್ದಾರೆ. ಆ ರೀತಿಯಲ್ಲಿ ಒಂದು ಸಂಪೂರ್ಣವಾದ ಏಜೆನ್ಸಿ ರೀತಿಯಲ್ಲಿ ಮಾಡಿರುವುದರಿಂದ ಸರ್ಕಾರಕ್ಕೆ ಲುಕ್ಸಾನು ಆಗಿದೆ. ತಮಗೆ ಬೇಕಾದರೆ ಕೆಲವು ನಿದರ್ಶನಗಳನ್ನು ಕೊಡಬಲ್ಲೆ- ಗುಲ್ಬರ್ಗ ಜಿಲ್ಲೆಯಲ್ಲಿ 1965-66ನೇ ಸಾಲಿನ ತಮ್ಮ ಆಡಿಟ್ ರಿಪೋರ್ಟ್‌ನ 79ನೇ ಪುಟದಲ್ಲಿ ಇದೆ, ಅಲ್ಲಿ 22 ಲಕ್ಷ ರೂಪಾಯಿಗಳಿಗೆ ಒಂದು ಕೆಲಸ ಮಂಜೂರಾಗಿದೆ. ಮಂಜೂರಾಗಿ ಟೆಂಡರ್ ಕಾಲ್‌ಫಾರ್ ಮಾಡಿದಾಗ ಸೆಕೆಂಡ್ ಕ್ಲಾಸ್ ಕಂಟ್ರಾಕ್ಟರ್ ಸುಮಾರು 9 ಪರ್ಸೆಂಟ್‌ಗೆ ಹಾಕಿದ್ದಾರೆ. ಅವರು ಸೆಕೆಂಡ್ ಕ್ಲಾಸ್ ಕಂಟ್ರಾಕ್ಟರ್ ಆಗಿದ್ದರಿಂದ ಅವರಿಗೆ ಕೊಡುವುದಕ್ಕೆ ಆಗುವುದಿಲ್ಲ, ಫಸ್ಟ್ ಕ್ಲಾಸ್ ಕಂಟ್ರಾಕ್ಟರೇ ಆಗಬೇಕೆಂದು ಕೆಲಸಗಳನ್ನು ನಿಲ್ಲಿಸಿದ್ದರು. ಆಮೇಲೆ ಕೆಲವು ಕಾಲ ಕಳೆದ ಮೇಲೆ 63ನೇ ಇಸವಿಯಲ್ಲಿ ಪುನಃ ಸೆಕೆಂಡ್ ಕ್ಲಾಸ್ ಕಂಟ್ರಾಕ್ಟರೇ ಅರ್ಜಿ ಹಾಕಿ ಅದನ್ನು ಪಡೆಯಬೇಕಾಗಿ ಬಂದು ಸುಮಾರು 18 ಪರ್ಸೆಂಟ್‌ಗೆ ಮಂಜೂರು ಮಾಡಿದ್ದಾರೆ. ಎಸ್ಟಿಮೇಟು 22 ಲಕ್ಷ ಇದ್ದದ್ದು 57 ಲಕ್ಷಕ್ಕೆ ಹೋಗಿದೆ. ಇದು ಒಂದು ನಿದರ್ಶನ ಕೊಡುತ್ತಾ ಇದ್ದೇನೆ. ಲೈಸೆನ್ಸ್ ಕಂಟ್ರಾಕ್ಟರ್ ಅಂತ ಮಾಡಿರುವುದರಿಂದ ಈ ರೀತಿ ತೊಂದರೆಯಾಗಿದೆ. ಇದೇ ರೀತಿ ಬೇಕಾದಷ್ಟು ನಿದರ್ಶನಗಳನ್ನು ಕೊಡಬಹುದು. ಚಿಕ್ಕಮಗಳೂರು ಜಿಲ್ಲೆಯಲ್ಲಿ ದಾಸರಹಳ್ಳಿ ಕೆರೆ ಅಂತ ಇದೇ ಅಲ್ಲೂ ಕೂಡ ಇದೆ. ರೀತಿಯಾಗಿದೆ. ಅದೇ ರೀತಿ ನಮೂನೆ ಸೇತುವೆ ಅಂತ ಹೇಳಿ ಯಾರೋ ಒಬ್ಬರು ದಾವಣಗೆರೆಯವರು ಕಂಟ್ರಾಕ್ಟ್ ತೆಗೆದುಕೊಂಡಿದ್ದರು. ಎಕ್ಸೆಸ್ ರೇಟ್ ಹಾಕಿದ್ದರು ಒಳಕಂಟ್ರಾಕ್ಟರ್ ಎಸ್ಟಿಮೇಟ್ ರೇಟಿಗೆ ಮಾಡಿದ್ದಾರೆ.

ಹೀಗೆ ಈ ಲೈಸೆನ್ಸ್ ಪಡೆಯತಕ್ಕ ಪದ್ಧತಿ ಹೋಗಬೇಕು. ಇಲ್ಲವಾದರೆ ಕಾಮಗಾರಿ ಕೆಲಸಗಳು ಹಿಂದೆ ಬಿದ್ದು ಜನರ ಅಭ್ಯುದಯಕ್ಕೆ ಬಹಳ ಧಕ್ಕೆಯುಂಟಾಗುತ್ತದೆ. ಅದಷ್ಟು ಜಾಗ್ರತೆ ಈ ಇಂಡೈರೆಕ್ಟ್ ಕಮಿಷನ್ನಿನಮೇಲೆ ಕೆಲಸ ಮಾಡತಕ್ಕದ್ದು ಕೂಡಲೆ ನಿಲ್ಲಬೇಕೆಂದು ಹೇಳುತ್ತೇನೆ. ಆದುದರಿಂದ ಕೂಡಲೇ ಈ ಲೈಸೆನ್ಸ್ ಪದ್ಧತಿಯನ್ನು ರದ್ದು ಮಾಡಬೇಕೆಂದು ಹೇಳುತ್ತೇನೆ. ದೇಶದಲ್ಲಿರತಕ್ಕ ಜನರಿಗೆಲ್ಲಾ ಒಂದು ಸಮಾನಾವಕಾಶ ಇರಬೇಕು. ಈ ಕೆಲಸಗಳನ್ನು ಮಾಡಬೇಕಾದರೆ ಡೆಪಾಜಿಟ್ಟನ್ನು ತೆಗೆದುಕೊಳ್ಳದೆ ಯಾರಿಗೂ ಕೆಲಸವನ್ನು ಕೊಡುವಂತಿಲ್ಲ. ಆದುದರಿಂದ ಡೆಪಾಜಿಟ್ಟನ್ನು ಯಾರ್ಯಾರು ಕೊಡುತ್ತಾರೋ ಅವರೆಲ್ಲರಿಗೂ ಅವಕಾಶವಿರುವಂತೆ ಮಾಡಬೇಕೆಂದು ಹೇಳಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

4-00 P.M.

ಇನ್ನು ಕಂದಾಯದ ವಿಚಾರದಲ್ಲಿ ನಾನು ಹಿಂದೆ ಗವರ್ನರವರ ಭಾಷಣದ ಮೇಲೆ ಮಾತನಾಡುವ ಕಾದಲ್ಲೂ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಈಗಲೂ ನಾನು ಅದನ್ನೆ ಹೇಳುತ್ತೇನೆ. ಈ ಪದ್ಧತಿಯನ್ನು ಹಾಗೇ ಉಳಿಸಿಕೊಂಡು ಇದರಿಂದ ಬರತಕ್ಕ ವರಮಾನವನ್ನು ನೇರವಾಗಿ ತಾಲ್ಲೂಕ್ ಬೋರ್ಡುಗಳಿಗೂ ಮತ್ತು ಗ್ರಾಮಪಂಚಾಯಿತಿಗಳಿಗೂ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಇನ್ನು ಪಾನನಿರೋಧವನ್ನು ತೆಗೆದುಹಾಕಿದರೂ ಸರ್ಕಾರಕ್ಕೆ ಹೆಚ್ಚು ಹಣ ಬರುತ್ತದೆಂದು ಎಲ್ಲರೂ ಹೇಳಿದ್ದಾರೆ. ಆದರೆ ಅದೂ ಕೂಡ ಹೆಚ್ಚಿಗೆ ರೈತರಿಂದಲೇ ಬರತಕ್ಕ ಹಣವಾಗಿದೆ. ಇದನ್ನು ನಾನು ಒಂದು ಅಪ್ರತ್ಯಕ್ಷ ತೆರಿಗೆಯೆಂದು ಹೇಳುತ್ತೇನೆ. ಆದ್ದರಿಂದ ಭೂಕಂದಾಯದ ಬಗ್ಗೆ ಹಾಲಿ ಇರತಕ್ಕ ನೀತಿಯನ್ನು ಬದಲಾವಣೆ ಮಾಡತಕ್ಕದ್ದು

ಸರಿಯಲ್ಲ ಎಂದು ಹೇಳುತ್ತೇನೆ. ನಾನು ಮೊನ್ನೆ ನನ್ನ ಚುನಾವಣಾ ಕ್ಷೇತ್ರಕ್ಕೆ ಹೋಗಿದ್ದಾಗ ಅಲ್ಲಿರತಕ್ಕ ರೈತಾಪಿ ಜನರನ್ನು ಕೇಳಿದ್ದೇನೆ. ಅವರೆಲ್ಲರೂ ಇದನ್ನು ಕೊಡುವುದಕ್ಕೆ ಯಾವ ಅಭ್ಯಂತರವೂ ಇಲ್ಲವೆಂದು ಹೇಳಿದ್ದಾರೆ. ಆದರೆ ಕೆಲವು ಸದಸ್ಯರು ಈ ಕಂದಾಯ ಪದ್ಧತಿಯನ್ನು ರದ್ದು ಮಾಡಿ ವ್ಯವಸಾಯದ ತೆರಿಗೆಯನ್ನು ಹಾಕುತ್ತಾರೆಂದು ಹೇಳಿದರು. ಆದರೆ ಆ ಬಾಬಿನಲ್ಲಿ ಲೆಕ್ಕ ಇಡತಕ್ಕ ಮತ್ತು ಇನ್ನಿತರೇ ತೊಂದರೆಗಳು ಬಹಳವಾಗಿವೆ. ಆ ಪದ್ಧತಿಯನ್ನು ಅನುಸರಿಸುವುದರಿಂದ ಸರ್ಕಾರಕ್ಕೂ ಹೆಚ್ಚಿನ ಖರ್ಚುಗಳಾಗುತ್ತದೆ ಎಂಬುದನ್ನು ಅವರು ಅರಿತಿದ್ದಾರೆ. ಆದರೆ ನಾನು ಇನ್ನೂ ಮಾತನಾಡಬೇಕಾದ ವಿಷಯಗಳು ಬಹಳವಾಗಿದ್ದವು. ಆದರೆ ಅಧ್ಯಕ್ಷರು ನನಗೆ ಕೊಟ್ಟಿರತಕ್ಕ ಕಾಲಾವಕಾಶ ಬಹಳ ಕಡಿಮೆಯಾಗಿರುವುದರಿಂದ ನಾನೀಗ ಲೆವಿ ವಿಚಾರದಲ್ಲಿ ಎರಡು ಮಾತನ್ನು ಹೇಳಲಿಚ್ಛಿಸುತ್ತೇನೆ. ಇದರಿಂದ ಜನರಿಗೆ ಬಹಳ ಕಿರುಕುಳ ಹಾಗೂ ತೊಂದರೆಗಳಾಗುತ್ತಿವೆ. ನಮ್ಮ ನರಸಿಂಹರಾಜಪುರ ತಾಲ್ಲೂಕಿನಲ್ಲಿ ನೀರುಮುಳುಗಡೆಯಾದ ಜನರಿಗೆ ಅಲ್ಲಿ ಮನೆಗಳನ್ನೇನೋ ಕಟ್ಟಿಸಿಕೊಟ್ಟಿದ್ದಾರೆ. ಆದರೆ ಅಲ್ಲಿ ಅವರಿಗೆ ನೀರು ಸೌಕರ್ಯವಿನ್ನೂ ದೊರೆತಿಲ್ಲ. ಅವರು ಬಹಳ ಕಷ್ಟದಲ್ಲಿದ್ದಾರೆ. ನನ್ನ ಚುನಾವಣಾ ಕ್ಷೇತ್ರದಲ್ಲಿ ಮೂರು ತಾಲ್ಲೂಕುಗಳಿವೆ. ಅಲ್ಲಿಯ 2 ತಾಲ್ಲೂಕಿನ ಜನರಿಗೆ ಹೆಚ್ಚು ತೊಂದರೆ ಇಲ್ಲ. ದಯವಿಟ್ಟು ರೈತರಿಗೆ ತೊಂದರೆ ಮಾಡಬೇಡಿ, ಎಂಬುದಾಗಿ ನಾನು ಅಲ್ಲಿರತಕ್ಕ ಸ್ಥಳೀಯ ಅಧಿಕಾರಿಗಳಿಗೆ ಹೇಳಿದರೂ ಅಲ್ಲಿಯ ಜನರಿಗೆ ಅವರು ಹೆಚ್ಚು ಕಿರುಕುಳವನ್ನು ಕೊಡುತ್ತಿದ್ದಾರೆಂದು ನನಗೆ ತಿಳಿಸಿದ್ದಾರೆ. ಅವರು ಬೆಳೆಯುತಕ್ಕ ಜನರು. ಅವರ ಮನಸ್ಸಿಗೆ ಸಂತೋಷವಾಗತಕ್ಕ ರೀತಿಯಲ್ಲಿ ನಮ್ಮ ಅಧಿಕಾರಿಗಳು ವರ್ತಿಸಬೇಕು. ಅವರ ಮನಸ್ಸಿಗೆ ನೋವನ್ನುಂಟುಮಾಡಿದರೆ ಅವರು ಹೆಚ್ಚು ಬೆಳೆಯನ್ನು ಬೆಳೆಯಬೇಕೆಂದರೆ ಅವರು ಹೇಗೆ ಮನಸ್ಸುಮಾಡುವುದು? ಏನೇ ಆಗಲಿ ರೈತರ ವಿಷಯದಲ್ಲಿ ಸರ್ಕಾರ ಹೆಚ್ಚಿನ ಕರುಣೆಯನ್ನು ತೋರಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುವ ಮುನ್ನ ನಮ್ಮ ಹಣಕಾಸಿನ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಆಯವ್ಯಯ ಪಟ್ಟಿಯು ಸರಿಯಾಗಿದೆ, ಒಂದು ವ್ಯವಸ್ಥೆಯಲ್ಲದೆ ಒಂದು ಹೇಳಿ ಇದಕ್ಕೆ ನನ್ನ ಸಂಪೂರ್ಣ ಒಪ್ಪಿಗೆಯನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಲೋಕಯ್ಯನಾಯಕ (ವಿರಾಜಪೇಟೆ).—ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಕೆಲವು ವಿಷಯಗಳನ್ನೂ ಮತ್ತು ನನ್ನ ಕೆಲವು ಬೇಡಿಕೆಗಳನ್ನೂ ಸರ್ಕಾರದವರ ಮುಂದೆ ಇಡಲಿಚ್ಛಿಸುತ್ತೇನೆ. ನಮ್ಮ ರಾಜ್ಯವು ಕೃಷಿ ಪ್ರಧಾನವಾದದ್ದು. ದೇಶಕ್ಕೂ, ಸರ್ಕಾರಕ್ಕೂ ರೈತನು ಬೆನ್ನುಮೂಳೆಯಾಗಿದ್ದಾನೆ ಎಂದು ನಾವೆಲ್ಲರೂ ಹೇಳಿದ್ದೂ ಹೇಳಿದ್ದೆ. ಆದರೆ ಈ ಹಿಂದೆ ದೇಶಾದ್ಯಂತವೂ ಜಾರಿಗೆ ತರಲಾಗಿದ್ದ ಗ್ರೋಮೋರ್ ಫುಡ್ ಸ್ಕೀಮೂ ಮತ್ತು ಇಂದಿನ ಪಂಚವಾರ್ಷಿಕ ಯೋಜನೆಗಳೂ ಒಟ್ಟಿನಲ್ಲಿ ಹೇಳುವುದಾದರೆ ಅವುಗಳೆಲ್ಲದರ ಪ್ರಪ್ರಥಮವಾದ ಗುರಿ ರೈತರ ಪರವಾಗಿದೆ. ಆದರೆ ಈ ದಿವಸ ಈ ಭಾಗದಲ್ಲಿ ರೈತನಿಗೆ ಎಷ್ಟರಮಟ್ಟಿನ ಪ್ರೋತ್ಸಾಹ ದೊರೆತಿದೆ ಎಂಬುದನ್ನು ನಾವೀಗ ಪರಿಶೀಲನೆ ಮಾಡೋಣ; ಇದನ್ನು ಪಾಲಿಸಬೇಕಾದ್ದು ನಮ್ಮ ಜವಾಬ್ದಾರಿ. ಈ ದಿವಸ ರೈತನಾದವನು ತಾನು ತನ್ನ ಜಮೀನಿನಲ್ಲಿ ಬೆಳೆದ ಕಾಳನ್ನು ಅವನಿಗೆ ತಿನ್ನತಕ್ಕ ಒಂದು ಸ್ವಾತಂತ್ರ್ಯವಿಲ್ಲ; ಹಕ್ಕಿಲ್ಲ. ಅವನು ಕಾನೂನು ಪ್ರಕಾರ ಕೊಡಬೇಕಾದ ಲೆವಿಯನ್ನು ಕೊಟ್ಟರೂ ಕೂಡ ಅವನನ್ನು ಅನೇಕ ಕಿರುಕುಳಗಳಿಗೆ ಈಡುಮಾಡುತ್ತಿದ್ದಾರೆ; ಇದಕ್ಕಾಗಿ ನಾನು ಸರ್ಕಾರವನ್ನು ಖಂಡಿಸಬೇಕಾಗಿದೆ. ಅವನು ಧರ್ಮವಾಗಿ ಬೆಳೆದುದನ್ನು ಅವನಿಗೆ ಊಟಮಾಡುವುದಕ್ಕೆ ಹಕ್ಕಿಲ್ಲ ಎಂದು ಹೇಳತಕ್ಕ ಅಧಿಕಾರ ಸರ್ಕಾರಕ್ಕಿಲ್ಲ. ಈ ದಿವಸ ಈ ಸರ್ಕಾರ ಪ್ರಜಾಪ್ರಭುತ್ವ ತತ್ವಗಳಿಗೆ ಕೊಡಲಿಯ ಪೆಟ್ಟನ್ನು ಹಾಕಿದೆ. This will cut the very root of the fundamenal rights of citizens in a democratic country. ಇದು ಪ್ರಜಾಪ್ರಭುತ್ವ ಧರ್ಮಕ್ಕೇ ಬಹಳ ವಿರುದ್ಧವಾದದ್ದು. ಈ ದಿವಸ ರೈತ

(ಶ್ರೀ ಎಚ್. ಲೋಕಯ್ಯನಾಯಕ್)

ನಾದವನು ತನ್ನ ಜಮೀನಿನಲ್ಲಿ ತಾನು ಕಷ್ಟಪಟ್ಟು ಬೆಳೆದುದನ್ನು ಯಾವ ಕಾಲದಲ್ಲಿ ಯಾವ ಕಾನ್‌ಸ್ಟೇಬಲ್ ಅಥವಾ ತಾಶೀಲ್ದಾರ ಯಾವ ಕಾಲಕ್ಕೆ ಬಂದು ಎಲ್ಲಿ ತೆಗೆದುಕೊಂಡು ಹೋಗುವರೋ ಎಂಬ ಭೀತಿಯಿಂದ ಜನರು ಸರಿಯಾಗಿ ನಿದ್ರೆ ಸಹಿತ ಮಾಡದಂತಾಗಿದೆ ಎಂಬುದಾಗಿ ಅಲ್ಲಿಯ ಜನರೆಲ್ಲರು ಸೇರಿ ನಿರ್ಣಯಗಳನ್ನು ಮಾಡಿ ನನಗೂ ಮತ್ತು ಮಾನ್ಯ ಆಹಾರ ಸಚಿವರಿಗೂ ಕಳುಹಿಸಿಕೊಟ್ಟಿದ್ದಾರೆ. ಆದುದರಿಂದ ನಾನು ಈ ಲೆವಿಪ್ರೊಕ್ಯೂರ್‌ಮೆಂಟ್ಸ್‌ನಿದೆ ಇದನ್ನು ಸಂಪೂರ್ಣವಾಗಿ ರದ್ದುಮಾಡಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷರು.—ಅದಕ್ಕೆ ನಿಮ್ಮ ಸಲಹೆ ಏನು ಅದನ್ನು ಹೇಳಿ.

ಶ್ರೀ ಎಚ್. ಲೋಕಯ್ಯನಾಯಕ್.—ಇನ್ನು ರೈತರು ಕೊಡುತ್ತಿರುವ ಕಂದಾಯದ ವಿಚಾರಕ್ಕೆ ಬಂದರೆ ಅದನ್ನು ಕೊಡುವುದು ಅವರಿಗೆ ಬಹಳ ಅಸಾಧ್ಯವಾಗಿದೆ. ಜನರಿಂದ ಈಗಾಗಲೇ ಹಲವಾರು ರೀತಿಯ ಕಂದಾಯಗಳನ್ನು ಸರ್ಕಾರ ಪಡೆಯುತ್ತಿದೆ. ಮಾತ್ರವೇ ಅಲ್ಲ ಈ ಹಿಂದೆ ಒಂದು ಜಮೀನಿಗೆ ಕೊಡಲಾಗುತ್ತಿದ್ದ 91 ರೂಪಾಯಿ 37 ಪೈಸೆಗಳಿದ್ದದ್ದು ಈ ದಿವಸ 354 ರೂಪಾಯಿಗಳಿಗೆ ಏರಿದೆ......

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರು ಲೆವಿ ಪದ್ಧತಿಯನ್ನು ಸಂಪೂರ್ಣವಾಗಿ ರದ್ದುಮಾಡಬೇಕೆಂದು ಹೇಳುತ್ತಿದ್ದಾರೆ. ಆದುದರಿಂದ ಈಗ ಸರ್ಕಾರದವರು ಕೆಲವು ದೊಡ್ಡ ಪಟ್ಟಣಗಳಲ್ಲಿ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿರತಕ್ಕ ಜನರಿಗೆ ಒಂದು ನಿಗದಿಯಾದ ಬೆಲೆಯಲ್ಲಿ ಪಡಿತರ ಪದ್ಧತಿಯ ಮೇರೆಗೆ ಆಹಾರ ಧಾನ್ಯವನ್ನು ಹಂಚುತ್ತಿದ್ದೇವೆ; ಇನ್ನು ಮುಂದಕ್ಕೆ ಈ ಲೆವಿ ಪದ್ಧತಿಯನ್ನು ತೆಗೆದಮೇಲೆ ಅದನ್ನೂ ರದ್ದುಮಾಡಬೇಕೆಂದು ಇವರು ಸಲಹೆ ಮಾಡುತ್ತಾರೆಯೇ ಎಂಬುದನ್ನು ತಿಳಿಸುವರೇ?

ಶ್ರೀ ಎಚ್. ಲೋಕಯ್ಯನಾಯಕ್.—ಮಾನ್ಯ ಮಂತ್ರಿಗಳು ನನ್ನ ಜೊತೆಯಲ್ಲಿ ನನ್ನ ಕ್ಷೇತ್ರಕ್ಕೆ ಬರಲಿ, ಅಲ್ಲಿ ಅವರಿಗೆ ತೋರಿಸುತ್ತೇನೆ. ಸರ್ಕಾರದವರು ರೈತರಿಂದ ವಸೂಲ್ಮಾಡಿದಂಥ ಬತ್ತ ಹಾಗೇ ಗೋಡೌನುಗಳಲ್ಲಿ ಕೊಳೆಯುತ್ತ ಬಿದ್ದಿದೆ. ಅದನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡುವುದಕ್ಕೂ ಕೂಡ ಇವರಿಗೆ ಚೈತನ್ಯವಿಲ್ಲ. ಈಗ ಇವರಲ್ಲಿ ಇರತಕ್ಕ ದಾಸ್ತಾನೇ ಸಾಕು, ಇನ್ನು ಹೆಚ್ಚಿಗೆ ಜನರಿಂದ ಲೆವಿ ವಸೂಲ್ಮಾಡುವುದು ಬೇಡ ಎಂದು ಹೇಳುತ್ತೇನೆ. ಹೀಗೆ ಗೋಡೌನುಗಳಲ್ಲಿ ಬತ್ತ ಕೊಳೆಯುತ್ತ ಬಿದ್ದಿದ್ದರೂ ಅದನ್ನು ಸರಿಯಾದ ರೀತಿಯಲ್ಲಿ ಜನರಿಗೆ ವಿತರಣೆ ಮಾಡದೆ ಹೆಂಗಸರು ಮಕ್ಕಳು ಬೀದಿಯಲ್ಲಿ ಸಾಲು ಸಾಲಾಗಿ ನಿಂತು, ಅವರಿಗೆ ಸರಿಯಾಗಿ ರೇಷನ್ ಸಿಕ್ಕದೆ ಹೆಂಗಸರು ಬಳೆಗಳನ್ನು ಸಹಾ ಒಡೆದುಕೊಂಡಿರತಕ್ಕ ಪ್ರಸಂಗಗಳು ಅನೇಕವಾಗಿವೆ. ಆದುದರಿಂದ ನಾನು ಇದನ್ನು ತೀವ್ರವಾಗಿ ಖಡಾಖಂಡಿತವಾಗಿ ಪ್ರತಿಭಟಿಸುತ್ತೇನೆ. ಇನ್ನು ಕಂದಾಯವನ್ನು ರದ್ದುಮಾಡತಕ್ಕ ವಿಚಾರದಲ್ಲಿ ಭಾಷಣದ ಪುಟ: 46 ರಲ್ಲಿ—ಈಗಿರತಕ್ಕ ಭೂಕಂದಾಯದ ಪದ್ಧತಿಯನ್ನು ರದ್ದುಗೊಳಿಸುವ ಬಗ್ಗೆ ಸರ್ಕಾರದವರು ಒಂದು ನಿರ್ಧಾರವನ್ನು ಕೈಗೊಂಡಿದ್ದಾರೆ ಎಂಬುದಾಗಿ ಹೇಳಿದ್ದಾರೆ. ಇದು ಎರಡು ರೀತಿಯಲ್ಲೂ ಅರ್ಥ ಕೊಡುತ್ತದೆ.

ಶ್ರೀ ಎಚ್. ಲೋಕಯ್ಯನಾಯಕ್.—ಈಗಾಗಲೇ ಕಂದಾಯವನ್ನು ಸಂಪೂರ್ಣವಾಗಿ ರದ್ದುಮಾಡುತ್ತೇವೆಂದು ಹೇಳಿಕೊಂಡು ಮಣ್ಣು ಪರೀಕ್ಷೆಗಾಗಿ ಹೊಸದಾಗಿ ಒಂದೂವರೆ ಸಾವಿರ ನೌಕರರನ್ನು ನೇಮಕಮಾಡಿದ್ದಾರೆ. ಅವರನ್ನು ಮೇ ಒಂದನೇತಾರೀಖಿನಲ್ಲಿ ಕೆಲಸದಿಂದ ವಜಾಮಾಡುತ್ತಾರೆ. ಆ ವೆಚ್ಚಕ್ಕಾಗಿ 20 ಲಕ್ಷರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಅಂದ ಮಾತ್ರಕ್ಕೆ ಕಂದಾಯವನ್ನು ರದ್ದುಮಾಡುವುದಕ್ಕಾಗಿ ಕೆಲವಾರು ನೇಮಕಗಳನ್ನು ಮಾಡಿದ್ದಾರೆ. ಒಂದು ಕಡೆ ಲೆವಿ ತೆಗೆದು ಹಾಕುತ್ತೇವೆಂದು ಹೇಳುತ್ತಾರೆ. ಇದರಿಂದ ಸರ್ಕಾರದ ಸ್ಪಷ್ಟಭಾವನೆ

ಯೇನೆಂಬುದೇ ತಿಳಿಯುತ್ತಾ ಇಲ್ಲ. ಈಗ ಈ ಕಂದಾಯ ತೆರಿಗೆಯನ್ನು ತೆಗೆದು ಹಾಕಿದರೂ ಬೇರೆ ರೀತಿಯಲ್ಲಿ ರೈತರಮೇಲೆ ಕಂದಾಯವನ್ನು ಹಾಕಬಾರದು. ಈ ಬಗ್ಗೆ ಒಂದು ಸ್ಪಷ್ಟ ಅಭಿಪ್ರಾಯವನ್ನು ಸರ್ಕಾರದವರು ಕೊಡಬೇಕೆಂದು ನಾನು ಸರ್ಕಾರದವರನ್ನು ಒತ್ತಾಯ ಮಾಡುತ್ತೇನೆ.

ಇನ್ನು ನನ್ನ ಕ್ಷೇತ್ರವಾದ ವಿರಾಜಪೇಟೆ ಬಹಳವಾಗಿ ಕಾಡುಗುಡ್ಡಗಳಿಂದ ಕೂಡಿದ ಪ್ರದೇಶ. ಅಲ್ಲಿ ಮಳೆಗಾಲದಲ್ಲ ಬಹಳ ತೊಂದರೆಉಂಟು. ಮಕ್ಕಳಿಗೆ ಶಾಲೆಗಳಿಗೆ ಹೋಗಿಬರುವುದಕ್ಕೆ ಸರಿಯಾದ ರಸ್ತೆಗಳಿಲ್ಲ, ಗ್ರಾಮಾಂತರ ಪ್ರದೇಶಗಳಲ್ಲಿಯೂ ಸರಿಯಾದ ರಸ್ತೆಗಳೇ ಇಲ್ಲ, ಶಾಲೆಗಳೂ ಇಲ್ಲ ಈ ರೀತಿಯಾಗಿ ಮಕ್ಕಳಿಗೆ ಬಹಳ ತೊಂದರೆ ಉಂಟು. ಮಾತ್ರವಲ್ಲ ಸುಮಾರು 10–15 ಮೈಲಿಗಳವರೆಗೆ ಗ್ರಾಮಾಂತರ ಪ್ರದೇಶಗಳಿಂದ ಟೌನಿಗೆಬಂದು ಹೋಗುವ ಪರಿಸ್ಥಿತಿಇದೆ ಒಂದೊಂದು ವೇಳೆ ಆಸ್ಪತ್ರೆಗಳಿಗೆ ಬರಬೇಕಾದರೆ ತಾಯಿ ಅವರನ್ನು ಹತ್ತಾರು ಮೈಲಿಗಳಿಂದ ಹೊತ್ತುಕೊಂಡು ಬರಬೇಕು. ಸರಿಯಾದ ರಸ್ತೆಸೌಕರ್ಯಗಳೇಇಲ್ಲ. ಆದರಲ್ಲಿಯೂ ಗರ್ಬಿಣಿ ಹೆಂಗಸರ ಟೌನಿಗೆ ಬರಬೇಕಾದರೆ ಬಹಳ ಕಷ್ಟಪಡುತ್ತಾರೆ. ರಸ್ತೆಗಳೂ ಸರಿಯಾಗಿಲ್ಲ, ವಾಹನ ಸೌಕರ್ಯಗಳೂ ಇಲ್ಲ. ಅದುಮಾತ್ರವೇ ಅಲ್ಲ ಇನ್ನು ನಮ್ಮಲ್ಲಿರತಕ್ಕ ಶಾಲೆಗಳಲ್ಲ ಪರೀಕ್ಷೆ ನಡೆಯುತ್ತಿರುವಾಗ ಮಕ್ಕಳಿಗೆ ಆಯಾ ಸ್ಥಳಗಳಲ್ಲಿ ಪರೀಕ್ಷೆಗಳು ನಡೆಯುವಹಾಗೆ ವ್ಯವಸ್ಥೆ ಮಾಡುತ್ತಾ ಇಲ್ಲ. ಬಹಳ ದೂರದ ಶಾಲೆಗಳಿಗೆ ಪರೀಕ್ಷೆಗಾಗಿ ಹೊಗುತ್ತಾರೆ. ಇದು ಗಂಡು ಮಕ್ಕಳಿಗೇನೋ ಪರವಾಇಲ್ಲ. ಅವರು ಎಲ್ಲಿಯಾದರೂ ಅಲ್ಲಿ ಹೊಟೇಲುಗಳಲ್ಲಿ ತಂಗಬಹುದು, ನಿಲ್ಲಬಹುದು, ಆದರೆ ಹೆಣ್ಣುಮಕ್ಕಳು ಯಾರೂ ಹೊಟೇಲುಗಳಲ್ಲಿ ನಿಲ್ಲುವುದಕ್ಕೆ ಅವಕಾಶವಿಲ್ಲ. ಅವರಿಗೆ ಭಯವುಂಟು. ಅದಕ್ಕಾಗಿ ಇನ್ನು ಮುಂದೆ ಮಕ್ಕಳು ಇರುವ ಸ್ಥಳಗಳಲ್ಲಿನ ಶಾಲೆಗಳಲ್ಲಿಯೇ ಪರೀಕ್ಷೆಗಳು ನಡೆಯುವ ಹಾಗೆ ತಕ್ಕ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಸರ್ಕಾರದವರನ್ನು ಒತ್ತಾಯಮಾಡುತ್ತೇನೆ.

ಇನ್ನು ನಮ್ಮ ಕಡೆ ಸುಮಾರು ಆಸ್ಪತ್ರೆಗಳು ಉಂಟು. ಅಲ್ಲಿ ಹಲವಾರು ವರ್ಷಗಳಿಂದ ಡಾಕ್ಟರುಗಳೇಇಲ್ಲ. ಡಾಕ್ಟರುಗಳು ಇದ್ದರೆ ಕಾಂಪೌಂಡರ್ಸ್ ಇರುವುದಿಲ್ಲ. ಕಾಂಪೌಂಡರ್ಸ್ ಇದ್ದರೆ ನರ್ಸಸ್ ಇರುವುದಿಲ್ಲ. ನರ್ಸಸ್ ಇದ್ದರೆ ಮದ್ದು ಇರುವುದಿಲ್ಲ. ಆದ್ದರಿಂದ ಈ ಆಸ್ಪತ್ರೆಗಳ ವಿಚಾರದಲ್ಲಿ ಬಹಳ ಮಹತ್ತರವಾದ ಗಮನವನ್ನು ಸರ್ಕಾರದವರು ತೆಗೆದು ಕೊಳ್ಳಬೇಕು. ಕೆಲವು ಆಸ್ಪತ್ರೆಗಳಲ್ಲ ಹಲವಾರು ವರ್ಷಗಳಿಂದ ಸಿಬ್ಬಂದಿಯನ್ನೇ ಕೊಟ್ಟಿಲ್ಲ. ಆದರೆ ಪ್ರತಿಯೊಂದು ಗ್ರಾಮದಲ್ಲಿಯೂ ಆರೋಗ್ಯಇಲಾಖೆಯವರು ಈಗ ಸೂಲಗಿತ್ತಿಯರನ್ನು ನೇಮಕ ಮಾಡಿದ್ದಾರೆ. ಅವರು ಅಲ್ಲಲ್ಲೇ ತಂಗುವುದಕ್ಕೆ ಅವಕಾಶವೇಇಲ್ಲ. ವಸತಿ ಸೌಕರ್ಯಅವರಿಗೆ ದೊರತಿಲ್ಲ. ಇದರಿಂದ ಅವರು ಯಾರ್ಯಾರೋ ಬೇರೆಬೇರೆಯವರ ಮನೆಯಲ್ಲಿ ವಾಸಮಾಡುತ್ತಿದ್ದಾರೆ. ಇದರಿಂದ ಅವರ ಮಾನಕ್ಕೆ ಹಾನಿಇದೆ. ಅವರ ಜೀವಕ್ಕೂ ಅಪಾಯವಿದೆ, ಆದ್ದರಿಂದ ಸೂಲಗಿತ್ತಿಯವರು ನೇಮಕವಾಗಿರತಕ್ಕ ಕಡೆಗಳಲ್ಲಿಯೇ ಅವರಿಗೆ ಕ್ವಾರ್ಟರುಗಳನ್ನು ಕೂಡಲೇ ಕಟ್ಟಿಸಿ ಕೊಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ.

ಇಷ್ಟು ಮಾತುಗಳನ್ನು ಹೇಳಿ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ ಶೇಷಪ್ಪ (ಕಾಲ್ಮಲ).—ಮಾನ್ಯ ಅಧ್ಯಕ್ಷರೇ, ನಮ್ಮ ಹಣಕಾಸಿನ ಮಂತ್ರಿಗಳು ಈಗ ಆಯವ್ಯಯವನ್ನು ಮಂಡಿಸಿದ್ದಾರೆ. ಆ ಆಯವ್ಯಯದ ಮೇಲೆ ನಾನು ಒಂದೆರಡು ಮಾತುಗಳನ್ನು ಆಡಬೇಕೆಂದಿಚ್ಛಿಸುತ್ತೇನೆ. ನಮ್ಮ ರಾಯಚೂರು ಕ್ಷೇತ್ರದಲ್ಲಿ ರಸ್ತೆಗಳ ಕೆಲಸ ಯಾವುದೂ ಚೆನ್ನಾಗಿ ಆಗಿಲ್ಲ ವೆಂಬುದಾಗಿ ನಾನು ಮನಃ ಪೂರ್ವಕವಾಗಿ ಹೇಳುತ್ತೇನೆ. ಕೇವಲ ಸಣ್ಣಪುಟ್ಟ ಕೆಲಸಗಳು ಮಾತ್ರ ಆಗಿವೆ. ಆದರೂ ಅನೇಕ ರಸ್ತೆ ಕೆಲಸಗಳು ಹಾಗೆಯೇ ನಿಂತಿವೆ. ಈ ರೀತಿಯಾಗಿ ನಾನು ಏಕೆ ಹೇಳುತ್ತೇನೆಂದರೆ, ನಮ್ಮ ಹೈದರಾಬಾದ್ ಕರ್ಣಾಟಕ ಬಹಳ ಹಿಂದುಳಿದಿದೆ. ಅಲ್ಲಿ ನಮ್ಮ ಜನ ಮೊಗಲಾಯರ ಕಾಲದಲ್ಲಿ ಯಾವ ಸ್ಥಿತಿಯಲ್ಲಿದ್ದರೋ

(ಶ್ರೀಮತಿ ನಾಗಮ್ಮ ಶೇಷಪ್ಪ)

ಅದೇಸ್ಥಿತಿಯಲ್ಲಿಯೇ ಈಗಲೂ ಇದ್ದಾರೆ. ರಾಯಚೂರ್ ಜಿಲ್ಲೆಯಲ್ಲಿ ರಸ್ತೆಗಳು ಏನೇನೂ ಅಭಿವೃದ್ಧಿಯಾಗಿಲ್ಲ. ಕೆಲವು ರಸ್ತೆಗಳಲ್ಲಿ ಜನರಾಗಲೀ, ಅಧಿಕಾರಿಗಳಾಗಲೀ ತಿರುಗಾಡುವುದಕ್ಕಾಗುವುದಿಲ್ಲ. ಗ್ರಾಮಾಂತರ ಪ್ರದೇಶದ ಜನಗಳೂ ಸಹ ರಸ್ತೆಗಳಲ್ಲಿ ತಿರುಗಾಡುವುದಕ್ಕಾಗುವುದಿಲ್ಲ. ಅದು ನಮ್ಮ ಮಾನ್ಯಮಂತ್ರಿಗಳಿಗೂ ಗೊತ್ತಿದೆ. ನಮ್ಮ ಅಧಿಕಾರಿಗಳಿಗೂ ಗೊತ್ತಿದೆ. ನಮ್ಮ ದೇಶದ 19 ಜಿಲ್ಲೆಗಳಲ್ಲಿ ರಾಯಚೂರು ಜಿಲ್ಲೆ ಬಹಳವಾಗಿ ಹಿಂದುಳಿದಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ನಾನು ಈ ಮಾತನ್ನು ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ. ಒಟ್ಟಿನಲ್ಲಿ ಹೈದರಾಬಾದ್ ಕರ್ಣಾಟಕ ಹಿಂದಿನಿಂದಲೂ ಬಹಳ ಹಿಂದುಳಿದಿದೆಯೇ ಹೊರ್ತು ಏನೇನೂ ಅಭಿವೃದ್ಧಿಯಾಗಿಲ್ಲ. ಈ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಸರ್ಕಾರದವರು ಅದಷ್ಟು ಜಾಗ್ರತೆ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ರಾಯಚೂರು ಜಿಲ್ಲೆಯೊಳಗೆ ಒಂದು ಸರ್ಕಾರೀ ಕಾಲೇಜು ಇಲ್ಲ. ಮೆಡಿಕಲ್ ಕಾಲೇಜು ಒಂದು ಇಲ್ಲ. ನಮ್ಮಲ್ಲಿ ಒಂದು ಅಗ್ರಿಕಲ್‌ಚರಲ್ ಕಾಲೇಜು ಸ್ಥಾಪನೆಮಾಡಬೇಕೆಂದು ನಾವು ಮೊದಲಿನಿಂದಲೂ ಕೇಳುತ್ತಿದ್ದೇವೆ. ಸರ್ಕಾರದವರು ಅದನ್ನು ಇದುವರೆಗೂ ಕೊಡುತ್ತೇವೆಂದು ಹೇಳುತ್ತಿದ್ದಾರೆಯೇ ಹೊರ್ತು ಯಾವುದೂ ಇದುವರೆಗೂ ಕೊಟ್ಟಿಲ್ಲ. ಇದನ್ನು ನಾನು ಬಹಳ ಕಷ್ಟದಿಂದ ಹೇಳಬೇಕಾಗುತ್ತದೆ. ಇದು ಏಕೆಂದರೆ ನಮ್ಮ ಹೈದರಾಬಾದ್ ಕರ್ಣಾಟಕ ಮೊದಲಿನಿಂದಲೂ ಹಿಂದುಳಿದ್ದೇವೆಂಬುದೇ ಕಾರಣವಾಗಿದೆ. ಅದನ್ನು ನಾನು ಬಹಳ ಕಳಕಳಿಯಿಂದ ಹೇಳುತ್ತೇನೆ. ಮಾನ್ಯಮಂತ್ರಿಗಳಿಗೆಲ್ಲಾ ನಮ್ಮ ರಾಯಚೂರ್ ಜಿಲ್ಲೆ ಬಹಳವಾಗಿ ಹಿಂದುಳಿದಿದೆಯೆಂಬುದು ಗೊತ್ತಿದೆ. ಅದಕ್ಕಾಗಿ ಹಣಕಾಸಿನ ಸಚಿವರು ಮಾನ್ಯ ಪಿ. ಡಬ್ಲ್ಯು. ಡಿ. ಮಂತ್ರಿಗಳಿಗೆ ಹೆಚ್ಚಿಗೆ ಹಣ ಕಾಸನ್ನು ಒದಗಿಸಬೇಕೆಂದು ನಾನು ವಿನಂತಿಮಾಡುತ್ತೇನೆ. ಆಗ ನಮ್ಮ ಜಿಲ್ಲೆಯಲ್ಲಿ ಹೆಚ್ಚಿಗೆ ರಸ್ತೆ ಕಾಮಗಾರಿ ಮತ್ತು ಇತರ ಕೆಲಸಗಳು ನಡೆದು ನಮ್ಮ ಜಿಲ್ಲೆಯಲ್ಲಿ ಅಭಿವೃದ್ಧಿ ಕೆಲಸಕಾರ್ಯಗಳಾಗುತ್ತವೆ. ಆಯವ್ಯಯ ಅಧಿವೇಶನ ಕಾಲದಲ್ಲಿ ಈ ಅಯವ್ಯಯವನ್ನು ಸರ್ಕಾರದವರು ಈ ಸಭೆಯ ಮುಂದಿಡುವಾಗ ನಮ್ಮ ಜಿಲ್ಲೆಗೆ ಯಾವಾಗಲೂ ಕಡಿಮೆ ಹಣವನ್ನು ಒದಗಿಸುತ್ತಾರೆ. ಎಲ್ಲಾ ಜಿಲ್ಲೆಗಳಿಗಿಂತಲೂ ಹಿಂದುಳಿದ ಪ್ರದೇಶವಾದ ರಾಯಚೂರು ಜಿಲ್ಲೆಗೆ ಹೆಚ್ಚಿನ ಹಣವನ್ನು ಯಾವಾಗಲೂ ಒದಗಿಸಬೇಕೆಂದು ನಾನು ಸರ್ಕಾರಕ್ಕೆ ಮನವಿಮಾಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ಬೇಕಾದಷ್ಟು ದೊಡ್ಡದೊಡ್ಡ ಕೆರೆಗಳೂ, ಬಾವಿಗಳೂ, ರಸ್ತೆಗಳೂ ಆಗ ಬೇಕಾಗಿವೆ. ವಿದ್ಯುಚ್ಛಕ್ತಿ ಸರಬರಾಜೂ ಸಹ ಆಗಬೇಕಾಗಿದೆ. ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳು ನಮ್ಮ ಜಿಲ್ಲೆಗೆ ಹೆಚ್ಚು ಹೆಚ್ಚಾಗಿ ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ದೊಡ್ಡದೊಡ್ಡ ರಸ್ತೆಗಳು, ಬಾವಿಗಳು, ಕೆರೆಗಳು ನಮ್ಮ ಜಿಲ್ಲೆಯಲ್ಲಿ ಹೆಚ್ಚು ಹೆಚ್ಚಾಗಿ ನಿರ್ಮಾಣವಾಗಬೇಕು. ಪಂಪು ಸೆಟ್ಟುಗಳನ್ನು ಹೆಚ್ಚು ಹೆಚ್ಚಾಗಿ ಕೊಡಬೇಕೆಂದು ನಾನು ಮನವಿಮಾಡುತ್ತೇನೆ. ಏಕೆಂದರೆ ತುಂಗಭದ್ರನದಿಯ ನೀರನ್ನು ನಮ್ಮ ಕೆರೆಗಳಿಗೆ ಬಿಡಬೇಕೆಂದು ನಾನು ವಿನಯ ಪೂರ್ವಕವಾಗಿ ಬೇಡಿಕೊಳ್ಳುತ್ತೇನೆ. ರಾಯಚೂರು ಜಿಲ್ಲೆ ಬಹಳ ಬಡತನ ಪ್ರದೇಶವಾಗಿದೆ ಎಂಬುದಾಗಿ ನಾನು ಬಹಳ ಕಳಕಳಿಯಿಂದ ಹೇಳುತ್ತೇನೆ. ನಮ್ಮ ಜಿಲ್ಲೆಯ ಕೆರೆಗಳೆಲ್ಲಾ ತುಂಬುವ ಹಾಗೆ ನೀರು ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ. ನಮ್ಮಲ್ಲಿ ಸಣ್ಣಸಣ್ಣ ಕೆರೆಗಳು, ಬಾವಿಗಳು ಇದ್ದರೂ ನಮ್ಮದು ಬಡತನ ಪ್ರದೇಶವಾಗಿರುವುದರಿಂದ ನೀರನ್ನು ಖಂಡಿತವಾಗಿ ಅವುಗಳಿಗೆ ಬಿಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಸೂಕ್ಷಾರೂ ಎರಡು–ಮೂರು ವರ್ಷಗಳಿಂದ ನಮ್ಮ ಜಿಲ್ಲೆಯೊಳಗೆ ಎಷ್ಟೆಷ್ಟು ಕೆಲಸಗಳಾಗಿವೆ ಎಷ್ಟೆಷ್ಟು ಕೆಲಸಗಳು ನಿಂತಿವೆ ಎಂಬುದನ್ನು ಸರ್ಕಾರದವರು ಪರಿಶೀಲಿಸಿ ಅದಕ್ಕೆ ಆದಷ್ಟು ಜಾಗ್ರತೆ ಗಮನ ಕೊಟ್ಟು ಎಲ್ಲಾ ಕೆಲಸಗಳನ್ನು ಕೂಡಲೇ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಹೈದರಾಬಾದ್ ಕರ್ಣಾಟಕದಲ್ಲಿ ಶಾಲೆಗಳು ಬಹಳ ಕಡಿಮೆ ಇವೆ. ಎಲ್ಲರನ್ನೂ ಒಂದೇ ಕಡೆ ಕೂಡಿ ಹಾಕುತ್ತಾರೆ. ಆದರಿಂದ ಹುಡುಗರಿಗೇನೂ ಸೌಖ್ಯಕಾಣುವುದಿಲ್ಲ. ಆ ವಿಷಯದಲ್ಲಿ ಸರ್ಕಾರದವರು ಹೆಚ್ಚುಗಮನ ಕೊಟ್ಟು ಅಲ್ಲಿನ ಶಾಲೆಗಳಿಗೆ ಹೆಚ್ಚಿಗೆ ಹಣವನ್ನು ಮಂಜೂರುಮಾಡಬೇಕೆಂದು ನಾನು ಹೇಳುತ್ತೇವೆ.

ಇನ್ನು ಗಂಗವತಿ ತಾಲ್ಲೂಕಿನ ಪೆನಾರ್ ಕಾಲುವೆ ಇದುವರೆಗೂ ರಿಪೇರಿಯಾಗಿಲ್ಲ ಮುನಿರಾಬಾದ್ ತಾಲ್ಲೂಕಿನ ಕಾಲುವೆಗಳೂ ಸಹ ರಿಪೇರಿಯಾಗಿಲ್ಲ. ಅದನ್ನು ಜಾಗ್ರತೆಯಾಗಿ ರಿಪೇರಿಮಾಡಿ ಎಲ್ಲ ತಾಲ್ಲೂಕುಗಳಿಗೂ ನೀರು ಕೊಡಬೇಕು. ಶಕ್ತಿವಂತರು ತಮ್ಮ ಹಳ್ಳಿಗಳಿಗೆ ನೀರು ತೆಗೆದುಕೊಳ್ಳುತ್ತಾರೆ. ಅಸಮರ್ಥರಿಗಾಗುವುದಿಲ್ಲ. ಆದ್ದರಿಂದ ಎಲ್ಲಾ ಅಧಿಕಾರಿಗಳಿಗೂ ಈ ವಿಷಯದಲ್ಲಿ ಹೆಚ್ಚು ಗಮನ ಕೊಡಬೇಕೆಂದು ಬಹಳ ಕಠಿಣವಾಗಿ ಹೇಳಬೇಕೆಂದು ನಾನು ಸರ್ಕಾರದಲ್ಲಿ ಮನವಿ ಮಾಡುತ್ತೇನೆ.

ಆದ್ದರಿಂದ ನಮ್ಮ ಸರ್ಕಾರದವರು ಈ ರೈತರಿಗೆ ಸರಿಯಾದ ಜ್ಞಾನವಿಲ್ಲದಿದ್ದುದರಿಂದ, ಅವರಿಗೆ ಉತ್ತಮವಾದ ರೀತಿಯಲ್ಲಿ ಎಲ್ಲಾ ವಿಚಾರಗಳನ್ನು ಮನದಟ್ಟಾಗುವಂತೆ ಹೇಳಿಕೊಡುವ ಏರ್ಪಾಡು ಮಾಡಬೇಕೆಂದು ನಾನು ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ: ನಮ್ಮ ರಾಯಚೂರು ಜಿಲ್ಲೆಯೊಳಗೆ ಸರಿಯಾದ ರಸ್ತೆಗಳಿಲ್ಲದೆ ರೈತರು ಹಾಗೂ ಜನರು ತುಂಬಾ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಅದನ್ನು ಸರಿಪಡಿಸುವಂತೆ ಸರ್ಕಾರದವರು ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೆಲವು ಕಾಲದಲ್ಲಿ ನಮ್ಮ ಜಿಲ್ಲೆಯೊಳಗೆ 8–10 ದಿವಸ ನೀರೇ ಸಿಗುವುದಿಲ್ಲ. ಅದರ ಸಲುವಾಗಿ ಆ ಮುನಿಸಿಪಾಲಿಟಿಯವರಿಂದ ಪಿ. ಡಬ್ಲ್ಯು. ಡಿ. ಯವರಿಗೆ ವಹಿಸಿಕೊಡುವುದು ಯೋಗ್ಯವೆಂದು ನಾನು ಸಲಹೆ ಮಾಡುತ್ತೇನೆ.

ಮತ್ತು ನಮ್ಮ ಜಿಲ್ಲೆಯ ಹರಿಜನ ಮತ್ತು ಗಿರಿಜನರಿಗೆ ಅನುಕೂಲವಾಗುವ ಹಾಗೆ ಕೆಲವು ಜಾಗಗಳನ್ನು ಕೇಳಿದರೆ. ರೆವಿನ್ಯೂನವರು ಫಾರೆಸ್ಟಿನವರನ್ನು ಕೇಳಿ ಎನ್ನುತ್ತಾರೆ, ಫಾರೆಸ್ಟಿನವರನ್ನು ಕೇಳಿದರೆ ರೆವಿನ್ಯೂನವರನ್ನು ಕೇಳಿ ಎಂದು ಹೇಳುತ್ತಾರೆ. ಈಗ ಏಳೆಂಟು ವರ್ಷಗಳಿಂದ ಆ ಜನರು ಅದನ್ನು ಉಪಯೋಗವಾಡುತ್ತಿದ್ದಾರೆ. ಆದ್ದರಿಂದ ಅಂಥವರಿಗೆ ಅದನ್ನು ಬಿಟ್ಟುಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಕೊನೆಯದಾಗಿ ಸರ್ಕಾರದವರು ನಾನು ಹೇಳಿದ ಎಲ್ಲಾ ವಿಚಾರಗಳನ್ನು ಪರಿಶೀಲನೆ ಮಾಡಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ತಿಳಿದು, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

[Mr. SPEAKER in the Chair.]

†ಶ್ರೀ ಜಿ. ದುಗ್ಗಪ್ಪ.—ಮಾನ್ಯ ಸಭಾಪತಿಯವರೇ, ಈಗ ಸಭೆಯ ಮುಂದೆ ಸರ್ಕಾರದವರು, ಏಪ್ರಿಲ್, ಮೇ, ಜೂನ್, ಜುಲೈ, ಈ ನಾಲ್ಕು ತಿಂಗಳಿಗಾಗಿ 88 ಕೋಟಿ- 44 ಲಕ್ಷ, 33 ಸಾವಿರ ರೂಪಾಯಿಯ ಬೇಡಿಕೆಯನ್ನು ಇಟ್ಟಿದ್ದಾರೆ. ಇನ್ನೂ ಸಲ್ಪ ಮನಸ್ಸು ಮಾಡಿ ಎರಡು ತಿಂಗಳು ಸೇರಿಸಿದ್ದರೆ, ನಮ್ಮಲ್ಲಿ ವರ್ಷಕ್ಕೆ ಎರಡು ಬಜೆಟ್ ಆಗಬಹುದಾಗಿತ್ತು. ಈ ವಿಚಾರದಲ್ಲಿ ಮಾನ್ಯ ಸಿದ್ದವೀರಪ್ಪನವರು ಹೇಳಿದ್ದಾರೆ. ಆದ್ದರಿಂದ ಹೆಚ್ಚಿಗೆ ಆ ವಿಚಾರದಲ್ಲಿ ಹೇಳದೆ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಈ ಅಧಿವೇಶನ ಪ್ರಾರಂಭ ಆದಾಗಿನಿಂದ ಮಾನ್ಯ ಸದಸ್ಯರುಗಳ ಭಾಷಣಗಳನ್ನು ಕೇಳಿ ಮತ್ತು ನಾವು ಕಂಡು ಕೇಳಿರತಕ್ಕ ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದೇ ಆದರೆ, ಅಧಿಕಾರವರ್ಗದಲ್ಲೇ ಎಲ್ಲೆಲ್ಲಿ ನೋಡಿದರೂ, ಆಹಾಕಾರ, ಅತೃಪ್ತಿ, ಕಾರ್ಮಿಕ ವರ್ಗದಲ್ಲಿ ಹಾಹಾಕಾರ, ಅತೃಪ್ತಿ, ಕೃಷಿ ವರ್ಗದಲ್ಲಿ ಹಾಹಾಕಾರ, ಅತೃಪ್ತಿ, ಅಸಮಾಧಾನ, ಹೀಗೆ ಎಲ್ಲೆಲ್ಲೂ, ದೇಶದ ಯಾವ ಭಾಗದಲ್ಲೂ ಆದರೂ ನೋಡಿ, ಯಾವ ಮೂಲೆ ಮೂಲೆಯಲ್ಲಿ ನೋಡಿದರೂ, ಅಸಮಾಧಾನ, ಅತೃಪ್ತಿ ತಾಂಡವವಾಡುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ನಮ್ಮ ದೇಶದಲ್ಲಿ ಯಾರಾದರೂ ನಿಶ್ಚಿಂತೆಯಿಂದ ಇರುವುದಿದ್ದರೆ, ಅದು ನಮ್ಮ ಎದುರು ಕುಳಿತಿರತಕ್ಕ ಮಾನ್ಯ

(ಶ್ರೀ ಜಿ. ದುಗ್ಗಪ್ಪ)

ಸ್ನೇಹಿತರುಗಳು. ಇದನ್ನು ಹೇಳುವಾಗ ಒಂದು ಗಾದೆಯು ನೆನಪು ಬರುತ್ತದೆ. ಚಿಂತೆಯಿಲ್ಲದವನಿಗೆ ಸಂತೆಯಲ್ಲಿ ಕೂಡ ನಿದ್ರೆ ಬಂದಿದೆಯಂತೆ' ಅದೇ ರೀತಿ ಇಲ್ಲಿ ಚಿಂತೆ ಇಲ್ಲದ ಮಂತ್ರಿಗೆ ಅಸೆಂಬ್ಲಿಯಲ್ಲೂ ಸಹ ನಿದ್ರೆ ಬಂತು. ಅವರಿಗೆ ಬಾಯೊಳಗೆ ನೊಣ ಹೋದರೂ ಗೊತ್ತಾಗುವುದಿಲ್ಲ; ಬಂದರೂ ಗೊತ್ತಾಗುವುದಿಲ್ಲ. ಆದ್ದರಿಂದ ಆ ಗಾದೆಯನ್ನು 'ಚಿಂತೆ ಇಲ್ಲದ ಮಂತ್ರಿಗೆ ಅಸೆಂಬ್ಲಿಯಲ್ಲೂ ನಿದ್ರೆ ಬಂತಂತೆ' ಎಂದು ಬದಲಾವಣೆ ಮಾಡಬೇಕಾಗುತ್ತದೆ; ತಮಗೋಸ್ಕರ. ಇದರಲ್ಲಿ ತಮ್ಮ ತಪ್ಪು ಇಲ್ಲ. ಏನೊ ಅಸೆಂಬ್ಲಿ ನಡೆಯುತ್ತಿದೆ, ನಮ್ಮ ಪಾರ್ಟಿಗೆ ಬೇರೆ ಮೆಜಾರಿಟಿ ಇದೆ, ಮಾತಿಗೆ ಮಾತು; ಉತ್ತರಕ್ಕೆ ಪ್ರತ್ಯುತ್ತರ ಎಂದು ತಿಳಿದು ಮಾತ್ರ ಇವರು ಹೇಳಿದರೆ ಸಾಲದು. ಇಲ್ಲಿನ ವರೆಗೆ ನಡೆದದ್ದು ಆಯ್ತು. ಇನ್ನಾದರೂ ನೀತಿಯ ದಾರಿಯಲ್ಲಿ ನಡೆಯಲು ಪ್ರಯತ್ನ ಮಾಡಿ. ವಿರೋಧ ಪಕ್ಷದವರು ಏನಾದರೂ ತಪ್ಪು ದಾರಿಯಿಂದ ನಡೆದರೆ ಅಥವಾ ಅವರ ವಿಚಾರ ಅಸತ್ಯವಾದುದೆಂದು ಆದರೆ, ಅವರನ್ನು ಹಿಡಿದು ನಿಲ್ಲಿಸಿ, ಇಲ್ಲದಿದ್ದರೆ ನಾವು ನಿಮ್ಮನ್ನು ಹಿಡಿದು ನಿಲ್ಲಿಸುತ್ತೇವೆ. ತಾವು ಚುನಾವಣೆ ಕಾಲದಲ್ಲಿ ಜನರಿಗೆ ಏನು ಭರವಸೆಗಳನ್ನು ಕೊಟ್ಟಿದ್ದೀರಿ, ಹಾರತುರಾಯಿಗಳನ್ನು ಹಾಕಿಕೊಂಡು ಏನು ಆಶೋತ್ತರಗಳನ್ನು ಕೊಟ್ಟಿದ್ದೀರಿ, ಅದನ್ನೆಲ್ಲಾ ಇವತ್ತು ಮರೆತುಬಿಟ್ಟಿದ್ದೀರಿ. ಈ ವಿಚಾರದಲ್ಲಿ ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಗೌರ್ನಮೆಂಟ್ ಅಶ್ಯೂರೆನ್ಸ್ ಕಮಿಟಿಯಲ್ಲಿ ಅಧಕ್ಷರಾಗಿದ್ದಂತಹ ನಿಮ್ಮ ಪಕ್ಷದ ಶ್ರೀಮಾನ್ ಜಿ. ಎ. ತಿಮ್ಮಪ್ಪಗೌಡರು ಮಾಡಿದ ವರದಿಯನ್ನು ಓದುತ್ತೇನೆ.

ಶ್ರೀ ಸಿ. ಎಂ. ಚುಚ್ಚಿ ಹಾಲ್ ಮಠ (ಮುಂಡರಗಿ).—ಸ್ವಾಮಿ, ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಮಾನ್ಯ ಸದಸ್ಯರು ನಾವು ಕೊಟ್ಟಂತಹ ಭರವಸೆಗಳನ್ನು ನಡೆಸಿಲ್ಲ ಎಂದು ನಮ್ಮ ಮೇಲೆ ಚಾರ್ಜ್ ಮಾಡುವುದು ಸರಿಯಲ್ಲ.

Mr. SPEAKER.—It is a new Government; old reports are of no use.

Sri G. DUGGAPPA.—It is old wine in old bottle.

Mr. SPEAKER.—New wine in old bottle and not old wine in old bottle!

Sri G. DAGGAPPA.—The report says:

> "In conclusion, the Committee wishes to impress upon the Government once again that whenever assurances are given, promises made, undertakings rendered to the House by the Hon'ble Ministers on the Floor of the House, there is special sanctity and solemnity attached to them. Since prompt and timely action and speedy implementation constitutes the very essence of the matter, the Committee hopes, that the Government would take such steps, as are necessary to speedily implement the assurances, by impressing not only the Administrative Secretariat whose duty it is to report the implementation, but also on the executive staff who have to actually implement the assurances."

1962ನೇ ಇಸವಿಯಲ್ಲಿ ಈ ಮಾನ್ಯ ಸಭೆಯಲ್ಲಿ ಸರ್ಕಾರದ ಪರವಾಗಿ ಒಪ್ಪಿಕೊಂಡಂಥ 488 ಭಾಷೆಗಳು (ಅಷ್ಯೂರೆನ್ಸ್‌ಗಳು) ಏನಾದವು? ಅವುಗಳ ಗತಿ ಏನಾಯಿತು? ಅವುಗಳನ್ನು ಈಡೇರಿಸುವುದು ಇರಲಿ ನಮ್ಮ ಲೆಜಿಸ್ಲೇಚರ್ ಸೆಕ್ರೆಟೇರಿಯಟ್‌ನಿಂದ ಸಂಬಂಧಪಟ್ಟ ಇಲಾಖೆಗಳಿಗೆ ಕಳುಹಿಸಿಕೊಟ್ಟಂತಹ ಪತ್ರಗಳಿಗೆ ಉತ್ತರ ಕೂಡ ಬಂದಿಲ್ಲ.

4-30 P.M.

ಇನ್ನೊಂದು ವಿಷಯವನ್ನು ನಾನು ಹೇಳುತ್ತೇನೆ. 1964ನೇ ಇಸವಿಯಲ್ಲಿ ಒಂದು ಸ್ಟಾರ್ಡ್ ಕ್ವಶ್ಚನ್ನಿಗೆ ಸರ್ಕಾರದ ಪರವಾಗಿ ಒಂದು ಭಾಷೆಯನ್ನು ಕೊಟ್ಟಿದ್ದಾರೆ. ಅದು ಈ ರೀತಿ ಇದೆ : Starred question No. 117 dated 29th February 1964—Supplementary by Sri R. N. Lakshmipathi-asking whether any decision has been taken as to the action to be taken in respect of complaints received against Ministers and Members of Legislature.

The answer of the Minister is-'This is being considered and the matter is still under considearation.'

The Secretaries have not cared to reply to the Legislature Secretary.

1964ನೇ ಇಸವಿಯಲ್ಲಿ ಕೊಟ್ಟಂತಹ ಭಾಷೆಯನ್ನು ಇನ್ನೂ ನೆರವೇರಿಸಿಲ್ಲ. ಇದು ಆಡಳಿತದ ವೈಖರಿ! 1964ನೇ ಇಸವಿಯಲ್ಲಿ ಅಧಿಕಾರದಲ್ಲಿ ಇದ್ದಂತಹವರು ಈ ಮಹಾ ಸಭೆಗೆ ಕೊಟ್ಟಂತಹ ಮಾತನ್ನು ನಡೆಸದೇ ಇರುವುದನ್ನು ನೋಡಿದರೆ ಇವರು ಎಷ್ಟು ವಿಫಲರಾಗಿದ್ದಾರೆ ಎಂಬುದು ಗೊತ್ತಾಗುತ್ತದೆ. ಇದು ಒಂದೇ ಸಾಕು. ಇಲ್ಲಿ ಕೆಲವು ಮಾನ್ಯ ಸದಸ್ಯರು 1947ರಿಂದ ಸತತವಾಗಿ ಈ ತಹಲ್‌ವರೆಗೂ ಸದಸ್ಯರಾಗಿದ್ದಾರೆ. ಆ ರೀತಿ ಇಲ್ಲಿ ಕೆಲಸ ಮಾಡಿರುವವರ ಪೈಕಿ ಶ್ರೀಮಾನ್ ರಾಜಶೇಖರಮೂರ್ತಿಯವರಿದ್ದಾರೆ. ಶ್ರೀಮಾನ್ ರಾಚಯ್ಯನವರು 1952ನೇ ಇಸವಿಯಿಂದ ಇಲ್ಲಿಯವರೆಗೆ ಸತತವಾಗಿ ಸದಸ್ಯರಾಗಿ ಬಂದಿದ್ದಾರೆ. ಶ್ರೀಮಾನ್ ದೇವರಾಜ್ ಅರಸ್ ಅವರಿಗೆ 1947ನೇ ಇಸವಿಯಿಂದಲೂ ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವಂತಹ ಅವಕಾಶ ಇದೆ. ಈ ಸಭೆಯಲ್ಲಿ ಇನ್ನೂ ಬಹಳ ಜನ ಸ್ನೇಹಿತರು ಬಹಳ ಹಿಂದಿನಿಂದಲೂ ಸದಸ್ಯರಾಗಿರುವವರು ಇದ್ದಾರೆ. ನಾನು ಈಗ ಕೆಲವು ಹಳೆಯ ನೆನಪುಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇಂದು ನಮ್ಮ ದೇಶದಲ್ಲಿ ಒಂದು ರಾಜ್ಯದ ರಾಜ್ಯಪಾಲರಾಗಿರತಕ್ಕ ಶ್ರೀ ಕೆ. ಸಿ. ರೆಡ್ಡಿಯವರು ಹಿಂದೆ ಮೊಟ್ಟ ಮೊದಲು ಮೈಸೂರ ಸಂಸ್ಥಾನದಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ್ಗೆ ಅವರು ತಮ್ಮ ಊರಿಗೆ ಎಂದರೆ, ಕ್ಯಾಸಂಬಳ್ಳಿಗೆ ರಸ್ತೆಗಳನ್ನು ಮಾಡಿಸಿದರು ಎಂದು ಅವರ ಮೇಲೆ ನಮ್ಮ ಸ್ನೇಹಿತರು ಕೆಲವರು, ಎಂದರೆ ಈ ಸಭೆಯ ಸದಸ್ಯರು ಅಪಾದನೆ ಮಾಡಿದರು. ಮುಖ್ಯಮಂತ್ರಿಗಳು ಕ್ಯಾಸಂಬಳ್ಳಿಗೆ ರಸ್ತೆ ಮಾಡಿಸಲು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದಾರೆ, ಎಂದು ಪ್ರತ್ಯಕ್ಷವಾಗಿ ಅಪಾದನೆ ಮಾಡಿದರು. ಆ ಸವಿ ನೆನವುಗಳನ್ನು ಮಾನ್ಯ ಸದಸ್ಯರು ಕಿವಿಯಾರ ಕೇಳಬೇಕು. ಆಗ ಮುಖ್ಯಮಂತ್ರಿಗಳಾಗಿದ್ದವರ ಊರಿಗೆ ಪ್ರಧಾನಿ ನೆಹರೂ ಅವರೇ ಹೋಗಿ ಅವರ ಮನೆಯಲ್ಲಿ ಕುಳಿತುಕೊಂಡು ಏನು ದುರುಪಯೋಗ ಮಾಡಿರುವುದು, ಏನು ಅನ್ಯಾಯ ಮಾಡಿರುವುದು, ಏನೂ ಮಾಡಿಲ್ಲ ಎಂದು ಹೇಳಿ ಅಪಾದನೆ ಮಾಡಿದ್ದವರಿಗೆ ನೆಹರೂ ಅವರು ಛೀಮಾರಿ ಮಾಡಿದರು.

ಆ ನಂತರ 1952ನೇ ಇಸವಿಯಲ್ಲಿ ಸರ್ಕಾರ ರಚನೆ ಆದ ಮೇಲೆ ಆಗ ಸ್ಥಳೀಯ ಸಂಸ್ಥೆಯ ಸಚಿವರಾಗಿದ್ದವರ ಮೇಲೆ ಕೋಲಾರದ ಅಮಾನಿ ಕೆರೆಯ ಅಚ್ಚುಕಟ್ಟಿನ ಪ್ರದೇಶದಲ್ಲಿ ರಸ್ತೆಗಳನ್ನು ಮಾಡಿಸಿದ್ದಾರೆ, ಅದನ್ನು ಸಾರ್ವಜನಿಕರ ಹಿತಕ್ಕೋಸ್ಕರ ಮಾಡಿಸಿಲ್ಲ ಎಂದು ಒಂದು ದೊಡ್ಡ ಬೊಬ್ಬೆ ಎದ್ದಿತು. ಆಗ ಅದನ್ನು ವಿಚಾರಣೆ ಮಾಡಲು ನಾಲ್ಕು ಜನಗಳು ಇರತಕ್ಕಂಥ ಒಂದು ಕಮಿಟಿಯನ್ನು ನೇಮಕ ಮಾಡಿದರು. ಆಗ ಆ ನಾಲ್ಕು ಜನಗಳು ಆ ರಸ್ತೆಯನ್ನು ನೋಡಿ ಆ ರಸ್ತೆಯನ್ನು ಸಚಿವರು ತಮ್ಮ ಸ್ವಂತಕ್ಕಾಗಿ ಮಾಡಿಕೊಂಡಿಲ್ಲ, ಸಾರ್ವಜನಿಕಗಾಗಿ ಆ ರಸ್ತೆಯನ್ನು ಮಾಡಿಸಿದ್ದಾರೆ ಎಂದು ಆ ಮಹನೀಯರು ವರದಿಯನ್ನು ಕೊಟ್ಟರು. ಆಗ ಆ ಸಚಿವರು ದೋಷದಿಂದ ವಿಮುಕ್ತರಾದರು. ಇದೇ ರೀತಿಯಲ್ಲಿ ವಿಧಾನಸೌಧದ ನಿರ್ಮಾಣದ ವಿಷಯದಲ್ಲಿ ಶ್ರೀಮಾನ್ ಹನುಮಂತಯ್ಯನವರ ಮೇಲೆ ಕೆಲವರು ಅಪಾದನೆಗಳನ್ನು ಮಾಡಿದ್ದರು. ಅದಕ್ಕೆ ಕೂಡ ವಿಚಾರಣಾಸಮಿತಿಯನ್ನು ನೇಮಕ ಮಾಡಿ

(ಶ್ರೀ ಜಿ. ದುಗ್ಗಪ್ಪ)

ಅವರ ಮೇಲೆ ಯಾವ ತಪ್ಪು ಇಲ್ಲವೆಂದ ಮೇಲೆ ಅವರು ದೋಷದಿಂದ ವಿಮುಕ್ತರಾದರು. ಇದು ತಮಗೆಲ್ಲರಿಗೂ ಗೊತ್ತಿದೆ. ಇಲ್ಲಿಯವರೆಗೂ ಈ ಮಹಾಸಾಧದಲ್ಲಿರತಕ್ಕ ಈ ಸಭೆಯಲ್ಲಿ ಎಷ್ಟೋ ಜನ ಮಾನ್ಯ ಸದಸ್ಯರು ಎಷ್ಟೋ ವಿಧದಲ್ಲಿ ಹೇಳುತ್ತಿದ್ದಾರೆ. ಶರಾವತಿಯಲ್ಲಿ ಅನ್ಯಾಯವಾಗಿದೆ ಹಣ ದುರುಪಯೋಗವಾಗಿದೆ ಎಂದು. ಮತ್ತು ಆಗಿನ ಕಾಲದ ಸಂಬಂಧಪಟ್ಟ ಕಾರ್ಯದರ್ಶಿಯವರು ಶರಾವತಿಯ ಬಗೆಗೆ ತನಿಖೆ ಮಾಡಬೇಕು ಎಂದು ಸಂಬಂಧಪಟ್ಟ ಫೈಲಿನ ಮೇಲೆ ಬರೆದಿದ್ದಾರೆ. ಅವರು ಆ ಫೈಲಿನಲ್ಲಿ ಬರೆದಿರುವುದು ಈ ರೀತಿ ಇದೆ. "The award is perverse. It must be challenged in the Court of Law." ಎಂದು ಬರೆದಿದ್ದಾರೆ. ಈ ರೀತಿಯಾಗಿ ಅವರು ಬರೆದಿದ್ದರೂ, ಈ ಮಾನ್ಯ ಸಭೆಯ ಸದಸ್ಯರು ಆ ಬಗ್ಗೆ ತನಿಖೆ ಮಾಡಬೇಕೆಂದು ಹೇಳಿದ್ದರೂ ಕೂಡ ಆ ಪ್ರಕರಣದ ಬಗ್ಗೆ ಏಕೆ ತನಿಖೆ ಮಾಡಬಾರದು ? ಅದನ್ನು ತನಿಖೆ ಮಾಡುವುದಕ್ಕೆ ಇವರಿಗೆ ಮನಸ್ಸಿಲ್ಲ, ಹೃದಯವಿಲ್ಲ, ಕಿವಿಯೂ ಇಲ್ಲ.

ಇನ್ನು ನಮ್ಮ ಮಾನ್ಯ ಸ್ನೇಹಿತರಾದ ಮಾನ್ಯ ಹಣಕಾಸಿನ ಸಚಿವರು ಹೋದ ವರ್ಷ ಆಯವ್ಯಯ ಮುಂಗಡ ಪತ್ರವನ್ನು ಮಂಡಿಸಿದಾಗ ನಾನು ಅವರನ್ನು ಅಭಿನಂದಿಸುತ್ತೇನೆಂದು ತಿಳಿಸಿದ್ದೆ. ಮತ್ತು "ನೀವು ತರುಣರು ಹಿಂದುಳಿದ ವರ್ಗದವರ ಬಗ್ಗೆ ಆಸಕ್ತಿಯನ್ನು ತೋರಿಸಿದ್ದೀರಿ, ಅವರ ಅಭಿವೃದ್ಧಿಗಾಗಿ 3½ ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದೀರಿ ಎಂದು ಅವರನ್ನು ಅಭಿನಂದಿಸಿ ಅವರಿಗೆ ಹೇಳಿದ್ದೆ." ನಾನು ಎಂದೂ ಯಾರನ್ನೂ ಹೊಗಳತಕ್ಕ ಸ್ವಭಾವದವನಲ್ಲ. ಆದರೆ ಅವೊತ್ತಿನ ದಿವಸ ನಾನು ಹೇಳಿದ್ದೆ, ಒಳ್ಳೆಯ ಕೆಲಸವನ್ನು ಮಾಡಿದ್ದೀರೆಂದು. ಒಳ್ಳೆಯ ಕೆಲಸವನ್ನು ಮಾಡಿದ್ದರೆ ಒಳ್ಳೆಯ ಕೆಲಸವನ್ನು ಮಾಡಿದ್ದೀರೆಂದು ಹೇಳುತ್ತೇವೆ. ಆದರೆ ನೀವು ಒಳ್ಳೆಯ ಕೆಲಸವನ್ನು ಮಾಡಿದ್ದೀರಾ ? ಅದಕ್ಕೆ ಎಷ್ಟು ದುಡ್ಡು ಖರ್ಚಾಯಿತು, ಯಾರನ್ನ ಗಮನದಲ್ಲಿಟ್ಟುಕೊಂಡಿದ್ದೀರಿ, ಯಾರಿಗೋಸ್ಕರ ಆ ಯೋಜನೆ ಇದೆಯೋ ಅವರ ಗತಿ ಏನಾಗಿದೆ ? ಆ ಬಗ್ಗೆ ಯಾವ ರೀತಿ ಕೆಲಸ ಮಾಡಿದ್ದೀರಿ ಎಂದು ನಾನು ಕೇಳುತ್ತೇನೆ. ಏನಾದರೂ ಹೇಳಿದರೆ ಟೀಕೆ ಮಾಡುತ್ತೀರೆಂದು ಹೇಳುತ್ತೀರಿ, ಟೀಕೆ ಮಾಡುವ ಕಾಲ ಹೋಯಿತು. ಕಾರ್ಯೋನ್ಮುಖವಾಗುವ ಕಾಲ ಬಂದಿದೆ.

ಇನ್ನು ಪಾನನಿರೋಧದ ವಿಷಯದಲ್ಲಿ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಪಾನನಿರೋಧವನ್ನು ಜಾರಿಯಲ್ಲಿ ತಂದಂತಹ ವೈಖರಿ ಯಾವ ರೀತಿ ಇದೆ ಎಂದರೆ, ಯಾವುದೇ ಒಂದು ಕಾನೂನನ್ನು ಜಾರಿಗೆ ತರಬೇಕಾದರೆ ಒಂದು ಕ್ರಮ ಇದೆ. ಆ ಕಾನೂನನ್ನು ಜಾರಿಗೆ ತರುವುದರಲ್ಲಿ ಸರಕಾರಕ್ಕೆ ಒಂದು ಆಸಕ್ತಿ ಇರಬೇಕು. ಯಾವ ಹಿನ್ನೆಲೆಯಲ್ಲಿ ನಮ್ಮ ದೇಶದಲ್ಲಿ ಪಾನನಿರೋಧವನ್ನು ತಂದರೋ ಆ ಹಿನ್ನೆಲೆಯಲ್ಲಿ ಕೆಲಸ ಮಾಡಿದ ಮಹನೀಯರು ಇದ್ದಾರೆ, ಸ್ನೇಹಿತರೂ ಇದ್ದಾರೆ. ಇವೊತ್ತು ಆ ತತ್ವವನ್ನು, ಆ ನೀತಿಯನ್ನೆಲ್ಲಾ ಗಾಳಿಗೆ ತೂರಿಸಿ ಪಾನನಿರೋಧವನ್ನು ಜಾರಿಗೆ ಕೊಟ್ಟಿರತಕ್ಕ ವೈಖರಿ ಯಾವ ರೀತಿ ಇದೆ ಯೆಂದರೆ, ಒಬ್ಬ ಬಡವ, ದೂರದವನು ಖಾಯಿಲೆ ಬಿದ್ದು ಬಂದು ಅವನ ಒಂದು ಸಂಬಂಧೀಕರ ಮನೆಯಲ್ಲಿ ಇದ್ದಾಗ ಅವರು ಆ ಮನುಷ್ಯನನ್ನು ಯಾವ ರೀತಿ ನೋಡಿಯಾರು, ಅವನಿಗೆ ಒಂದು ರೂಮು ಕೊಟ್ಟಿದೆ, ಮಂಚ ಇದೆ, ಹಾಸಿಗೆ ಇದೆ. ಮಲಗಿದ್ದಾನೆ, ದೂರದ ಸಂಬಂಧ, ಅವನನ್ನು ಕೇಳುವವರಿಲ್ಲ, ಅವನಿಗೆ ಔಷಧೋಪಚಾರವಿಲ್ಲ, ಸ್ಥಳ ಬಂದಿದೆ. ಈಗ ಈ ರೀತಿ ಇದೆ ಈ ಪಾನನಿರೋಧದ ನೀತಿ. ಪಾನನಿರೋಧದ ಕಾನೂನನ್ನ ಜಾರಿಗೆ ಕೊಟ್ಟ ರೀತಿ ನೀತಿ ಯಾವ ರೀತಿ ಇದೆಯೆಂದರೆ ಇವರು ಒಂದು ನಿಮಿಷವೂ ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಶಕ್ಯವಿಲ್ಲ. ಇವೊತ್ತು ನಾಲ್ಕು ಕೋಟಿ ರೂಪಾಯಿಗಳ ಖೋತಾ ಆಗಿದೆ. ಬಡ್ಜೆಟ್ಟನ್ನು ಸರಿದೂಗಿಸುವುದು ಕಷ್ಟ ಇರಬಹುದು. ಆದರೆ ಇವೊತ್ತು ನಾನು ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಹಾಗೂ ನನ್ನ ಸ್ನೇಹಿತರಿಗೆ ಹೇಳುತ್ತೇನೆ ನಮ್ಮ ಅಣ್ಣತಮ್ಮಂದಿರ ಕಷ್ಟ ಕೇಳಿ. ಇವೊತ್ತು

ಪಾನನಿರೋಧವನ್ನು ಸಡಿಲಗೊಳಿಸಿದರೆ ಅದರಿಂದ ತಕ್ಷಣ ದುಷ್ಪರಿಣಾಮ ಆಗುವುದು ಹಿಂದುಳಿದ ವರ್ಗದವರಿಗೆ, ಮತ್ತು ಹರಿಜನರಿಗೆ. ಅವರ ಗತಿ ಏನಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಿದ್ದೀರಾ? ಹಿಂದುಳಿದ ವರ್ಗದವರ, ಹರಿಜನರ ಮಕ್ಕಳು ಹೆಂಡ ಕುಡಿಯುವುದನ್ನು ಕಲಿತಂತೆ ನಿಮ್ಮ ಮಕ್ಕಳು ಹೆಂಡ ಕುಡಿಯುವುದನ್ನ ಕಲಿಯುವುದಿಲ್ಲ. ನಿಮ್ಮ ಮಕ್ಕಳ ಹೆಂಡ ಬೀರು ಬ್ರಾಂದಿ ಕುಡಿಯುವುದನ್ನ ಕಲಿಯುವುದಿಲ್ಲ. ಇವೊತ್ತು ಪಾನನಿರೋಧ ಕಾನೂನನ್ನ ಸಡಿಲಗೊಳಿಸಿದರೆ ಹಿಂದುಳಿದ ವರ್ಗದವರಿಗೆ, ಹರಿಜನರಿಗೆ ತೊಂದರೆಯಾಗುತ್ತದೆ. ಇದರಿಂದ ದುಷ್ಪರಿಣಾಮವಾಗುತ್ತದೆ. ಹರಿಜನರ ಮಕ್ಕಳು ಹೆಂಡ ಕುಡಿಯುವುದನ್ನು ಕಲಿಯುತ್ತಾರೆ. ಹಿಂದುಳಿದ ವರ್ಗದ ಈ ನತಧೃಷ್ಟ ಜನರ ಪ್ರಗತಿ, 20 ವರ್ಷಗಳ ಹಿಂದಕ್ಕೆ ಹೋಗುತ್ತದೆ.

ಇದು ಮಾನವೀಯತೆ ದೃಷ್ಟಿಯಿಂದ ಯೋಚವೆ ಮಾಡತಕ್ಕದ್ದು. ನಿಮಗೆ ಹಣಕಾಸಿನ ಕೊರತೆ ಇದ್ದರೆ ಅನೇಕ ಬಾಬುಗಳು ಶಿಥಿಲವಾಗಿ ಸೋರಿ ಹೋಗುತ್ತಾ ಇದೆ. ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಇನ್‌ಕಂ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ತೆಗೆದುಕೊಳ್ಳಿ. ಎಷ್ಟು ತೂತಿನಲ್ಲಿ ಹೋಗುತ್ತದೆ. ತೂತು ಮುಚ್ಚುತ್ತಾ ಬನ್ನಿ. ಅಗ ನಮ್ಮ ಹಣಕಾಸಿನ ಬಡ್ಜೆಟ್ಟು ಸರಿ ತೂಗಲು ಆಗುವುದಿಲ್ಲ ಎಂದು ಹೇಳಿದರೆ ನಾವು ಸರಿಮಾಡಿಕೊಡುತ್ತೇವೆ.

ಸ್ವಾಮಿ ಪೋಲೀಸ್ ಇಲಾಖೆ ಬಗ್ಗೆ ಒಂದೇ ಒಂದು ಮಾತು ಹೇಳುತ್ತೇನೆ.

ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ದುಗಪ್ಪನವರು ಹೇಳಿದರು. ಹರಿಜನರು ಕುಡಿಯುತ್ತಾರೆ, ಎಂದು. ಬೇರೆ ಜಾತಿಯವರು ಕುಡಿಯುತ್ತಾರೋ ಇಲ್ಲವೋ ದಯವಿಟ್ಟು ಹೇಳಿ?

ಶ್ರೀ ಜಿ. ದುಗ್ಗಪ್ಪ.—ಅವರು ಆ ರೀತಿ ಅಪಾರ್ಥ ಮಾಡಿಕೊಳ್ಳಬಾರದು. ಬರೀ ಹರಿಜನರು ಮಾತ್ರ ಕುಡಿಯುತ್ತಾರೆ ಎಂದಲ್ಲ, ಅವರೂ ಕುಡಿಯುತ್ತಾರೆ, ಬಹಳ ಸ್ನೇಹಿತರು ಕುಡಿಯುವುದಕ್ಕೆ ಹಚ್ಚಿದ್ದಾರೆ. ಯಾರು ಕದ್ದು ಮುಚ್ಚಿ ಕುಡಿಯುತ್ತಾರೆ ಅವರಿಗೂ ಕುಡಿತ ಬೇಕು. ಅವರು ಕಳ್ಳತನದಿಂದ ಕುಡಿಯಬೇಕು. ಜಾರಿಗೆ ಬಂದರೆ ಮರ್ಯಾದೆಯೂ ಉಳಿಯುತ್ತದೆ. ಕುಡಿತವು ಉಳಿಯುತ್ತದೆ. ಅಂತಹವರಿಗೆ ಬೇಕು ಎಂದು ಹೇಳಿದ್ದು. ಹರಿಜನರಿಗೆ ತೊಂದರೆ ಯಾಗಿದೆ ಎಂದು ಹೇಳಿದೆ. ಅವರೇ ಕುಡಿಯುತ್ತಾರೆ ಎಂದು ಎನ್ನುವ ಭಾವನೆ ಅಲ್ಲ. ಹರಿಜನರಿಗಿಂತ ಹೆಚ್ಚಾಗಿ ಬೇರೆಯವರೇ ಬಹಳ ಜಾಸ್ತಿ ಕುಡಿಯುತ್ತಾ ಇರುವುದು. ಅವರ ತೊಂದರೆ ಏನು ಎಂದರೆ ಮಕ್ಕಳಿಗೆ ಕುಡಿಯುವುದನ್ನು ಕಲಿಸುತ್ತಾರೆ.

ಸ್ವಾಮಿ, ಎಲೆಕ್ಷನ್ ಆದನಂತರವೂ ಮಳೆ ಬಿದ್ದರೂ ಮಳೆ ಹನಿ ನಿಂತಿಲ್ಲ ಎಂಬ ಒಂದು ಗಾದೆ ಇದೆ. ಹಾಗೆ ಆ ಎಲೆಕ್ಷನ್ ಬಿಸಿ ನಮಗೆ ಇನ್ನೂ ಬಿಟ್ಟಿಲ್ಲ. ಇವೊತ್ತಿನ ದಿವಸ ನಮ್ಮ ಸ್ನೇಹಿತರೊಬ್ಬರು ಕಾಗದ ಬರೆದಿದ್ದಾರೆ. ಕನಕಪುರದಲ್ಲಿ ಒಂದು ಕಾಲೇಜು ಇದೆ. ಅಲ್ಲಿಯ ಮುಖಂಡರೊಬ್ಬರು, ಯಾವ ರಾಜಕೀಯ ಪಕ್ಷಕ್ಕೆ ಸೇರಿದವರು ಎಂದು ಹೇಳುವುದಿಲ್ಲ. ಅವರ ಸ್ನೇಹಿತರು ಅಧಿಕಾರದಲ್ಲಿ ಇಲ್ಲದೆ ಇದ್ದರೆ, ಅವರ ಸ್ಥಾನ ಎಲ್ಲಿ ಇರುತ್ತಿತ್ತು ಎಂದರೆ, ಜೈಲಿನಲ್ಲಿ ಇರುತ್ತಿತ್ತು. ಅವರು 2–3 ಸಾರಿ ಕನ್‌ವಿಕ್ಟ್ ಆಗಿ ಜೈಲಿನಲ್ಲಿದ್ದವರು. ಅಂತಹ ಮುಖಂಡರು ಇತರರ ಜೊತೆಗೆ ಮೆರೆಯುತ್ತಿದ್ದಾರೆ. ಮೆರವಣಿಗೆ ಮಾಡಿಸಿಕೊಳ್ಳುತ್ತಿದ್ದಾರೆ. ಅವರು 10–12 ಜನ ಅಲ್ಲಿದ್ದು ಕಾಲೇಜಿಗೆ ಪರೀಕ್ಷೆ ನಡೆಯುತ್ತಿದ್ದ ಕಾಲಕ್ಕೆ ಹೊದರೆ, ಸಬ್ ಇನ್‌ಸ್ಪೆಕ್ಟರ್, ಸರ್ಕಲ್ ಇನ್‌ಸ್ಪೆಕ್ಟರ್ ಪಕ್ಕದಲ್ಲಿ ಅಲ್ಲಿಯೇ ನಿಂತುಕೊಂಡಿದ್ದರು. ಆದರೂ ಇವರು ಕಾಲೇಜಿಗೆ ನುಗ್ಗಿ ಹಾಸ್ಟಲಿಗೆ ನುಗ್ಗಿ ಗಲಾಟೆ ಮಾಡಿದರು. ಹೇಳುವವರು ಯಾರೂ ಇಲ್ಲ. ಪೋಲೀಸ್ ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಸಿರಿಗೆರೆಯಲ್ಲಿ ಸ್ಪೆಷಲ್ ಪೋಲೀಸ್ ಇಟ್ಟುಕೊಂಡಿದ್ದಾರೆ. ಯಾವ ಉದ್ದೇಶಕ್ಕೋಸ್ಕರ? ಶಾಂತಿ ಭಂಗವಾಗಿದೆ ಎಂದು ಹೇಳುತ್ತಾರೆ. ಯಾರ ಶಾಂತಿ ಭಂಗವಾಗಿದೆ? ಯಾರು ಅರ್ಜಿ ಬರೆದರು? ಸಾರ್ವಜನಿಕ ಆಸ್ತಿ ಪಾಸ್ತಿಗಳು ಹಾನಿಯಾಗಿದೆಯೇ? ಸ್ಕೂಲು ಕಟ್ಟಡಗಳನ್ನು ಜಖಂ ಮಾಡಿ

(ಶ್ರೀ ಜಿ. ದುಗ್ಗಪ್ಪ)

ದ್ದಾರೆಯೇ ? ನಿಮ್ಮ ಸರ್ಕಾರಿ ಬಸ್ಸುಗಳನ್ನು ಸುಟ್ಟಿದ್ದಾರೆಯೇ ? ಯಾವ ಕಾರಣಕ್ಕೋಸ್ಕರ ಯಾರು ಅರ್ಜಿ ಹಾಕಿದರು ? ನಿಮ್ಮ ಮನಸ್ಸಿಗೆ ಶಾಂತಿ ಇಲ್ಲದಿದ್ದರೆ ನಿಮ್ಮ ರಾಜಕೀಯ ವಿರೋಧಿಗಳಿಗೆ ತೊಂದರೆ ಕೊಡುವುದಕ್ಕೆ ಇಲ್ಲಿ ರಿಸರ್ವ್ ಪೋಲೀಸ್ ಇಟ್ಟಿದ್ದೀರಾ ? ತಾವು ನಿಷ್ಪಕ್ಷಪಾತವಾದ ದೃಷ್ಟಿಯಿಂದ ಈ ಮಾನ್ಯ ಸಭೆಯ 4 ಜನ ಸದಸ್ಯರ ಒಂದು ಕಮೀಷನ್ ಕಳುಹಿಸಿ ಸಿರಿಗೆರೆ ಜನ ಎಂತವರು ಎಂದು ತಿಳಿಯುವುದಕ್ಕೆ 1958ನೇ ಇಸವಿಯಿಂದ ಇವರು ಯಾವೊತ್ತಿನಿಂದ ಮುಖ್ಯಮಂತ್ರಿಗಳಾಗಿದ್ದರೋ ಅವೊತ್ತಿನಿಂದ ಅರ್ಜಿಗಳು ಆಗಿವೆ. ಡಿ. ಎಸ್. ಪಿ. ಆಫೀಸ್ ಮೊದಲು ಸೀಲ್ ಮಾಡಿಸಿ ಪರೀಕ್ಷೆ ಮಾಡಿ. ಎಲ್ಲವೂ ಪ್ರೊಫೋರ್ಮಾ ಟೈಪ್ ಅಪ್ಲಿಕೇಷನ್ಸ್ ಒಂದೇ ವಿಧವಾದ ಜನರಿಂದ, ಒಂದೇ ಸೆಕ್ಷನಿಂದ ಅಪ್ಲಿಕೇಷನ್ಸ್ ಬಂದಿವೆ. ಅದನ್ನು ಎಲ್ಲಿಯ ತನಕ ಸಹಿಸಿಕೊಳ್ಳಬೇಕು ? ನಾನು ಹೇಳುವುದು ಸುಳ್ಳು ಆದರೆ, ಸತ್ಯಕ್ಕೆ ದೂರ ಆದರೆ 4 ಜನ ಸದಸ್ಯರ ಒಂದು ಕಮೀಷನ್ ಕಳುಹಿಸಿ ವಿಚಾರಣೆ ಮಾಡಿಸಿ. ಇನ್ನು ಮೆಡಿಕಲ್ ಡಿಪಾರ್ಟ್‌ಮೆಂಟ್ ವಿಷಯ : ಅದು ತಮಗೂ ಅಪ್ರಾಯಮಾನವಾದುದು.

Mr. SPEAKER.—The Hon'ble Member does not confine himself either to the time given by his whip are to the debate on Vote on Account. One or two points may be casually mentioned. But every principle and every policy cannot be dealt with on Vote on Account. If I were to read the time consumed by members on either side, it will place me in an awkward situation.

ಶ್ರೀ ಜಿ. ದುಗ್ಗಪ್ಪ.—ಏನಾದರೂ ರೂಲ್ಸ್ ಕಾನೂನುಗಳನ್ನು ಅನುಸರಿಸಿ ಮಾಡಿ. ಅನ್ಯಾಯ ಮಾಡಬೇಕಾದರೂ ಒಂದು ರೀತಿ ನೀತಿ ಇದೆ.

Mr. SPEAKER.—I object to this advising them to do something wrong.

ಶ್ರೀ ಜಿ. ದುಗ್ಗಪ್ಪ.—ಹಾಗೆ ಮಾಡುತ್ತಾ ಇದ್ದಾರೆ. ಆ ರೀತಿ ಮಾಡಲಿಕ್ಕೆ ಹೆಚ್ಚಿಗೆ ಬುದ್ಧಿ ಬೆಳೆಯುತ್ತಾ ಇದೆ. ಒಂದನ್ನು ಮಾತ್ರ ವಿಧಿಯಿಲ್ಲದೆ ಮಾನ್ಯ ಸಭೆಯ ಗಮನಕ್ಕೆ ತರಬೇಕಾಗಿದೆ. ಸ್ವಾಮಿ, ಮೆಡಿಕಲ್ ಡಿಪಾರ್ಟ್‌ಮೆಂಟಿನಲ್ಲಿ 1960ನೇ ಇಸವಿಯಲ್ಲಿ ಕೇಡರ್ ಅಂಡ್ ರೆಕ್ರ್ಯೂಟ್‌ಮೆಂಟ್ ರೂಲ್ಸನ್ನು ಮಾಡಿದರು. ರೂಲ್ಸ್ ಪ್ರಕಾರ ಅಸಿಸ್ಟೆಂಟ್ ಸರ್ಜನ್ಸ್ ಒಂದನೆಯ ಗ್ರೇಡ್ ಸುಮಾರು 437 ಜಾಗಗಳು, ಅಸಿಸ್ಟೆಂಟ್ ಸರ್ಜನ್ಸ್ ಎರಡನೆಯ ಗ್ರೇಡ್ 49 ಪೋಸ್ಟ್ಸ್. ಅಲ್ಲಿಂದ ಇಲ್ಲಿಯವರೆಗೆ ಈ ಹುದ್ದೆಗಳನ್ನು ಭರ್ತಿ ಮಾಡಲು ಏನು ಮಾಡಿದ್ದೀರಿ ಎಂದು ನಾನು ಕೇಳುತ್ತೇನೆ. 1962ನೇ ಇಸವಿಯಿಂದ ಇಲ್ಲಿಯವರೆಗೆ ಎಷ್ಟು ಜನ ವೈದ್ಯರುಗಳನ್ನು ನೀವು ನೇಮಕ ಮಾಡಿಕೊಂಡಿದ್ದೀರಿ ? ರೂಲ್ಸ್ ಪ್ರಕಾರ ಮಾಡಿದ್ದೀರಾ? ರೂಲ್ಸ್ ಪ್ರಕಾರ ಇಲ್ಲದೇ ಇದ್ದರೆ, ಪಬ್ಲಿಕ್ ಸರ್ವಿಸ್ ಇಷ್ಟು ವೇಕೆನ್ಸಿ ಇವೆ, ಇಷ್ಟು ಸ್ಥಳಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಕರೆಯಿರಿ ಎಂದು ಹೇಳಿ ಉಮೇದುವಾರರನ್ನು ಕರೆಸಿ ಇಂಟರ್‌ವ್ಯೂ ಮಾಡಿದ್ದೀರಾ ? ಇಲ್ಲವೇ ಪ್ರಮೋಷನ್ ಕೊಟ್ಟಿದ್ದೀರಾ ? ಇಲ್ಲವೇ ಇನ್ನು ಏನು ಮಾಡಿದ್ದೀರಿ? ಯಾರು ಯಾರನ್ನು ನಿಮಗೆ ಪೋಸ್ಟ್ ಮಾಡಬೇಕಾಗಿ ಬಂತು, ನೇಮಕ ಮಾಡಬೇಕಾಗಿ ಬಂತು ಅವರೆಲ್ಲರನ್ನೂ ಮಾಡಿದ್ದೀರಿ. ಎಷ್ಟು ಜನ ಇದ್ದಾರೆ ಎಂದರೆ, ಸುಮಾರು 200 ಜನಗಳ ಮೇಲೆ ಇದ್ದಾರೆ. ಅಂಕಿ ಅಂಶ ಸಹಿತ ಹೇಳಿದ್ದೇನೆ. ಹೈಕೋರ್ಟ್‌ಗೆ ರಿಟ್ ಹೋದರು. ನೀವು ಮಾಡಿರತಕ್ಕಂಥ ಪ್ರತಿಯೊಂದು ಅಪಾಯಿಂಟ್‌ಮೆಂಟ್ ಇರ್ರೆಗ್ಯುಲರ್, ರೂಲ್ಸ್ ಪ್ರಕಾರ ಇಲ್ಲ. ಕೂಡಲೇ ಬದಲಾಯಿಸಿ ಎಂದು ಹೇಳಿದರು. ನಿಮ್ಮ ಅಫಿಡವಿಟ್‌ನಲ್ಲಿ ಏನು ಹೇಳಿದ್ದೀರಿ? ಮಾಡಿರುವುದು ಇರ್ರೆಗ್ಯುಲರ್. ತಕ್ಷಣ ಛೇಂಜ್ ಮಾಡುವುದಕ್ಕೆ ಹೋಗಬೇಡಿ. ಕಾಲೇಜಿನಲ್ಲಿ ಇರುವ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂದು ಹೇಳಿದಿರಿ.

ಈಗಾಗಲೇ 1ನೆಯ ಏಪ್ರಿಲ್, 1967ನೇ ಇಸವಿಯ ವರೆಗೆಮಾತ್ರ ಅವಕಾಶ ಕೊಟ್ಟಿದ್ದಾರೆ. ಆಮೇಲೆ ಪ್ರತಿಯೊಂದು ಅಪಾಯಿಂಟ್‌ಮೆಂಟನ್ನೂ ಸಹ ಎಲ್ಲಾ ರೂಲ್ಸ್ ಪ್ರಕಾರ ಮಾಡಬೇಕು. ಪಬ್ಲಿಕ್ ಸರ್ವಿಸ್ ಕಮೀಷನ್ ಮುಖಾಂತರ ಮಾಡುತ್ತೇವೆಂದು ಹೇಳಿದ್ದಾರೆ. ಇಷ್ಟು ಇದ್ದರೂ ಸಹ ಮುಖ್ಯಮಂತ್ರಿಗಳು ಮಾರ್ಚಿ, 7ನೇಯ ತಾರೀಖು ಡೆಲ್ಲಿಗೆ ಹೋಗತಕ್ಕಂಥ ಸಂದರ್ಭದಲ್ಲಿ ಒಬ್ಬ ಡಾಕ್ಟರನ್ನು ಅಪಾಯಿಂಟ್ ಮಾಡಲು ಅಪ್ರೂವ್ ಮಾಡತಕ್ಕ ಅಗತ್ಯ ವಾದರೂ ಏನು ಇತ್ತು? ಇಲಾಖೆ ಕಾರ್ಯದರ್ಶಿಯವರಿಗೆ ಏನು ಆಸಕ್ತಿ ಇತ್ತು.? ಮುಖ್ಯ ಮಂತ್ರಿಗಳಿಗೆ ಏನು ಆಸಕ್ತಿ ಇತ್ತು? ಇದಕ್ಕೆ ಹೈಕೋರ್ಟ್ ಆರ್ಡರ್ ಇರಲಿಲ್ಲವೇ? ಇದಕ್ಕೆ ರೂಲ್ಸ್ ಇರಲಿಲ್ಲವೇ? ಸೀನಿಯಾರಿಟಿ ಲಿಸ್ಟ್ ಇರಲಿಲ್ಲವೇ? ಯಾರು ಯಾರು ಏನೇನು ಅಬ್ಜೆಕ್ಷನ್ ಹಾಕಿದ್ದರು ಎನ್ನುವುದು ಇರಲಿಲ್ಲವೇ? ಇಷ್ಟು ಆದರೂ ಸಹ 7ನೇ ಮಾರ್ಚಿ, 1967 ರಲ್ಲಿ ಡೆಲ್ಲಿಗೆ ಹೋಗಲು ಏರೋಡ್ರಾಮ್‌ಗೆ ಹೋಗುವ ಸಂದರ್ಭದಲ್ಲಿ ಅವಸರ ಅವಸರವಾಗಿ ಒಂದು ಅಪಾಯಿಂಟ್‌ಮೆಂಟ್ ಆರ್ಡರ್ ಅಪ್ರೂವ್ ಮಾಡಿದರು. ಏನು ಅವಶ್ಯಕತೆ ಇತ್ತು ಎಂದು ಕೇಳಬಹುದು. 24ನೇ ತಾರೀಖು ಆ ಇಲಾಖೆಯ ಮಂತ್ರಿಗಳು ಆರ್ಡರ್ ಮಾಡಿದರು. ಸೆಕ್ರೆಟರಿ ಹೇಳಿದರು ಇವೊತ್ತು ಮಾಡಿದ್ದು ಸರಿಹೋಗುವುದಿಲ್ಲ. ಕಾನೂನಿಗೆ ತಪ್ಪಾಗುತ್ತದೆ ಎಂದು. ಏನು ಮಾಡಬೇಕು ಎಂದು ಕೇಳಿದರೆ ರ್ಯಾಟಿಫೈ ಮಾಡಬೇಕು ಎಂದು ಹೇಳಿದರು. It was ratified when the Chief Minister was about to emplane. ಇದೂ ಯಾರಿಗೆ ಭೂಷಣ? ನಾನು ಹೇಳತಕ್ಕದ್ದು ವೆರಿಫೈ ಮಾಡಿ.

Mr. SPEAKER.—The member is shutting out opportunities to other members of the opposition.

ಶ್ರೀ ಜಿ. ದುಗ್ಗಪ್ಪ.—ಅದರಲ್ಲಿ 4–5 ಜನ ಹಿಂದುಳಿದ ವರ್ಗದ ಡಾಕ್ಟರುಗಳು ಇದ್ದಾರೆ. They are second to none: I may tell with pardonable pride that we scheduled class Members are proud of these bright chaps. ಅವರಿಗೆ ಇಲ್ಲಸಲ್ಲದ ತೊಂದರೆ ಕೊಡುತ್ತಿದ್ದಾರೆ. ಸೀನಿಯಾರಿಟಿ ಹಾಳು ಮಾಡುತ್ತಾರೆ. ಅವರಿಗಿಂತ ಜೂನಿಯರ್ ಇರುವವರನ್ನು ಅವರಮೇಲೆ ಹಾಕುತ್ತಾರೆ. Frustration has grown up and it is growing. Please do not allow this. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Dr. R. NAGANGOWDA (Hospet).—Mr. Speaker Sir, I wish to take only a few minutes to touch upon some general points, which I wish to bring to the notice of the Hon'ble Minister for Finance.

I am glad he has given a 10 years survey of the development that has taken place during all these ten years. It is a record which any State could be proud of. I must congratulate the Hon'ble Minister on that record.

While saying so, I wish to touch upon agricultural production. He has stated that the States deficit in rice is only marginal and I hope we ought to be able to make it self-sufficient in a short time. The means that are necessary for that are the points on which I wish to lay my hands. He has said that the consumption of fertilizers has gone up from 20,000 tons to 1,82,000 tons. This is a good record. But yet I wish to point out here that this is not enough to make us selfsupporting in food production. Sir, in this State, we have about 8 to 9 per cent lands under irrigation. nine per cent would bring it to the figure of about 25 lakhs of acres. Twenty-five lakhs of acres of land, to make it grow

(Dr. R. NAGANGOWDA)

food to its maximum capacity, would require considerable amount of fertilizers. Even at the rate of 1/8 ton per acre, we would require about 3 lakhs tons of fertilizers. It has been said in the Review of the Working of the Government Departments, that there is a proposal to cover 16 lakhs of acres with high yielding varieties of food crops. These 16 lakhs of acres would consume about 4 lakhs tons of fertilisers. I am mentioning these figures just to state the amount of fertilizers that we need for this State. This year, we are assured of 1.8 lakhs of tons. I wish to point out that this is not enough.

We in this country are short of fertilizers. The whole country, India as a whole is short of fertilizers. Sir, If we want to produce more food, we must have more fertilizers. What is it that we in this State' are in the Government of India are doing to produce enough fertilizers. I think the capacity of factories in this country is just about 2.5 lakhs of tons of nitrogeons fertilizers. It is not enough. In 1970 we would require 20 lakhs of tons of nitrogeneous fertilizers. We have only a few factories. We need more factories. I am glad that there is a propsed to put up a factory at Mangalore. I want to emphasise the fact here that factory must be brought into existence as early as possible because, unless we have enough fertilizers, we will not be able to grow enough food.

Sir, it was with some kind of a disappointment that I saw yesterday in the papers that the arrangements for collaboration with the American Firms has not materialised and does not look as if it is going through. I hope this Government will induce the Central Government to see that they make some arrengement to put up more factories in this country for production of fertilizers. Otherwise, there is no other way for us to produce all the food that we require. This is an important matter on which I sometimes wish our friends on the other side would also give some constructive sgggestions.

Sir, I wish to say a few words on the paragraph that the Finance Minister has written on Education. He has shown that our Secondary Schools have grown in numbers and the boys in the Secondary Schools are now about five lakhs. And he has also shown that from about 30,000, the population in colleges has gone up to 88,000. He has also shown the number of polytechni have grown from 15 to 30. Here I want to draw the attention of the Government to this important point. Only about 15 to 17 per cent of the High School boys come in to the Colleges. What happens to the rest of the boys is any body's guess. I mention this point just to state that these boys that go to High Schools instead of learning the regular three RS and a few smattering of arts and Science and things like that, if we could train them in some industry, some training as mechanics, artisans, if we could enable them immediately after the High School to go into some kind of industry, we would have spent money on our education very usefully. Many of these

boys just seek employment as clerks. It is a woeful sight to see these boys roaming about unable to get any kind of work. Similar is the position of the college boys. The number has risen from 30,000 ten years ago to 88,000. If we could give these boys going to the college some training in some industries, in some professions, which they could enter into immediately or which they could start themselves, we would have done them a very valuable service.

5-00 P.M.

A mention has been made of about 5,000 boys from backward classes being given artisan's training. This is for a period of about seven years. This is not a very big number. I wish we could increase the number of artisan classes for these backward boys and make them useful citizens producing articles, building houses, making furniture, etc.

Sir, on minor irrigation, I am glad the Minister has said that at present, there are 4,600 minor irrigation works in progress and he has promised to complete them as quickly as possible. I am glad also to know that with the help of the Government of India, 31 lift irrigation schemes are taken up under crash programme. It is very good. He has suggested that 81 more schemes will be taken on crash programme basis for the coming year 1967-68, spending about a crore of rupees. At present, our State has got a very small area under irrigation and it is necessary that we increase it as quickly as possible.

Under rural roads, the Hon'ble Minister said that they have completed about 12,000 miles in the last ten years. This is very commendable. But I want to state that there are many more rural roads that ought to be taken up and completed. I won't mention the roads here. But I know the Minister's attention has been drawn to a number of roads in our own district. Some particular mention I want to make here. During the last decade, some very good work was done in wet lands in the way of making roads. Special funds were collected in the name of Sugar Cane Cess fund and very good roads have been built. I want this to be continued and carried on all over the area that is covered by the Tungabhadra project. Unless we have quick and easy transport in these wet land areas, it will be very difficult for the cultivators to go to their fields or move their produce to the markets.

Recently the rates for water have been revised. There are some difficulties in these new rates. Especially I want to mention here the rates that are charged for tanks with a hundred acre capacity, and tanks with less than 100 acre capacity. The rates charged are different. Originally, to mention what was happening in my own district, Bellary, tanks were classified not according to the area that they irrigate, but according to the amount of water they could hold—four months tanks, six months tanks, eight months tank and like that. Some of these tanks which do not have water for more than three to four months cannot be charged at the same rate as other tanks or other irrigation sources like canals from projects are taxed.

(Dr. R. NAGANGOWDA)

There is another point which I wish to mention and that is about the co-operative movement. The Hon'ble Minister in one place said that the co-operative movement is not very strong. I am glad that he mentioned that our co-operative movement is not quite strong in many districts and that he has also noticed their condition. I hope he will be able to rectify and make them strong. He has said that for 1966-67, only twenty crores of rupees are given as short-term credit. Sir, the financial requirements of cultivators in a State like this is much greater than twenty crores of rupees. He mentioned that he would attempt to raise it to fifty crores between 1967 and 1970 *i.e.*, fifty crores of rupees per annum as short term credit. The amount of money needed by the cultivators for carrying on their cultivation operations is much more than that. It is very much more. I think we ought to be able to make these co-operative societies give all the moneys required for the financing of agricultural operations.

One more point and I would finish. Sir, I am really surprised to hear from the other side, criticism on the expansion of the agricultural department. Sir, I just want to say one thing. Sir, when I grow rice or jowar, there comes an officer and asks me for my levy. He meets me immediately. But when I want seeds, fertilisers or suggestions from the agricultural department, why should not an officer come and see me also and that would require a large number of expert trained officers. This is done in many other countries. I know that the agricultural officers in America go and talk and even camp at farmer's houses some evenings. Suppose my Honourable friend from Doddabathi has got a farm with ten cows. The Country Agent in Amrica would come and talk to him, take dinner with him and then see how his cows are yielding. If there is any of the cows yielding less milk, he would advise and give suggestions. That is how knowledge is carried on to the cultivator's house. That is the reason why I believe that there has been much increase in the agricultural production. I think we should give the agricultural department all support in this so that the department could help the cultivators in every way, both in advice and also help them to get their requirements easily from the various departmental sections. I thank you very much for the time given to me.

ಶ್ರೀ ಎನ್. ಎಸ್. ಪಾಟೀಲ್ (ಅಫಜಲ್‌ಪುರ).—ಬಡ್ಜೆಟ್ಟಿನ ವಿಚಾರವಾಗಿ ಇಲ್ಲಿ ಮಾತಾಡಲು ಅಧ್ಯಕ್ಷರು ಸ್ವಲ್ಪ ಕಾಲ ಅವಕಾಶಕೊಟ್ಟುದಕ್ಕಾಗಿ ಅವರನ್ನು ವಂದಿಸಿ ಬಡ್ಜೆಟ್ಟನ್ನು ಸಮರ್ಥಿಸುತ್ತಾ, ಕೆಲವು ಮಾತುಗಳನ್ನು ಹೇಳುತ್ತೇನೆ.

ಮೊದಲನೆಯದಾಗಿ ನಾವು ಆಹಾರದ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚು ಮಾಡಬೇಕು, ನಮ್ಮ ದೇಶದಲ್ಲಿ ಅನ್ನದ ಪರಿಸ್ಥಿತಿ ಚೆನ್ನಾಗಿ ಆಗಬೇಕು ಎಂದು ಇಲ್ಲಿ ಉದ್ದೇಶಪಟ್ಟಿದ್ದಾರೆ. ಆದರೆ ನಮ್ಮ ಉತ್ತರ ಕರ್ಣಾಟಕದ ಭಾಗದಲ್ಲಿ ಒಂದು ದೊಡ್ಡ ಯೋಜನಾ ಎಂದರೆ, ಅದು ಅಪ್ಪರ್ ಕೃಷ್ಣಾ ಪ್ರಾಜೆಕ್ಟು. ಇದರ ಸಲುವಾಗಿ ಬಡ್ಜೆಟ್ಟಿನಲ್ಲಿ ಸುಮಾರು ಹದಿನೈದು ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇಷ್ಟು ಹಣ ಇಟ್ಟರೆ ಇದನ್ನು ಹೇಗೆ

ಕಾರ್ಯಗತ ಮಾಡುತ್ತಾರೆ ಎನ್ನುವುದು ನಮಗೆ ತಿಳಿಯಲೊಲ್ಲದು. ಈ ಯೋಜನೆ ಸುಮಾರು 120 ಕೋಟಿ ರೂಪಾಯಿಗಳ ಯೋಜನೆ. ಈ ವರ್ಷದಲ್ಲಿ 15 ಲಕ್ಷ ರೂಪಾಯಿಗಳು ಎಂದು ಇಟ್ಟರೆ ನಮ್ಮ ವಿರೋಧಪಕ್ಷದ ಸದಸ್ಯರು ಈಗ ಹೇಳಿದ ಹಾಗೆ ಇದನ್ನು ಪೂರ್ತಿ ಕಾರ್ಯಗತ ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ನೇಮಿಸಿರುವ ಇಂಜಿನಿಯರುಗಳು ಇತ್ಯಾದಿ ಸಿಬ್ಬಂದಿ ಯವರಿಗೇನೇ ಅವರ ಪಗಾರ ಕೊಡುವುದಕ್ಕೆ ಆಗುತ್ತದೆ. ಮತ್ತು ಇದಕ್ಕೂ ಸಾಲದು ಎನ್ನುವುದು ತಾವು ವಿಚಾರ ಮಾಡತಕ್ಕ ಮಾತು. ಆಹಾರ ಧಾನ್ಯದ ಉತ್ಪಾದನೆ ಹೆಚ್ಚಾಗ ಬೇಕು ಮತ್ತು ನಮ್ಮ ಭಾಗದಲ್ಲಿ ಕ್ಷಾಮಕ್ಕೆ ತುತ್ತಾಗುವ ಪ್ರದೇಶಗಳಿಗೆ ಅನುಕೂಲ ಮಾಡ ಬೇಕಾದರೆ ಮೊದಲು ಅಪ್ಪರ್ ಕೃಷ್ಣಾ ಯೋಜನೆ ತೆಗೆದುಕೊಳ್ಳುವುದು ಬಹಳ ಅವಶ್ಯಕವಾಗಿದೆ. ಅಪ್ಪರ್ ಕೃಷ್ಣಾ ಯೋಜನಾ ಮಾಡಬೇಕೆಂದು ನಮ್ಮ ಪ್ರಧಾನ ಮಂತ್ರಿಗಳಾಗಿದ್ದ ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರಿಯವರ ಕೈಲಿ ಇದಕ್ಕೆ ಅಡಿಗಲ್ಲನ್ನೂ ಹಾಕಿಸಿ ಎಷ್ಟೋ ವರ್ಷಗಳಾ ದರೂ ಈ ಪ್ರಾಜೆಕ್ಟು ಕೆಲಸ ಏನೇನೂ ಆಗಲಿಲ್ಲ. ಇದಕ್ಕಾಗಿ ಒಂದೆರಡು ಸೈಟುಗಳನ್ನು ಕೂಡ ಬದಲಾಯಿಸಿದರು. ಆದರೆ ಪ್ರೋಗ್ರೆಸ್ ಏನೂ ಆಗಲಿಲ್ಲ. ಇಲ್ಲಿರುವ ಸಿಬ್ಬಂದಿಗಾಗಿ ಬರೀ ಪಗಾರ ಕೊಡುತ್ತಾ ಬಂದಿದ್ದಾರೆ. ಇದು ಯಾವ ರೀತಿ ಯೋಗ್ಯವಾಗಿದೆ ಎನ್ನುವುದು ನನಗೆ ತಿಳಿಯ ಲಿಲ್ಲ. ಎಷ್ಟೋ ಪ್ರಾಜೆಕ್ಟ್‌ಗಳಿಗಾಗಿ ಮಾಡಿರುವ ಪ್ಲಾನಿನಲ್ಲಿ ಅದನ್ನು ಕಡಿಮೆ ಮಾಡಿ ಮೊದಲಿಗೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಕೆಲಸಗಳನ್ನು ತೆಗೆದುಕೊಳ್ಳಬೇಕು ಅದರಿಂದ ಕ್ಷಾಮ ಪರಿಸ್ಥಿತಿಯೂ ಕೂಡ ಸುಧಾರಿಸುತ್ತದೆ ಮತ್ತು ನಮ್ಮ ಅನ್ನದ ಪರಿಸ್ಥಿತಿಗೆ ಕೂಡ ಉತ್ಪನ್ನ ಹೆಚ್ಚಾಗುತ್ತದೆ. ನಮ್ಮ ಭಾಗದಲ್ಲಿರುವ ನೀರಾವರಿ ಪರ್ಸೆಂಟೇಜು ನೋಡಿದರೆ ಶೇಕಡಾ ಒಂದರಷ್ಟು ಇಲ್ಲ. ಅಪ್ಪರ್ ಕೃಷ್ಣಾ ಯೋಜನೆಯನ್ನು ಸಂಪೂರ್ಣವಾಗಿ ಮಾಡಿದರೆ ಸೇಕಡ ಸುಮಾರು ಏಳು ಎಕರೆ ನೀರಾವರಿಗೆ ಬರುತ್ತದೆ. ಇದರ ಬಗ್ಗೆ ಸರ್ಕಾರದವರು ಬೇಗ ನಿರ್ಧಾರ ಮಾಡಬೇಕು. ತಮ್ಮಲ್ಲಿ ಹಣ ಇಲ್ಲದಿದ್ದರೆ ಸೆಂಟ್ರಲ್ ಗವರ್ನಮೆಂಟಿನ ಮೇಲೆ ಒತ್ತಾಯ ಮಾಡಿ ಇದಕ್ಕೆ ಸಾಲದ ರೂಪದಲ್ಲಾದರೂ ಹಣ ಪಡೆದು ಇದು ಕಾರ್ಯಗತವಾಗುವಂತೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಆಂಧ್ರ ಹಾಗೂ ಮದ್ರಾಸು ಪ್ರಾಂತಗಳಿಗಾಗಿ ಕೇಂದ್ರ ಸರಕಾರ ಸಹಾಯ ಮಾಡಿರುವುದರಿಂದ ಅವರು ಎಷ್ಟೋ ಮುಂದಾಗಿದ್ದಾರೆ. ನಮ್ಮ ಸರಕಾರದವರು ಅದೇ ರೀತಿ ಇಂತಹ ಉಪಯುಕ್ತವಾದ ಕೆಲಸಗಳನ್ನು ಮಾಡಲು ಏಕೆ ಪ್ರಯತ್ನ ಮಾಡುತ್ತಿಲ್ಲ? ನಮ್ಮಲ್ಲಿರುವ ದೌರ್ಬಲ್ಯವನ್ನು ಕೇಂದ್ರ ಸರಕಾರದವರು ತಿಳಿದುಕೊಂಡಿದ್ದಾರೆಂದು ತೋರುತ್ತೆ. ಅದನ್ನು ಸರಿಯಾಗಿ ಇಂಪ್ರೆಸ್ ಮಾಡಲು ನಮ್ಮ ಸರಕಾರಕ್ಕೆ ಶಕ್ತಿ ಇಲ್ಲವೇ ? ಮೊದಲಿಗೆ ನಮ್ಮ ಅಪ್ಪರ್ ಕೃಷ್ಣಾ ಯೋಜನೆ ಆಗಲೇಬೇಕು ಎಂದು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರದ ಮೇಲೆ ಸರಿಯಾದ ಪ್ರಭಾವ ತಂದು ಒತ್ತಾಯ ಮಾಡಿ ಈ ಕೃಷ್ಣಾ ಯೋಜನೆ ಮಾಡಬೇಕು ಮತ್ತು ಬೇಗನೆ ಮಾಡಬೇಕು ಎಂದು ಇಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಕೋಆಪರೇಷನ್ ಇಲಾಖೆಯಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈ ಇಲಾಖೆ ಬಹಳ ಚೆನ್ನಾಗಿ ನಡೆಯುತ್ತಿದೆ. ಒಂದೊಂದು ಕಡೆ ಬಹಳ ಚೆನ್ನಾಗಿ ಬೆಳೆಯುತ್ತಿದೆ. ಆದರೆ ಇದರಿಂದ ಹೆಚ್ಚು ಕೆಲಸಗಳು ಆಗುತ್ತಿಲ್ಲ. ಇನ್ನು ಮುಂದೆ ಬರೀ ಎಕ್ಸ್‌ಪ್ಯಾನ್ಷನ್ ಮಾಡುವುದಕ್ಕೆ ಬದಲಾಗಿ ಇಲ್ಲಿನ ಕೆಲಸಗಳನ್ನು ಕನ್‌ಸೋಲಿಡೇಷನ್ ರೀತಿಯಲ್ಲಿ ಮಾಡಬೇಕೆಂದು ಹೇಳುತ್ತೇನೆ. ಇದೇ ರೀತಿ ಎಜುಕೇಷನ್ ಇಲಾಖೆಯೂ ನಡೆಯುತ್ತಿದೆ. ಪಿ. ಯು. ಸಿ. ಕಾಲೇಜು ತೆರೆಯಬೇಕು ಎನ್ನುತ್ತಾರೆ. ಅಲ್ಲಿ ನೋಡಿದರೆ ಟೀಚರುಗಳೇ ಇರುವುದಿಲ್ಲ. ಕೆಲವು ಕಡೆ ಪಿ. ಯು. ಸಿ. ಕ್ಲಾಸುಗಳನ್ನು ತೆಗೆದಿದ್ದಾರೆ. ಅಲ್ಲಿ ಹುಡುಗರೇ ಇಲ್ಲ. ಇದರಿಂದ ಸರಕಾರದ ಧೋರಣೆ ಸರಿಯಾಗಿಲ್ಲ. ಆದುದರಿಂದ ಎಜುಕೇಷನ್ ಇಲಾಖೆಯಲ್ಲಿ ಹಾಗೂ ಕೋಆಪರೇಷನ್ ಇಲಾಖೆಯಲ್ಲಿ ಎಕ್ಸ್‌ಪ್ಯಾನ್ಷನ್ ಕೆಲಸಗಳನ್ನು ಮಾಡುವುದಕ್ಕೆ ಬದಲಾಗಿ

(ಶ್ರೀ ಎನ್. ಎಸ್. ಪಾಟೀಲ್)

ಕನ್‌ಸಾಲಡೇಷನ್ ಮಾಡಬೇಕು. ಈ ಸಂದರ್ಭದಲ್ಲಿ ಒಂದು ಕತೆ ಇಲ್ಲಿ ನೆನಪಿಗೆ ಬರುತ್ತದೆ. ಹಿಂದೆ ಶಿವಾಜಿ ರಾಜ್ಯವಾಳುತ್ತಿದ್ದಾಗ ಅವನು ಗುಡ್ಡ ಗುಡ್ಡಗಳಲ್ಲಿ ಹಾದು ಸಂಚರಿಸುತ್ತಿದ್ದಾಗ ಒಂದು ಗುಡ್ಡದ ಸಮೀಪದಲ್ಲಿದ್ದ ಒಂದು ಗುಡಿಸಲಿಗೆ ಊಟ ಮಾಡುವುದಕ್ಕೆ ಹೋದಾಗ ಅಲ್ಲಿ ಒಬ್ಬ ಮುದುಕಿ ಅವನಿಗೆ ಅನ್ನವನ್ನು ಊಟಕ್ಕೆ ಬಡಿಸಿದಾಗ ಅವಳು ಶಿವಾಜಿಗೆ ಅನ್ನದ ಮೇಲೆ ಸಾಂಬಾರು ಬಡಿಸುವುದಕ್ಕೆ ಹೋದಾಗ ಅದು ಪೂರ್ತಿಯಾಗಿ ಎಲೆಯಿಂದ ಹರಿದು ಹೋಯಿತು. ಇದನ್ನು ನೋಡಿ ಶಿವಾಜಿಯನ್ನು ಕುರಿತು ಆ ಮುದುಕಿ ಹೇಳಿದಳು. ಶಿವಾಜಿ ರಾಜ್ಯದಲ್ಲಿ ಅನ್ನ ಬಡಿಸಿ ಸಾಂಬಾರು ಹಾಕುವಾಗ ಗೋಲು ಮಾಡಿದರೆ ಅನ್ನದ ಮಧ್ಯದಲ್ಲಿ ಸಾಂಬಾರು ಚೆನ್ನಾಗಿ ನಿಲ್ಲುತ್ತದೆ ಎನ್ನುವುದನ್ನು ಶಿವಾಜಿ ರಾಜ್ಯದಲ್ಲಿರುವವರು ತಿಳಿದುಕೊಳ್ಳಲಾರರೇ ಎಂದು ಹೇಳಿದಳು. ಅದನ್ನು ಶಿವಾಜಿಯು ಅರಿತುಕೊಂಡು ತನ್ನ ಬುದ್ಧಿಯನ್ನು ಸರಿಯಾಗಿ ಉಪಯೋಗಿಸಿ ರಾಜ್ಯವಾಳಿದನು ಎನ್ನುವಂತೆ ನಮ್ಮ ರಾಜ್ಯದಲ್ಲಿ ಸರಕಾರ ಎಕ್ಸ್‌ಪ್ಯಾನ್‌ಷನ್ ಮಾಡುವುದಕ್ಕಿಂತ ಕನಸಾಲಡೇಷನ್ ಕೆಲಸಗಳ ಜತೆಗೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. ಈಗ ವಿದ್ಯಾ ಇಲಾಖೆಯಲ್ಲಿ ಹಾಗೂ ಕೋಆಪರೇಷನ್ ಇಲಾಖೆಯಲ್ಲಿ ಈ ರೀತಿ ಕೆಲಸಗಳು ಆಗುತ್ತಿವೆ. ಉದಾಹರಣೆಗಾಗಿ, ನಮ್ಮ ಮುಡಚಿಯಲ್ಲಿ ಒಂದು ಹೈಸ್ಕೂಲು ಇದೆ. ಆದರೆ ಅಲ್ಲಿ ಹುಡುಗರೇ ಇಲ್ಲ. ಇಲ್ಲೇಕೆ ಹೈಸ್ಕೂಲು ಬಿಲ್ಡಿಂಗು ಕೊಟ್ಟಿದ್ದಾರೆ ಎಂದು ಕೇಳಬೇಕಾಗಿದೆ. ಇಂತಹ ಪರಿಸ್ಥಿತಿ ಹೋಗಬೇಕಾದರೆ, ಮುಂದೆ ಇಂತಹ ತಪ್ಪುಗಳು ಆಗದೇ ಇರಬೇಕಾದರೆ, ಮುಂದೆ ಸಾಕಷ್ಟು ಹಣವನ್ನು ಒದಗಿಸಿಕೊಟ್ಟು ಯೋಜನೆಗಳು ಕಾರ್ಯಗತವಾಗುವಂತೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ಮಾತು ಇಲ್ಲಿ ಹೇಳಬೇಕಾಗಿದೆ. ಕೆಲವರು ನೀರಾವರಿಗೆ ಸಂಬಂಧಪಟ್ಟಂತೆ ಒಂದು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಮುನಿಸಿಪಾಲಿಟಿಗಳಿಗಾಗಿ ಎಲ್. ಐ. ಸಿ. ಯವರ ಕಡೆಯಿಂದ ಸಾಲ ಪಡೆಯು ಮಾಡುತ್ತಿದ್ದಾರೆ. ಆ ಸಾಲಕ್ಕಾಗಿ ಪ್ರತಿ ವರ್ಷ ಎಷ್ಟು ಬಡ್ಡಿಯಾಗುತ್ತದೆ ಎಂದರೆ ಸುಮಾರು ಐದು ಲಕ್ಷ ರೂಪಾಯಿಗಳಷ್ಟು ಆಗುತ್ತಿದೆ. ಇಷ್ಟು ಹಣವನ್ನು ಬರೀ ಬಡ್ಡಿಗಾಗಿ ಕೊಡುತ್ತಿದ್ದಾರೆ. ಒಂದು ಸಣ್ಣ ಮುನಿಸಿಪಾಲಿಟಿಯವರು ಐದು ಲಕ್ಷದಷ್ಟು ಬಡ್ಡಿ ಕೊಡುವುದು ಎಂದರೆ ಬಹಳ ತ್ರಾಸಾಗುತ್ತದೆ. ಇದನ್ನು ಕಾರ್ಯಗತ ಮಾಡುವುದರಲ್ಲೂ ನಿಧಾನವಾಗುತ್ತಿದೆ. ಇದಕ್ಕಾಗಿ ಹತ್ತುಸಲ ಎಸ್ಟಿಮೇಟುಗಳನ್ನು ಬದಲಾವಣೆ ಮಾಡಿದರು ಮತ್ತು ಇಲ್ಲಿರುವ ಅಧಿಕಾರಿಗಳು ಗುಲ್ಬರ್ಗಾದಿಂದ ಬೆಂಗಳೂರಿಗೆ, ಬೆಂಗಳೂರಿಂದ ಗುಲ್ಬರ್ಗಾಕ್ಕೆ ತಿರುಗುವುದರಲ್ಲೇ ಅವರ ವೇಳೆಯನ್ನು ಕಳೆದಿರುತ್ತಾರೆ. ಇದನ್ನು ಆದಷ್ಟೂ ಕಡಿಮೆ ಮಾಡಬೇಕೆಂದು ನನಗನಿಸುತ್ತದೆ. ಇದಕ್ಕಾಗಿ ಇಲ್ಲೇ ಒಂದು ಸರ್ಕಲ್ ಮಾಡಿ ಒಂದು ವರ್ಷದಲ್ಲೇ ಇಂತಹ ಸ್ಕೀಮ್‌ಗಳನ್ನು ಮಾಡಬೇಕೆಂದು ಕ್ರಮ ಗೊತ್ತುಮಾಡಿದರೆ ಅದರಿಂದ ಸ್ವಲ್ಪವಾದರೂ ಕೆಲಸಗಳಾಗುತ್ತವೆ ಮತ್ತು ದುಡ್ಡೂ ಕೂಡ ಉಳಿತಾಯವಾಗುತ್ತದೆ. ಇದನ್ನು ಮಾಡಬೇಕು. ಸಣ್ಣ ಸಣ್ಣ ಮುನಿಸಿಪಾಲಿಟಿಗೆ ಹೆಚ್ಚು ದುಡ್ಡು ಕೊಡುವಾಗ ಅಲ್ಲಿ ಆದಷ್ಟೂ ಬಡ್ಡಿ ಕಡಿಮೆಯಾಗುವಂತೆ ಮಾಡಿ ಅಲ್ಲಿ ದುಡ್ಡನ್ನು ಉಳಿಸಬೇಕು. ಮತ್ತು ಇದೇ ಸಂದರ್ಭದಲ್ಲಿ ಅಂಡರ್‌ಗ್ರೌಂಡು ಡ್ರೈನೇಜು ಬಗ್ಗೆ ಪ್ರಪೋಸಲ್ಲುಗಳು ಸರಕಾರಕ್ಕೆ ಬಂದಿದೆ. ಇದನ್ನು ಮಾಡಲು ಸ್ವಲ್ಪ ಹೆಚ್ಚು ಖರ್ಚಾದರೂ ಅದಕ್ಕೆ ಖರ್ಚು ಮಾಡಿದರೆ ಅದು ತಪ್ಪಾಗಲಾರದು. ಇದರ ಯೋಜನೆಯನ್ನು ಕೈಗೊಳ್ಳಬೇಕು. ಮತ್ತು ನಮ್ಮ ಭಾಗಕ್ಕೆ ಪ್ರತ್ಯೇಕವಾದ ಒಂದು ಪಬ್ಲಿಕ್ ವರ್ಕ್ಸ್ ಇಲಾಖೆಯವರ ಒಂದು ಸರ್ಕಲ್ ಮಾಡಬೇಕು. ಈಗ ಯಾವುದಾದರೂ ನ್ಯೂನತೆಗಳು ಯೋಜನೆಯಲ್ಲಿ ಕಂಡು ಬಂದರೆ ಸೂಪರಿಂಟೆಂಡೆಂಟು ಇಂಜನೀಯರವರಲ್ಲಿಗೆ ಹೋಗಬೇಕಾದರೆ ಬೆಂಗಳೂರಿಗೇ ಬರಬೇಕು. ಇದರಿಂದ ಕೆಲಸಗಳು ನಿಧಾನವಾಗುತ್ತವೆ. ಇಂತಹ ಡಿಲೇಗಳನು

ತಪ್ಪಿಸಲು ಅನುಕೂಲವಾಗುವಂತೆ ಒಂದು ಸರ್ಕಲ್ ಮಾಡಿ ಅಲ್ಲಿಗೆ ಒಬ್ಬರು ಸೂಪರಿಂಟೆಂಡಿಂಗ್ ಇಂಜನೀಯರನ್ನು ನೇಮಕ ಮಾಡಿದರೆ ಇಲ್ಲಿನ ಕೆಲಸಗಳು ಬೇಗನೆ ಆಗಲು ಅನುಕೂಲಗಳಾಗುತ್ತವೆ ಮತ್ತು ಇಲ್ಲಿನ ಕುಂದುಕೊರತೆಗಳನ್ನು ತಿಳಿಯಲೂ ಅನುಕೂಲವಾಗುತ್ತದೆ. ಇದಕ್ಕಾಗಿ ಇಲ್ಲಿ ಒಂದು ಸರ್ಕಲನ್ನು ಕ್ರಿಯೇಟ್ ಮಾಡಬೇಕು ಎಂದು ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ಇಷ್ಟು ಮಾತಾಡಲು ಅವಕಾಶಕೊಟ್ಟದ್ದಕ್ಕಾಗಿ ಅವರನ್ನು ವಂದಿಸುತ್ತೇನೆ ಮತ್ತು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, 1967-68ನೇ ವರ್ಷದ ಬಗ್ಗೆ ಈ ಸಭೆಯ ಮುಂದೆ ನಾನು ಮಂಡಿಸಿದ ಮುಂಗಡ ಪತ್ರದ ಬಗ್ಗೆ ಈ ಸಭೆಯ ಮಾನ್ಯ ಸದಸ್ಯರು ಮಾತನಾಡಿ, ಕೊಟ್ಟಿರತಕ್ಕ ಸೂಚನೆಗಳ ಬಗ್ಗೆ ನಾನು ಕೃತಜ್ಞನಾಗಿದ್ದೇನೆ. ಈ ಮುಂಗಡಪತ್ರದ ಮೇಲೆ ವಿರೋಧ ಪಕ್ಷದ ಸದಸ್ಯರು ಈ ಸಭೆಯಲ್ಲಿ ಹಾಗೂ ಹೊರಗಡೆ ವ್ಯಕ್ತ ಮಾಡಿದ ಪ್ರತಿಕ್ರಿಯೆಯನ್ನು ನೋಡಿದಾಗ ನನಗೇನೂ ಆಶ್ಚರ್ಯವಾಗಲಿಲ್ಲ. ಈ ಮುಂಗಡ ಪತ್ರ ಎಷ್ಟುಮಟ್ಟಿಗೆ ವಾಸ್ತವಿಕತೆಯಿಂದ ಕೂಡಿದೆ, ಎಷ್ಟು ಮಟ್ಟಿಗೆ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿಯ ನೈಜ ಚಿತ್ರವನ್ನು ಕೊಟ್ಟಿದೆ ಮತ್ತು ರಾಜ್ಯದ ಆದಾಯದ ಬಗ್ಗೆ ಅದು ತೋರಿಸಿರುವ ಆಶಾಕಿರಣ ಎಷ್ಟರಮಟ್ಟಿಗೆ ನಿಜವಾದುದು ಎಂಬುದನ್ನು ತಟಸ್ಥ ವ್ಯಕ್ತಿಗಳು ತಟಸ್ಥ ಸಂಘ ಸಂಸ್ಥೆಗಳು ಈ ಮುಂಗಡ ಪತ್ರದ ಮೇಲೆ ಮಾಡಿದಂತಹ ಪ್ರತಿಕ್ರಿಯೆಯಿಂದ ನಾವು ತಿಳಿದುಕೊಳ್ಳಬಹುದು. ವಿರೋಧಪಕ್ಷದ ಸದಸ್ಯರು ಇದನ್ನು ಅನಾವಶ್ಯಕವಾಗಿ ಟೀಕೆ ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಆದರೆ ಟೀಕೆ ಮಾಡತಕ್ಕಂಥ ಭರದಲ್ಲಿ ಅವರೂ ಕೂಡ ವಾಸ್ತವಿಕತೆಯನ್ನು ಮರೆತು ಟೀಕೆ ಮಾಡಿದ್ದಾರೆಂದು ಇಷ್ಟೇ ಹೇಳುತ್ತೇನೆ. ನನ್ನ ಮುಂಗಡ ಪತ್ರದ ಭಾಷಣವನ್ನು ಚಿಕ್ಕದು ಮಾಡಬೇಕೆಂದು ನನ್ನ ಇಚ್ಛೆಯಿತ್ತು. ಆದರೆ ನಮ್ಮ ಹೊಸ ಮೈಸೂರು ರಾಜ್ಯ ನಿರ್ಮಾಣವಾಗಿ ಹತ್ತು ವರ್ಷ ಅಂದರೆ, ಒಂದು ದಶಕ ಕಳೆದುದರಿಂದ ಈ ದಶಕದಲ್ಲಿ ನಾವು ಮಾಡಿದಂಥ ಪ್ರಗತಿ ಏನು, ನಾವು ಎಲ್ಲೆಲ್ಲಿ ಎಡವಿದ್ದೇವೆ, ತಪ್ಪಿದ್ದೇವೆ, ಇದರ ಬಗ್ಗೆ ಒಂದು ಚಿಕ್ಕ ಸಿಂಹಾವಲೋಕನ ಕೊಡತಕ್ಕಂಥಾದ್ದು ಅಗತ್ಯವಾಗಿತ್ತು. ಮತ್ತು ಈ ಮುಂಗಡ ಪತ್ರದ ಮೇಲಿನ ಭಾಷಣದಲ್ಲಿ ನಾನು ಯಾವುದೇ ರೀತಿಯ ಮುಚ್ಚುಮರೆಯಿಲ್ಲದೆ ರಾಜ್ಯಕ್ಕೆ ಸಂಬಂಧಪಟ್ಟಂತೆ ಹಣಕಾಸಿನ ಪರಿಸ್ಥಿತಿಯನ್ನು ಸ್ಪಷ್ಟವಾಗಿ ಈ ಸಭೆಯ ಮುಂದೆ ಇಡಲಿಕ್ಕೆ ಪ್ರಯತ್ನ ಮಾಡಿದ್ದೇನೆ. ಈ ಸಭೆಯ ಮಾನ್ಯ ಸದಸ್ಯರ ತಿಳುವಳಿಕೆಯಿಲ್ಲದೆ ನಾವು ಯಾವ ಕೆಲಸವನ್ನೂ ಮಾಡುವುದು ಸಾಧ್ಯವಿಲ್ಲ, ಮಾಡಕೂಡದು. ರಾಜ್ಯದ ಅನೇಕ ಸಮಸ್ಯೆಗಳ ಪರಿಹಾರದ ಬಗ್ಗೆ ಈ ಸಭೆಯ ಎಲ್ಲ ಸದಸ್ಯರ ಸಹಕಾರ ಅಗತ್ಯ. ಆದುದರಿಂದ ಒಂದು ಸ್ಪಷ್ಟವಾದ ಚಿತ್ರವನ್ನು ನನಗೆ ಸಾಧ್ಯವಾದ ಮಟ್ಟಿಗೆ ಸರಳವಾದ ಭಾಷೆಯಲ್ಲಿ ಈ ಸಭೆಯ ಮುಂದೆ ಇಡಲಿಕ್ಕೆ ಪ್ರಯತ್ನ ಮಾಡಿದ್ದೇನೆ. ಈ ಮುಂಗಡ ಪತ್ರದ ಮೇಲೆ ವಿವರವಾದ ಚರ್ಚೆಯು ಇನ್ನು ಮುಂದೆ ಆಗಲಿದೆ. ಈ ಸಭೆಯ ಮುಂದೆ ನಾವು ಕೇವಲ ನಾಲ್ಕು ತಿಂಗಳಿಗೆ ಬೇಕಾದ ಖರ್ಚಿನ ಬಗ್ಗೆ ಸಭೆಯ ಅಪ್ಪಣೆ ಕೇಳುತ್ತಿದ್ದೇವೆ. ಆದುದರಿಂದ ಇಲ್ಲಿ ಅದಂಥ ಚರ್ಚೆಯಲ್ಲಿ ಮುಂಗಡ ಪತ್ರದ ಸಂಪೂರ್ಣವಾದ ವಿಶ್ಲೇಷಣೆ ಅದರ ವಿಮರ್ಶೆ ಮಾಡುವುದಾಗಲಿ, ಅದರ ಮೇಲೆ ನಾನು ಪುನಃ ಭಾಷಣ ಮಾಡುವುದಾಗಲಿ ಈ ಸಂದರ್ಭವಲ್ಲ. ಈ ಸಭೆಯ ಮುಂದೆ ಇಟ್ಟಂಥ ಬೇಡಿಕೆಗಳ ಮೇಲೆ ಅನೇಕ ಮಾನ್ಯ ಸದಸ್ಯರು ಸ್ಥಾನಿಕ ಮತ್ತು ಕೆಲವು ಖಾತೆಗಳಿಗೆ ಸಂಬಂಧಪಟ್ಟಂತೆ ಅನೇಕ ಸಣ್ಣ ವಿಷಯಗಳನ್ನು ಹೇಳಿದರು. ಅವರು ಅನೇಕ ವಿಷಯಗಳನ್ನು ಇಲ್ಲಿ ಭಾಷಣದಲ್ಲಿ ಚರ್ಚೆ ಮಾಡಿದ್ದಾರೆ. ಅದಕ್ಕೆ ಉತ್ತರ ಕೊಡತಕ್ಕಂಥ ಸಂದರ್ಭ ಇದು ಅಲ್ಲ. ವಿವರವಾದ ಚರ್ಚೆಗೆ—ಬೇಡಿಕೆಗಳನ್ನು ಸಭೆಯ ಮುಂದೆ ಇಟ್ಟಾಗ್ಗೆ—ಅದಕ್ಕೆ ಹೆಚ್ಚು ಅವಕಾಶ ದೊರೆತು ಅನುಕೂಲವಾಗುತ್ತದೆ, ಅಂಥ ಅವಕಾಶ ಉಂಟು. ಆಗ್ಗೆ ಆಯಾಯ ಖಾತೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಮಾನ್ಯ ಸದಸ್ಯರು ಎತ್ತಿದಂಥ ಎಲ್ಲ ವಿಷಯಗಳ ಪಾಯಿಂಟುಗಳ

(ಶ್ರೀ ರಾಮಕೃಷ್ಣ ಹೆಗಡೆ)

ಬಗ್ಗೆ ಜವಾಬು ಕೊಡುತ್ತಾರೆ. ಆದುದರಿಂದ ನಾನು ಕೇವಲ ನಾಲ್ಕೈದು ಮುಖ್ಯ ವಿಚಾರ ಗಳನ್ನು ಎತ್ತಿಕೊಂಡು ಸದಸ್ಯರು ಮಾತನಾಡಿದ ವಿಷಯಗಳ ಬಗ್ಗೆ ಉತ್ತರ ಕೊಡಲಿಕ್ಕೆ ಇಂದು ಇಷ್ಟಪಡುತ್ತೇನೆ.

ಮೊದಲನೆಯದಾಗಿ ಮುಂಗಡ ಪತ್ರದಲ್ಲಿ ಅಂಕಿಅಂಶಗಳ ಮಾಯಾಜಾಲವಿದೆ ಎಂದು ಹೇಳಿದ್ದಾರೆ. ಇದು ವಾಸ್ತವಿಕವಾದ ಚಿತ್ರವನ್ನು ತೋರಿಸತಕ್ಕಂಥ ಮುಂಗಡ ಪತ್ರವಲ್ಲ, ಸಪ್ಪೆಯಾಗಿದೆ, ಅನೇಕ ವಿಷಯಗಳನ್ನು ಸರಕಾರ ಬಚ್ಚಿಡಲಿಕ್ಕೆ ಪ್ರಯತ್ನ ಮಾಡಿದೆ ಎಂದು ಕೆಲವರು ಹೇಳಿದರು. ಮಾನ್ಯ ಅಧ್ಯಕ್ಷರೇ, ಇದು ಸತ್ಯವಾದ ಮಾತಲ್ಲ. ಇದರಲ್ಲಿ ಯಾವದೇ ರೀತಿಯ ಮಾಯಾಜಾಲ ಪಸರಿಸಿ, ಈ ಸಭೆಯ ಮಾನ್ಯ ಸದಸ್ಯರಿಗೆ ಅವಾಸ್ತವ ಅರ್ಥ ಬರುವ ಹಾಗೆ ತಿಳುವಳಿಕೆ ಮಾಡಿಕೊಟ್ಟು ಈ ಮುಂಗಡಪತ್ರ ಅಂಗೀಕಾರ ಮಾಡಿಸಿಕೊಳ್ಳಬೇಕು ಎಂಬ ಉದ್ದೇಶವಿಲ್ಲ. ಈ ಮಾತು ಒಂದೇ ಒಂದು ಉದಾಹರಣೆಯಿಂದ ಸ್ಪಷ್ಟವಾಗಬಹುದು. ಕಳೆದ ಸಲ ನಾನು ಮುಂಗಡ ಪತ್ರ ಈ ಸಭೆಯ ಮುಂದೆ ಮಂಡಿಸಿದಾಗ್ಗೆ ಚಾಲೂ ವರ್ಷದ 1966–67ನೇ ಸಾಲಿನ ಬಗ್ಗೆ ಆಗ್ಗೆ ಕೂಡ ವಿರೋಧ ಪಕ್ಷದ ಅನೇಕ ಮಾನ್ಯ ಸದಸ್ಯರು ಇದೇ ರೀತಿ ಟೀಕೆ ಮಾಡಿದರು. ಮತ್ತು ಎರಡು ಕೋಟಿ ಚಿಲ್ಲರೆ ಸರ್ಪ್ಲಸ್ (ಉಳಿತಾಯ) ಏನು ತೋರಿಸಿದೆವೋ ಅದು ಕೇವಲ ಅಸತ್ಯವಾದುದು, ಅವಾಸ್ತವವಾದುದು, ಅದು ನಿಜವಾದ ಉಳಿತಾಯವಲ್ಲ ಎಂದು ಅವರು ಟೀಕೆ ಮಾಡಿದ್ದಾರೆ. ನಾನು ಸಭೆಯ ಮುಂದೆ ಚಾಲೂ ವರ್ಷದ ರಿವೈಸ್ಡ್ ಎಸ್ಟಿಮೇಟ್ಸ್ ಇಟ್ಟಿದ್ದೇನೆ. ರಿವೈಸ್ಡ್ ಎಸ್ಟಿಮೇಟ್ಸ್ ಪ್ರಕಾರ ಯಾವ ಉಳಿತಾಯ ಸುಮಾರು ಎರಡೂವರೆ ಕೋಟಿ ಆಗಬಹುದು ಎಂದು ಬಜೆಟ್ಟಿನಲ್ಲಿ ಹೇಳಿದ್ದೆನೋ ಅದು ಸುಮಾರು ಐದು ಕೋಟಿ ಹೆಚ್ಚು ಆಗುತ್ತದೆ. ಇದನ್ನು ನಾನು ತೋರಿಸಿದ್ದೇನೆ. ಇದೊಂದೇ ಮಾತಿನಿಂದ ನೈಜವಾದ ಅಂಕಿಅಂಶಗಳಿವೆ ಎಂಬುದನ್ನು ಮಾನ್ಯ ಸದಸ್ಯರು ಇದರಿಂದ ಮನವರಿಕೆ ಮಾಡಿಕೊಳ್ಳಬಹುದು ಎಂದು ನಾನು ತಿಳಿಯುತ್ತೇನೆ. ಮಾನ್ಯ ಸದಸ್ಯರು ಸ್ವಾಭಾವಿಕವಾಗಿ ಈ ರಾಜ್ಯ ಸರಕಾರದ ಮೇಲೆ ಸಾಲದ ಭಾರ ವಿಪರೀತವಾಗಿದೆ ಎಂದು ಹೇಳಿ ಅದಕ್ಕಾಗಿ ಭಯ ವ್ಯಕ್ತ ಮಾಡಿದರು. ಸಾಲದ ಭಾರ ಹೆಚ್ಚಿದೆ ಎಂದು ನಾನು ಒಪ್ಪುತ್ತೇನೆ. ಸಾಲದ ಭಾರ ಯಾವ ರೀತಿ ಹೆಚ್ಚಿದೆಯೋ ಅದೇ ರೀತಿ ನಮ್ಮ ಆಸ್ತಿ ಕೂಡ ಹೆಚ್ಚಿದೆ. ಇದೊಂದು ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತಂದಿದ್ದೇನೆ. ಈಗ ನಾವು ಅಭಿವೃದ್ಧಿಯ ಒಂದು ಕಾಲವಲ್ಲಿ ಇರುವಾಗ ಹೆಚ್ಚು ಹೆಚ್ಚು ಕೆಲಸಗಳಾಗಬೇಕು, ವ್ಯವಸಾಯದಲ್ಲಿ ಹೆಚ್ಚಿನ ಪ್ರಗತಿ ಯಾಗಬೇಕು, ಔದ್ಯೋಗೀಕರಣ ಇನ್ನೂ ಹೆಚ್ಚು ರಭಸದಿಂದ ನಡೆಯಬೇಕು, ನೀರಾವರಿ ಯೋಜನೆಗಳು ಹೆಚ್ಚು ಹೆಚ್ಚು ಆಗಬೇಕು ಮತ್ತು ಅದೇ ರೀತಿ ಸಮಾಜದ ಕಲ್ಯಾಣ ಕೆಲಸದಲ್ಲಿ ಹಿಂದೆ ಬೀಳಕೂಡದು ಎಂದು ಹೇಳುವಂಥ ಒಂದು ಕಳಕಳಿ ನಮಗೆ ಇರುವಾಗ ನಾವು ಸಾಲ ಮಾಡದೆ ಇದನ್ನು ಮಾಡಬೇಕು ಎಂದು ಹೇಳುವುದು ಸಾಧ್ಯವಾದ ಮಾತಲ್ಲ.

5-30 P. M.

ಆದರೆ ಒಂದು ವಿಚಾರ ಮಾತ್ರ ತಿಳಿಸುತ್ತೇನೆ, ಅದೇನೆಂದರೆ ಯಾವ ಹಣವನ್ನು ಸಾಲವಾಗಿ ತೆಗೆದು ಕೊಂಡಿದ್ದೇವೋ ಆ ಹಣವನ್ನು ಎಷ್ಟರಮಟ್ಟಿಗೆ ಪರ್ಮನೆಂಟ್ ಅಸೆಟ್ಸ್ ಬಿಲ್ಡ್ ಮಾಡುವುದಕ್ಕೆ ಖರ್ಚುಮಾಡಿದ್ದೇವೆ, ಎಷ್ಟು ಪ್ರೊಡಕ್ಟಿವ್ ಸ್ಕೀಮುಗಳಲ್ಲಿ ಉತ್ಪಾದಕ ಯೋಜನೆಗಳಲ್ಲಿ ನಾವು ಖರ್ಚುಮಾಡಿದ್ದೇವೆ ಎಂದು ಹೇಳುವುದನ್ನು ಗಮನಿಸಬೇಕು. ಸಾಲ ತಂದ ಹಣವನ್ನು ಉತ್ಪಾದನಾ ಯೋಜನೆಗಳಿಗಿಂತ ನಾನ್-ಪ್ಲಾನ್ಡ್ ಸ್ಕೀಮುಗಳಲ್ಲಿ ಹೆಚ್ಚು ಖರ್ಚುಮಾಡ ಲಾಗಿದೆಯೇ ಎಂಬುದನ್ನು ಗಮನಿಸಬೇಕು. ಆಗಲೇ ಈ ವಿಚಾರವನ್ನು ಮುಂಗಡ ಪತ್ರಕ್ಕೆ ಸಂಬಂಧಪಟ್ಟ ಭಾಷಣದಲ್ಲಿ ಸ್ಪಷ್ಟಪಡಿಸಿದ್ದೇನೆ. ಬರುವ ವರ್ಷದ ಕೊನೆಯಲ್ಲಿ 330 ಕೋಟಿ

ರೂಪಾಯಿಗಳು ಸಾಲ ನಮ್ಮ ಸರಕಾರದ್ದು ಇರುತ್ತದೆ, ಒಟ್ಟು ನಮ್ಮ ಆಸ್ತಿ 516 ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗುತ್ತದೆ ಎಂಬುದನ್ನು ಮರೆಯಬಾರದು. ಮತ್ತು ಯಾವ ಯಾವ ದೊಡ್ಡ ದೊಡ್ಡ ಯೋಜನೆಗಳಲ್ಲಿ ಇದರ ಬಹು ಭಾಗವನ್ನು ವಿನಿಯೋಗಿಸಿದ್ದೇವೋ ಆ ದೊಡ್ಡ ಯೋಜನೆಗಳು ನಿರೀಕ್ಷಿತ ಫಲವನ್ನು ಕೊಡುವುದಕ್ಕೆ ಪ್ರಾರಂಭಿಸಿವೆ. ಉದಾಹರಣೆಗೆ ಎರಡನ್ನು ಹೇಳುತ್ತೇನೆ. ಶರಾವತಿ ಯೋಜನೆ, ಈ ಯೋಜನೆಗೆ ಒಟ್ಟು ಸುಮಾರು 100 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗುತ್ತದೆ. ಈಗ ಸುಮಾರು 75-80 ಕೋಟಿ ರೂಪಾಯಿಗಳು ಖರ್ಚಾಗಿರಬಹುದು. ಈ 75-80 ಕೋಟಿ ಖರ್ಚುಮಾಡಿರುವ ಯೋಜನೆಯಿಂದ ಬರುವ ವರ್ಷ ಎಷ್ಟು ಆದಾಯ ಬರಬಹುದೆಂದು ನಿರೀಕ್ಷೆಯಿದೆ ಎಂಬುದನ್ನು ನೋಡಬೇಕು. ಅದು 9 ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿದೆ. ಈ ಯೋಜನೆ ಸಂಪೂರ್ಣವಾಗಿ ಅದರಿಂದ ವಿದ್ಯುಚ್ಛಕ್ತಿಯ ಸಹಾಯವನ್ನು ನಾವು ಯಾವ ದಿವಸ ಪಡೆಯುತ್ತೇವೋ ಆಗ ಈ ಒಂದೇ ಯೋಜನೆಯಿಂದ ನಮಗೆ ಕನಿಷ್ಠ ಪಕ್ಷ 18 ಕೋಟಿ ರೂಪಾಯಿಗಳ ಉತ್ಪತ್ತಿ ಬರುತ್ತದೆ. ಯಾವ ಯೋಜನೆಗೆ 100 ಕೋಟಿ ರೂಪಾಯಿಗಳ ಖರ್ಚಿದೆ ಅದಕ್ಕೆ ಪ್ರತಿ ವರ್ಷ 18 ಕೋಟಿ ರೂಪಾಯಿಗಳ ಉತ್ಪತ್ತಿ ತರುವುದು ಅಂದರೆ ಅದಕ್ಕೆ ಸಾಲಮಾಡಿ ಖರ್ಚುಮಾಡಿದರೂ ಸಾರ್ಥಕವಾಗುತ್ತದೆ ಎಂದು ಹೇಳುವುದಕ್ಕೆ ಯಾವುದೇ ರೀತಿಯ ಅಭ್ಯಂತರವಿಲ್ಲ. ಅದೇರೀತಿ ತುಂಗಭದ್ರಾ ಯೋಜನೆಗೆ ಸಂಬಂಧಪಟ್ಟಂತೆ ಡ್ಯಾಂ ಆಗಿ 10 ವರ್ಷಗಳಿಗಿಂತ ಹೆಚ್ಚು ಕಾಲವಾಯಿತು. ಆದರೆ ಡ್ಯಾಂ ಮುಗಿದ ತಕ್ಷಣ ಫಲಕಾರಿಯಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಯಾವರೀತಿ ಡ್ಯಾಂ ಕಟ್ಟುವುದು ಅಗತ್ಯವೋ ಅದೇ ರೀತಿ ದೊಡ್ಡ ಕಾಲುವೆ ಮತ್ತು ಸಣ್ಣ ಕಾಲುವೆ ಮಾಡಬೇಕಾದ್ದು ಮತ್ತು ಕೊನೆಯ ಸರ್ವೆ ನಂಬರಿನವರೆಗೆ ನೀರು ದೊರೆಯುವ ಹಾಗೆ ಮಾಡುವುದು, ಈ ನೀರಿನ ಅನುಕೂಲವನ್ನು ರೈತರು ಸರಿಯಾಗಿ ಪಡೆಯಲು ಅವಕಾಶಮಾಡುವುದು, ರೈತರಿಗೆ ಬೇಕಾದ ಗೊಬ್ಬರ, ಬೀಜ, ಸಾಲಮುಂತಾದುವುಗಳನ್ನು ಕೊಡುವುದು ಅಗತ್ಯ. ಇದೇನೂ ಸಣ್ಣ ಸಮಸ್ಯೆಯಲ್ಲ. ಯಾವರೀತಿ ಆರ್ಥಿಕ ಸಮಸ್ಯೆ ಇದೆಯೋ ಅದೇ ರೀತಿ ಇದು ಮಾನಸಿಕ ಸಮಸ್ಯೆ ಎಂದು ಹೇಳಿದರೆ ತಪ್ಪಾಗಲಾರದು. ದೊಡ್ಡ ಯೋಜನೆಗಳು ಈಗ ಫಲ ಕೊಡುತ್ತಿವೆ. ಯಾವುದೇ ಒಂದು ರಾಜ್ಯ, ಅಷ್ಟೇಕೆ ಯಾವುದೇ ಒಂದು ರಾಷ್ಟ್ರ ಅಭಿವೃದ್ಧಿ ಪಥದಲ್ಲಿ ಮುನ್ನಡೆಯುವಾಗ ಸಾಲದ ಭಾರ ಹೆಚ್ಚಾಯಿತು, ಸಾಲ ತರಬಾರದು ಎಂದು ನಿರ್ಧಾರ ಮಾಡಿದರೆ ಅದು ಆತ್ಮಘಾತಕತನವಾಗಬಹುದು. ಪುನಃ ಹೇಳುತ್ತೇನೆ, ಮಾನ್ಯ ಸದಸ್ಯರು ಈಗ ನಾವು ಯಾವ ಯೋಜನೆಗಳಿಗೆ ಹಣ ಕೊಟ್ಟಿದ್ದೇವೋ ಆ ಯೋಜನೆಗಳು ಅನುತ್ಪಾದಕವಾದ ಯೋಜನೆಗಳು, ವ್ಯರ್ಥವಾದ ಯೋಜನೆಗಳು ಎಂದೇನು ಹೇಳಿದರೋ ಆ ತಪ್ಪನ್ನು ಸರಕಾರ ತಿದ್ದಿಕೊಳ್ಳುವುದಕ್ಕೆ ಸಿದ್ಧ. ಆದರೆ ಈಗ ಸಾಲ ತಂದು ಕೆಲಸ ಮಾಡಬಾರದು ಎಂದು ಹೇಳಿದರೆ ಅದು ಅಷ್ಟೊಂದು ಸಮಂಜಸವಾದ ಟೀಕೆಯಲ್ಲ ಎಂದು ಹೇಳುತ್ತೇನೆ. ಸರಕಾರ ಸಾಲವೆತ್ತುವುದಕ್ಕೆ ಒಂದು ಮಿತಿಯಿರಬೇಕು ಮತ್ತು ಈ ಸಭೆಯ ಮನ್ನಣೆ ಪಡೆದು ಮಿತಿಯನ್ನು ನಿರ್ಧಾರಮಾಡಬೇಕು ಎಂದು ಸಿದ್ಧವೀರಪ್ಪನವರು ಹೇಳಿದರು ಮತ್ತು ಇದಕ್ಕೆ ಬೆಂಬಲವಾಗಿ ಸಂವಿಧಾನದಲ್ಲಿರುವುದನ್ನು ಹೇಳಿದರು. ಸಂವಿಧಾನದಲ್ಲಿ ಒಂದು ಅವಕಾಶವಿದೆ, ಆದರೆ ಅದು ಕಡ್ಡಾಯವಾದ ಪ್ರಾವಿಷನ್ ಅಲ್ಲ. ನಮ್ಮ ಮೈಸೂರು ದೇಶವೇ ಏಕೆ, ಬೇರೆ ಯಾವ ರಾಜ್ಯವೂ ಕೂಡ ತಾನು ಎತ್ತುವ ಸಾಲದ ಮೇಲೆ ಒಂದು ಮಿತಿ ಹಾಕಿಕೊಂಡಿಲ್ಲ. ಬೇರೆಯವರು ತಪ್ಪು ಮಾಡಿದರೆ ನಾವೇಕೆ ಮಾಡಬೇಕೆಂದು ಸಿದ್ಧವೀರಪ್ಪನವರು ಹೇಳಿದರು. ಅದು ವಾಸ್ತವ. ಈ ರೀತಿ ಮಿತಿ ಹಾಕಿದರೆ ನಾವು ಪಂಚವಾರ್ಷಿಕ ಯೋಜನೆಯನ್ನು ನಡೆಸುವುದು ಹೇಗೆ, ಪ್ರತಿ ವರ್ಷ ಬರುವ ಹಣದ ಅಡಚಣೆಯನ್ನು ಹೇಗೆ ನಿವಾರಣೆಮಾಡಬೇಕು ಮುಂತಾದ್ದೆಲ್ಲವನ್ನೂ ಬಹಳ ಗಂಭೀರವಾಗಿ ಆಲೋಚನೆಮಾಡಬೇಕು. ಇದಕ್ಕಾಗಿ ನಾವು ಔಪಚಾರಿಕವಾಗಿ ಯಾವ ಒಂದು ಸಂಸ್ಥೆಯ ಅಭಿಪ್ರಾಯ ಪಡೆದು ಸಾಲದಮೇಲೆ ಒಂದು ಮಿತಿ ಹಾಕಿಲ್ಲ. ನಿಜವಾಗಿ ನೋಡಿದರೆ ಸಂಪೂರ್ಣ ವಿಚಾರ ಸಭೆಗೆ ಗೊತ್ತಾಗುತ್ತದೆ. ಪ್ರತಿ ವರ್ಷ ನಾವು ಬಡ್ಜೆಟ್ ಮಾಡುವಾಗ ಈ ವಿಚಾರ

(ಶ್ರೀ ರಾಮಕೃಷ್ಣ ಹೆಗಡೆ)

ಚರ್ಚೆಯಾಗುತ್ತದೆ, ಅದಕ್ಕೆ ಸಮಾಧಾನ ನೀಡಲಾಗುತ್ತದೆ. ಮೊನ್ನೆತಾನೆ ಈ ಸಭೆಗೆ ವಿವರಣೆ ಸಾಕಷ್ಟು ಕೊಟ್ಟರೂ ಕೂಡ ಇಷ್ಟೊಂದು ಟೀಕಿಸಿರುವುದು ಸರಿಯಾಗಿ ಕಾಣುವುದಿಲ್ಲ.

ಇನ್ನು ಬೇರೆ ಕೆಲವು ಸದಸ್ಯರು ಭೂ ಕಂದಾಯ ಮತ್ತು ಪಾನನಿರೋಧದ ವಿಚಾರದಲ್ಲಿ ಮಾತನಾಡಿ ನಿರ್ದಿಷ್ಟವಾಗಿ ಸರ್ಕಾರದ ನಿಲುವನ್ನು ಹೇಳಬೇಕೆಂದು ಸೂಚಿಸಿದರು. ನಾನು ಹೇಳುವುದು ಸ್ಪಷ್ಟವಾಗಿದೆ. ಅದರಲ್ಲಿ ಯಾವುದೇ ರೀತಿಯ ಅಸ್ಪಷ್ಟತೆ, ಅನುಮಾನ ಇದೆ ಎಂದು ನನಗನ್ನಿಸುವುದಿಲ್ಲ. ಆದರೆ ಇದರ ಪರಿಣಾಮ ಯಾವರೀತಿಯಾಗುತ್ತದೆ ಎಂದು ಇನ್ನೂ ಕೆಲವು ತಪಶೀಲು ನೋಡಿ ವಿವರವನ್ನು ತಿಳಿದು ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಉದಾಹರಣೆಗೆ ಕಂದಾಯದ ವಿಚಾರ. ಈಗಿರುವರೀತಿಯ ಕಂದಾಯವನ್ನು ನಾವು ತೆಗೆದುಹಾಕಬೇಕೆಂದಿರುವುದು ಸ್ಪಷ್ಟವಾದ ನಿರ್ಧಾರ. ಆದರೆ ಕಂದಾಯವನ್ನು ತೆಗೆದು ಹಾಕಿದರೆ ಅದರಿಂದ ಉಂಟಾಗುವ ಕೆಲವು ಸಮಸ್ಯೆಗಳನ್ನು ನಾವು ಯೋಚನೆಮಾಡಿ ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಕೂಡ ನಾನು ನನ್ನ ಭಾಷಣದಲ್ಲಿ ಹೇಳಿದ್ದೇನೆ. ಈಗ ಪ್ರತಿವರ್ಷ ಕಂದಾಯ ಮತ್ತು ಸೆಸ್ ಸೇರಿ ಸುಮಾರು 6 ಅಥವಾ 6½ ಕೋಟಿ ರೂಪಾಯಿಗಳು ಬರಬಹುದು. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಕಂದಾಯದಿಂದಬರುವ ಹಣವನ್ನು ನಮ್ಮ ಉತ್ಪತ್ತಿಯ ಬಾಬುಗಳಲ್ಲಿ ಸೇರಿಸಿದ್ದೇವೆ. ಅದರಲ್ಲಿ ಸುಮಾರು 30–35 ಕೋಟಿ ರೂಪಾಯಿ ಹುಟ್ಟುವಳಿ ಈ ಬಾಬಿನಿಂದ ಇದೆಯೆಂದು ಕಾಣಿಸಿದ್ದೇವೆ. ಈಗ ಈ ಕಂದಾಯವನ್ನು ತೆಗೆದರೆ ಯಾವರೀತಿ ಆ ಬಾಬತಿನಿಂದ ಬರುವ ಹಣ ತುಂಬಬೇಕು ಎಂಬುದನ್ನು ಪರಿಶೀಲಿಸಬೇಕು. ಇದೊಂದನ್ನೂ ಯೋಚನೆಮಾಡದೆ ನಾವು ಕಂದಾಯವನ್ನು ತೆಗೆದುಹಾಕುತ್ತೇವೆಂದು ಹೇಳಿದರೆ, ನಮ್ಮ ನಾಲ್ಕನೆಯ ಯೋಜನೆಗೆ ಕಷ್ಟವಾಗುತ್ತದೆ. ಅಲ್ಲದೆ ನಮ್ಮ ಪಂಚಾಯಿತಿ ರಾಜ್ಯ ಸಂಸ್ಥೆಗಳಿಗೆ. ತಾಲ್ಲೂಕು ಬೋರ್ಡು ಗಳಿಗೆ ಕಂದಾಯದಲ್ಲಿ ಶೇಕಡ 60 ಭಾಗ ಕೊಡುವುದಿದೆ, ಕಂದಾಯ ತೆಗೆದರೆ ಆ ಭಾಗದ ಹಣ ಹೇಗೆ ಆ ಸಂಸ್ಥೆಗಳಿಗೊದಗಿಸಬೇಕು, ಶಾನುಭೋಗರನ್ನು ತೆಗೆಯುವುದರಿಂದ ಆಗುವ ಖರ್ಚನ್ನು ಹೇಗೆ ಸರಿದೂಗಿಸಬೇಕು, ಲ್ಯಾಂಡ್ ರಿಕಾರ್ಡ್ಸ್ ಕೆಲಸ ಹೇಗೆ ನಡೆಸಬೇಕು, ಎಂಬ ಎಲ್ಲಾವಿಚಾರ ಗಳನ್ನೂ ಕೂಲಂಕಷವಾಗಿ ವಿಮರ್ಶೆಮಾಡಿ ಮುಂದಿನ ಕ್ರಮ ತೆಗೆದುಕೊಳ್ಳಬೇಕೇ ಹೊರತು ಬೇರೆ ಯಾವೊಂದು ಅಸ್ಪಷ್ಟತೆಯೂ ಇಲ್ಲ.

ಅದರಂತೆ ಪಾನನಿರೋಧದ ವಿಚಾರದಲ್ಲೂ ಕೂಡ ಅಸ್ಪಷ್ಟತೆಇದೆ ಎಂದು ಅನಿಸಿಲ್ಲ. ಈಗ ಪಾನನಿರೋಧದ ವಿಚಾರದಲ್ಲಿ ಭಿನ್ನಾಭಿಪ್ರಾಯ ಇದೆ, ಇದೇ ಸಂದರ್ಭದಲ್ಲಿ ಈ ಸಭೆಯಲ್ಲಿ ಅನೇಕ ಜನ ಸದಸ್ಯರು ಪರವಾಗಿ ಹೇಳಿದ್ದಾರೆ, ವಿರೋಧವಾಗಿಯೂ ಹೇಳಿದ್ದಾರೆ. ಅದರಂತೆಯೇ ಪ್ರೆಸ್‌ನಲ್ಲು ಮತ್ತು ಪ್ಲಾಟ್ ಫಾರಂ ಮೇಲೂ ಅನೇಕ ರೀತಿಯಲ್ಲಿ ಅಭಿಪ್ರಾಯಗಳು ವ್ಯಕ್ತಮಾಡ ಲ್ಪಟ್ಟಿವೆ. ಈಗ ಇದನ್ನು ಯಾವ ರೀತಿ ಎಷ್ಟುಮಟ್ಟಿಗೆ ಬದಲಾವಣೆ ಮಾಡಬೇಕು, ಯಾವ ರೀತಿ ಬದಲಾವಣೆ ಮಾಡಬೇಕು ಎನ್ನುವುದನ್ನು ಯೋಚನೆ ಮಾಡಿ ಮುಂದಿನ ಕ್ರಮವನ್ನು ತಗೆದುಕೊಳ್ಳ ಬೇಕಾಗುತ್ತದೆ, ಇದಕ್ಕೆ ಸ್ವಲ್ಪ ಅವಕಾಶಬೇಕು.

ಶ್ರೀ ವಾಟಳ್ ನಾಗರಾಜ್.—ಪಾನನಿರೋಧದ ಬಗ್ಗೆ ಸ್ಪಷ್ಟವಾಗಿ ಹೇಳಲಿಲ್ಲ. ಕಂದಾಯ ರದ್ದು ಮಾಡುತ್ತೇವೆ ಅನ್ನುವ ಬಗ್ಗೆ ಸ್ಪಷ್ಟವಾಗಿ ಹೇಳಲಿಲ್ಲ, ಸುಮ್ಮನೆ ಹೀಗೆ ಮೋಸ ಮಾಡುವ ರೀತಿಯಲ್ಲಿ ಸ್ಟೇಟ್‌ಮೆಂಟ್ ಮಾಡುತ್ತಾ ಇದ್ದಾರೆ. ಮದರಾಸ್‌ನಲ್ಲಿ ನೋಡಿ ಯಾವ ರೀತಿ ಮಾಡುತ್ತಾ ಇದ್ದಾರೆ? ಇವರು ಹೇಳುತ್ತಾ ಇರುವುದನ್ನು ಕೇಳಿದರೆ ನನಗೆ ವ್ಯಥೆಯಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಿಗೆ ವ್ಯಥೆಯಾದರೆ ನಾನೇನೂಮಾಡಲಿಕ್ಕೆ ಆಗು ವುದಿಲ್ಲ. ಅವರು ಏನೋ ಸರ್ಕಾರದವರು ಮೋಸ ಮಾಡುತ್ತಾರೆ ಅನ್ನುವ ರೀತಿಯಲ್ಲಿ ಹೇಳಿದರು, ಇದರಂತಹ ಮೋಸದ ಮಾತು ಬೇರೆ ಯಾವುದೂ ಇಲ್ಲ. ಬಹುಶಃ ಅದು ಮಾಡುವಂತಹದು

